ELEMENTS OF GEOGRAPHY

IN CANARESE.

BY THE REV. B. RICE.

ಭೂಗೋಳಶಾಸ್ತ್ರಸಾರ.

ಬೆಂಗಳೂರಲ್ಲಿರುವ

ರೈಸ್ ಪಾದರಿಯಿಂದ ಬರೆಯಲ್ಪಟ್ಟದ್ದು.

BANGALORE:

PRINTED FOR THE SCHOOL BOOK SOCIETY;

AT THE WESLEYAN MISSION PRESS.

1848.

CONTENTS.

INTRODUCTION.

DESCRIPTION OF COUNTRIES.

APPENDIX.

SCRIPTURE GEOGRAPHY.

ಸೂಚನೆ.

ಮುಂಭಾಗ.

ದೇಶಗಳ ವಿವರಗಳು.

ಔಂ ಭಾಗ.

ಸತ್ಯವೇದದಲ್ಲಿ ಹೇಳಿರುವ ದೇಶಗಳು.

ಪಕ್ಕ.

—o—

ELEMENTS OF GEOGRAPHY.

ಭೂಗೋಳ ಶಾಸ್ತ್ರಸಾರ.

INTRODUCTION.

ಮುಂಭಾಗ.

ಭೂಮಿಯನ್ನು ಕುರಿತ ವಿವರವು, ಭೂಗೋಳ ಶಾಸ್ತ್ರ.

SECTION 1.

೧. ಅಧ್ಯಾಯ.

Form of the Earth.

ಭೂಮಿಯ ರೂಪ.

೧. ಭೂಮಿ ಗುಂಡಾಗಿದೆ. ಇದಕ್ಕೆ ಸಾಕ್ಷಿ ಏನಂದರೆ, 1. Globular

೧) ನಾವು ಸಮುದ್ರದ ದಡದಲ್ಲಿ ನಿಂತು ದೂರದಲ್ಲಿ ಬರುವ ಹಡಗವನ್ನು ನೋಡಿದರೆ ಮೊದಲು ಅದರ ಪಟಸ್ತಂಭದ ಕೊನೆ ಮಾತ್ರ ಕಾಣುವದು. ಆಮೇಲೆ ಅದು ಬರಬರ ಸಮೀಪವಾಗಿ ಸೇರುವಾಗ ಅದರ ಪಟಗಳು ತೋರುವವು. ತರುವಾಯ ಅದು ಇನ್ನು ಹತ್ತಿರ ಬಂದಮೇಲೆ ಹಡಗವೆಲ್ಲಾ ಕಾಣಿಸುವದು. ಭೂಮಿ ಗುಂಡಾಗಿಲ್ಲದಿದ್ದರೆ ಹೀಗಿರಕೂಡದು. ಭೂಮುಖ ಸಮವಾಗಿದ್ದರೆ ಹಡಗವು ಎಷ್ಟು ದೂರದಲ್ಲಿ ಕಾಣ

1.) Appearance of an approaching ship from the sea shore.

ಬಂದಾಗ್ಯೂ ದೊಡ್ಡದಾಗಿರುವ ಅದರ ಕೆಳಗಿನ ಭಾಗವು ಮೊದಲು ತೋರುವದೇ ಹೊರ್ತು ಚಿಕ್ಕದಾಗಿರುವ ಅದರ ಪಟಸ್ತಂಭದ ತೊನೆ ತೋರುವದಿಲ್ಲ. ಆದರೆ ಭೂಮಿ ಗುಂಡಾಗಿರುವದರಿಂದ ಹಡಗನ್ನು ಧಡದಮೇಲೆ ನಿಂತುಕೊಂಡು ನೋಡುವವನ ಕಣ್ಣಿಗೂ ನಡಿವೆ ಯಿರುವ ನೆಲ ಉಬ್ಬಾಗಿರುತ್ತದೆ. ಇದರಿಂದ ಹಡಗವು ಮೊದಲು ದೂರದಲ್ಲಿ ಕಾಣಿಸುವಾಗ ಅದರ ಕೆಳಗಿನ ಭಾಗವು ತೋರದೆ ಮೇಲಿರುವ ಅದರ ಪಟಸ್ತಂಭದ ತೊನೆ ತೋರುವದು.

2.) Circum navigation of the globe. ೨) ಮತ್ತು ಅನೇಕ ಹಡಗದವರು ಒಂದು ಸ್ಥಳದಿಂದ ಹೊರಟು ಪಶ್ಚಿಮವಾಗಿ ನೆಟ್ಟಗೆ ತಮ್ಮ ಹಡಗಗಳನ್ನು ನಡಿಸಿ ತಾವು ಹೊರಟ ಸ್ಥಳಕ್ಕೆ ತಿರಿಗಿ ಸೇರಿದ್ದಾರೆ.

3.) Eclipse of the Moon 3) ಇದಲ್ಲದೆ ಚಂದ್ರನಿಗೆ ಗ್ರಹಣವಾಗುವಾಗ ಭೂಮಿ ಗುಂಡಾಗಿದೆ ಎಂದು ಚನ್ನಾಗಿ ತೋರುತ್ತದೆ. ಹ್ಯಾಗಂದರೆ, ಭೂಮಿಯು ತಿರುಗುತ್ತಿರುವಾಗ ಅದು ಸೂರ್ಯನಿಗೂ ಚಂದ್ರನಿಗೂ ಸರಿಯಾಗಿ ಮಧ್ಯದಲ್ಲಿ ಬಂದರೆ ಅದರ ನೆರಳು ಚಂದ್ರನಮೇಲೆ ಬೀಳುವದು. ಇದೇ ಚಂದ್ರಗ್ರಹಣಕ್ಕೆ ಕಾರಣವು. ಆದಕಾರಣ ಅಂಥ ಗ್ರಹಣವಾಗುವಾಗ ಚಂದ್ರನಮೇಲೆ ಕಾಣಿಸುವ ಭೂಮಿಯ ನೆರಳು ಯಾವಾಗಲು ಗುಂಡಾಗಿರುವದನ್ನು ನಾವು ನೋಡುವದರಿಂದ ಭೂಮಿಯ ರೂಪ ಗುಂಡಾಗಿದೆ ಎಂದು ಸಂದೇಹವಿಲ್ಲದೆ ನಿಶ್ಚಯಿಸಬೇಕು.

2. Flat appearance of the Earth's surface accounted for. ೨. ಭೂಮಿಯು ಅನುಮಾನವಿಲ್ಲದೆ ಗುಂಡಾದ ವಸ್ತುವಾದಾಗ್ಯೂ ಅದರ ಮೇಲೆ ವಾಸಮಾಡುವ ನಮಗೆ ಸಮವಾಗಿ ತೋರುವದೇ ಹೊರ್ತು ಗುಂಡಾಗಿ ತೋರುವದಿಲ್ಲ. ಇದು ಯಾತಕ್ಕಂದರೆ ನಮ್ಮ ಪ್ರಮಾಣವನ್ನು ಭೂಮಿಯ ಪ್ರ

ಮಾಣವನ್ನು ಸರಿನೋಡಿದರೆ ಅದು ಬಹಳ ದೊಡ್ಡದು. ನಾವು ಅಲ್ಪಸ್ವಲ್ಪವು. ಆದದರಿಂದ ಅದರ ನಿಜವಾದ ರೂಪ ನಮಗೆ ಕಾಣಿಸುವದಿಲ್ಲ. ಬೆಟ್ಟದಮೇಲೆ ಕೂತುಕೊಳ್ಳುವ ಚಿಕ್ಕ ನೊಣಕ್ಕೆ ಬೆಟ್ಟದರೂಪ ಚನ್ನಾಗಿ ತೋರುವದೋ. ಎಷ್ಟುಮಾತ್ರವಿಲ್ಲವು. ಹೀಗೆಯೇ ಭೂಮಿಯಮೇಲೆ ಸಂಚರಿಸುತ್ತಿರುವ ಅಲ್ಪರಾದ ನಮಗೆ ಅದರ ರೂಪ ತೋರದು.

3. ಭೂಮಿಯು ಗುಂಡಾಗಿದ್ದರೂ ಅದರ ಮೇಲಿನಿಂದ ಯಾವ ವಸ್ತುವಾದರು ಬೀಳುವದಿಲ್ಲ. ಯಾತಕ್ಕೆಂದರೆ ತನ ಬಳಿಗೆ ಎಲ್ಲಾ ವಸ್ತುಗಳನ್ನು ಎಳಕೊಳ್ಳುವ ಬಲವು ಭೂಮಿಗೆ ವುಂಟು. ಭೂಮಿ ಹೀಗೆ ಸಮಸ್ತವನ್ನು ಎಳಿಯುವದರಿಂದ ಸಮಸ್ತ ವಸ್ತುಗಳು ತನ್ನನ್ನು ಹತ್ತಿಕ್ಕೊಳ್ಳ ಮಾಡುತ್ತದೆ. 3. Reason why bodies do not fall off from the Earth.

—o—

SECTION 2.

೨. ಅಧ್ಯಾಯ.

Structure of the Earth.

ಭೂಮಿಯ ಸ್ವಭಾವವು.

೧. ಭೂಮಿಯು ಟೊಳ್ಳಾಗಿದೆಯೆಂದು ಕೆಲವು ವಿದ್ವಾಂಸರು ಹೇಳುತ್ತಾರೆ. ಟೊಳ್ಳಾಗಿದೆಯೋ ಘಟ್ಟಿಯಾಗಿದೆಯೋ ಇದನ್ನು ಕುರಿತು ಗೊತ್ತಿಲ್ಲ. 1. Centre of the Earth.

೨. ಭೂಮಿಯ ಮೇಲ್ಭಾಗವು ಮೊದಲುಗೊಂಡು ಕೆಳಗೆ ಸ್ವಲ್ಪ ದೂರದ ಪರ್ಯಂತರ ವಿದ್ವಾಂಸರು ಶೋಧಿಸಿ 2. Crust of the Earth.

ಧಾರೆ. ಇಷ್ಟುವರಿಗೂ ಬೇರೆಬೇರೆ ಮಣ್ಣುಗಳೂ ಗುಡ್ಡಗಳೂ ಹುಟ್ಟಿದ್ದಾಗಿದೆ.

3. Metals & precious stones.

೩. ಗುಡ್ಡಗಳಲ್ಲಿ ವಿಧವಿಧವಾದ ರತ್ನಗಳೂ ಬೆಳ್ಳಿ ಬಂಗಾರ ಕಬ್ಬಿಣ ಸೀಸ ಮೊದಲಾದ ಲೋಹಗಳೂ ಉಂಟು.

4. Surface of the Earth. Land and Water.

೪. ಭೂಮಿಯ ಮೇಲ್ಭಾಗದಲ್ಲಿ ಒಂದೊಂದುಕಡೆ ನೆಲವು, ಒಂದೊಂದುಕಡೆ ನೀರು ಉಂಟು. ನೀರು ನೆಲಕ್ಕಿಂತ ಹೆಚ್ಚು. ಭೂಮಿಯನ್ನು ಮೂರು ಪಾಲು ಮಾಡಿದರೆ, ನೀರು ಎರಡುಪಾಲಾಗಿರುವದು.

5. Salt and fresh water

೫. ಸಮುದ್ರದನೀರು ಉಪ್ಪಾಗಿದೆ. ಮೇಘಗಳಿಂದ ಬಿದ್ದು ಕೆರೆ ನದಿಗಳಲ್ಲಿ ಸೇರುವ ನೀರು ಸಿಯಾಗಿದೆ.

6. The Sea.

೬. ಸಮುದ್ರಗಳ ಮೇಲ್ಭಾಗವನ್ನು ನೋಡಿದರೆ ಎಲ್ಲೆಲ್ಲಿಯು ಮಟ್ಟವಾಗಿದೆ. ಅದರ ತೆರೆಗಳು ಯಾವಾಗಲು ಕಲ್ಲೋಲವಾಗಿವೆ. ನಿತ್ಯ ಅದು ಕ್ರಮವಾಗಿ ದಡಗಳ ಹತ್ತಿರ ಉಬ್ಬುವದೂ ತಗ್ಗುವದೂ ಉಂಟು.

7. Diversified appearance of the land

೭. ಭೂಮಿಯ ಮೇಲ್ಭಾಗವು ಮಟ್ಟವಾಗಿಲ್ಲ. ಅಲ್ಲಲ್ಲಿ ಎತ್ತರವಾಗಿಯೂ ಅಲ್ಲಲ್ಲಿ ತಗ್ಗಾಗಿಯೂ ಇದೆ.

8. Its elevation above the Sea.

೮. ಭೂಮಿಯ ಮಟ್ಟವು ಸಮುದ್ರದ ಮಟ್ಟವು ಒಂದೇ ಅಲ್ಲ. ಭೂಮಿಯೆಲ್ಲಾ ಸಮುದ್ರಕ್ಕಿಂತ ಸ್ವಲ್ಪ ಎತ್ತರವಾಗಿದೆ.

9. Vegetation.

೯. ಸಕಲ ಜೀವರಾಶಿಗಳಿಗೆ ಉಪಯೋಗವಾಗಿ ದೇವರು ಭೂಮಿಯ ಮೇಲೆಲ್ಲಾ ಹುಲ್ಲು ಪಲ್ಯ ಗಿಡ ಮರಗಳನ್ನು ಬೆಳಸಿದ್ದಾನೆ.

10. The Atmosphere.

೧೦. ಜೀವರಾಶಿಗಳು ಉಸುರು ಬಿಡತಕ್ಕ ಅಂತರಿಕ್ಷವು ಭೂಮಿಯನ್ನು ಸುತ್ತಿಕೊಳ್ಳುತ್ತದೆ. ಈ ಅಂತರಿಕ್ಷ

ವು ಹೆಚ್ಚುಕಡಿಮೆ ೫೦ ಮೈಲುಗಳ ಎತ್ತರವಾಗಿ ಭೂಮಿಯ ಮೇಲುಗಡೆಯನ್ನು ಸುತ್ತಿಕೊಂಡಿದೆ.

೧೧. ಭೂಮಿಯಮೇಲೆ ಬೇಕಾದ ನೀರು ಹೊಯ್ಯುವದಕ್ಕೆ ಮೇಘಗಳುಂಟು. ಇವುಗಳಿಂದ ಬೀಳುವ ಮಳೆಯಿಂದ ನೆಲವು ತೇವವಾಗಿ ಚೆನ್ನಾಗಿ ಪೈರು ಬೆಳೆಯುವದು. ಮತ್ತು ನೀರು ಭೂಮಿಯೊಳಗೆ ಸೇರಿ ಜಲಬುಗ್ಗೆಗಳಾಗುತ್ತವೆ. ಅಲ್ಲಲ್ಲಿ ತಗ್ಗಾದ ಸ್ಥಳಗಳಲ್ಲಿ ನೀರು ನಿಂತು ಕೆರೆಗಳಾಗುತ್ತವೆ. ಇನ್ನು ಬೇರೆ ಸ್ಥಳಗಳಲ್ಲಿ ನದಿಗಳಾಗಿ ಸಮುದ್ರಕ್ಕೆ ಸೇರುತ್ತದೆ. 11. The Clouds.

೧೨. ಭೂಮಿಯಿಂದ ಏರುವ ನಾತಗಳನ್ನು ಚದರಿಸಿ ಅಂತರಿಕ್ಷವನ್ನು ನಿರ್ಮಲ ಮಾಡುವದಕ್ಕೂ ಮೇಘಗಳನ್ನು ಬಡಿದು ಅವು ಬೇಕಾದ ಸ್ಥಳಗಳಲ್ಲಿ ಮಳೆಯನ್ನು ಸುರಿಸಮಾಡುವದಕ್ಕೂ ಗಾಳಿ ವುಂಟು. 12. Wind.

೧೩. ಭೂಮಿ ಸೂರ್ಯನಿಂದ ಬೆಳಕನ್ನೂ ತಾಪವನ್ನೂ ಹೊಂದುತ್ತದೆ. 13. The Sun.

೧೪. ರಾತ್ರಿಕಾಲದಲ್ಲಿ ಚಂದ್ರನಿಂದ ಬೆಳಕಾಗುತ್ತದೆ. 14. The Moon.

—o—

SECTION 3.

೩. ಅಧ್ಯಾಯ.

Magnitude of the Earth.

ಭೂಮಿಯ ಪ್ರಮಾಣವು.

---

೧. ಭೂಮಿಯ ಸುತ್ತಲು ಸ್ವಲ್ಪ ಹೆಚ್ಚುಕಡಿಮೆ ೨೪,೦೧೦ ಮೈಲುಗಳ ದೂರವಾಗಿದೆ. ಇದಕ್ಕೆ ಭೂಮಿಯ 1. Circumference.

ಸುತ್ತಳತೆ ಯೆಂದು ಹೇಳಲ್ಪಡುವದು. ಒಂದು ಮೈಲು ಅಂದರೆ ೧೭೬೦ ಗಜಗಳು, ಇಲ್ಲವೇ ಹೆಚ್ಚುಕಡಿಮೆ ಒಂದು ಘಳಿಗೆ ದಾರಿ.

2. Diameter ೨. ಅಡ್ಡವಾಗಿ ಭೂಮಿಯನ್ನು ಅಳದರೆ ಸ್ವಲ್ಪ ಹೆಚ್ಚುಕಡಿಮೆ ೮೦೦೦ ಮೈಲುಗಳ ದೂರವಾಗಿದೆ. ಇದಕ್ಕೆ ಭೂಮಿಯ ನಡುವಿನಳತೆಯೆಂದು ಹೇಳಲ್ಪಡುವದು.

—o—

SECTION 4.

೪. ಅಧ್ಯಾಯ.

Revolution of the Earth.

ಭೂಮಿಯ ಚಲನೆಗಳು.

1. The Earth a planet. ೧. ಭೂಮಿ ಒಂದು ಗ್ರಹವಾಗಿದೆ. ಬೇರೆ ೧೦ ಗ್ರಹಗಳ ಸಂಗಡ ಸೇರಿದೆ. ಆದದರಿಂದ ಭೂಮಿ ಕೂಡ ೧೧ ಗ್ರಹಗಳುಂಟು. ಇವು ಯಾವವಂದರೆ, ೧. ಬುಧ (Mercury,) ೨. ಶುಕ್ರ (Venus,) ೩. ಭೂಮಿ (The Earth,) ೪. ಮಂಗಳ (Mars,) ೫. ವೆಸ್ತ (Vesta,) ೬. ಜೂನೊ (Juno,) ೭. ಸೀರೀಸ್ (Ceres,) ೮. ಪಲ್ಲಸ್ (Pallas,) ೯. ಬೃಹಸ್ಪತಿ (Jupiter,) ೧೦. ಶನಿ (Saturn,) ೧೧. ಹರ್ಷೆಲ್ (Herschel.)

The planets enumerated.

2. Their motion round the Sun. ೨. ಈ ಗ್ರಹಗಳೆಲ್ಲಾ ಸೂರ್ಯನ ಸುತ್ತಲು ತಿರುಗುತ್ತವೆ. ದೇವರು ಅವಕ್ಕೆ ನೇಮಿಸಿರುವ ದಾರಿಗಳಲ್ಲಿ ಕ್ರಮ

ಕ್ರಮವಾಗಿ ಸೂರ್ಯನನ್ನು ಸುತ್ತಿಕೊಳ್ಳುತ್ತವೆ. ಬುಧನ ದಾರಿ ಬೇರೆ ಗ್ರಹಗಳ ದಾರಿಗಿಂತ ಸೂರ್ಯನಿಗೆ ಸಮೀಪವಾಗಿದೆ. ಹರ್ಷೆಲ್ ಗ್ರಹದ ದಾರಿ ಬೇರೆ ಎಲ್ಲಾ ಗ್ರಹಗಳ ದಾರಿಗಿಂತ ಸೂರ್ಯನಿಗೆ ದೂರವಾಗಿದೆ. ಭೂಮಿಯು ಮೂರನೇ ಸ್ಥಳದಲ್ಲಿ ತಿರುಗುತ್ತದೆ. ಭೂಮಿ ಸೂರ್ಯನಿಗೆ ಒಂಭತ್ತು ಕೋಟಿ ಐವತ್ತು ಲಕ್ಷ (೯,೫೦,೦೦,೦೦೦) ಮೈಲುಗಳ ದೂರವಾಗಿದೆ.

Earth's position & distance.

3. ಭೂಮಿ ಸೂರ್ಯನ ಸುತ್ತಲು ತಿರುಗುವದು ನಿಜವಾಗಿದ್ದರೂ ಸೂರ್ಯನು ತಿರುಗುತ್ತಾನೆಂದು ಕಣ್ಣಿಗೆ ತೋರುವದೇ ಹೊರತು ಭೂಮಿ ತಿರುಗುವಹಾಗೆ ತೋರುವದಿಲ್ಲ. ಇದು ಹ್ಯಾಗೆಂದರೆ ಒಬ್ಬನು ಬಂಡಿಯಲ್ಲಿ ಕೂತುಕೊಳ್ಳುವಾಗ ಆ ಬಂಡಿಯನ್ನು ಎಳಿಯುವ ಎತ್ತುಗಳು ಬೇಗ ಮುಂದಕ್ಕೆ ಓಡಿಹೋದರೆ ದಾರಿಯ ಸಮೀಪದಲ್ಲಿರುವ ಮರ ಮೊದಲಾದವುಗಳು ಹಿಂದಕ್ಕೆ ಅಷ್ಟುಬೇಗ ಸಂಚಾರ ಮಾಡಿದಹಾಗೆ ಬಂಡಿಯಲ್ಲಿ ಕೂತುಕೊಳ್ಳುವವನಿಗೆ ತೋರುವದು. ಹೀಗೆಯೇ ಭೂಮಿಯು ಪಶ್ಚಿಮದಿಂದ ಪೂರ್ವ ದಿಕ್ಕಿಗೆ ಸೂರ್ಯನ ಸುತ್ತಲು ತಿರುಗುವಾಗ ಸುಮ್ಮಗಿರುವ ಸೂರ್ಯನು ಪೂರ್ವ ದಿಕ್ಕಿನಿಂದ ಪಶ್ಚಿಮ ದಿಕ್ಕಿನ ವರೆಗೂ ತಿರಿಗಿದಹಾಗೆ ಭೂಮಿಯ ಮೇಲಿರುವ ನಮಗೆ ಕಾಣಿಸುವದು.

3. Why the Sun appears to us to move.

೪. ಭೂಮಿ ಸೂರ್ಯನ ಸುತ್ತಲು ತಿರುಗಲಾಗಿ ಚಕ್ರವು ತನ್ನ ಅಚ್ಚಿನಮೇಲೆ ಹ್ಯಾಗೆ ತಿರುಗುತ್ತದೆಯೋ ಹಾಗೆಯೇ ಭೂಮಿಯು ತನ್ನ ಅಚ್ಚಿನ (Axis,) ಮೇಲೆ ತಿರಿಗಿಕೊಂಡು ಹೋಗುತ್ತದೆ. ಭೂಮಿ ಒಂದುಸುತ್ತು ತಿರುಗುವ ಕಾಲ ಒಂದು ದಿನ. ಆದದರಿಂದ ಇದಕ್ಕೆ ಭೂಮಿಯ ದಿನಗತಿಯೆಂದು ಹೇಳಲ್ಪಡುವದು.

4. Diurnal revolution of the Earth

5. Its annual revolution.

೫. ಭೂಮಿ ಒಂದುಸಾರಿ ಸೂರ್ಯನ ಸುತ್ತಲು ತಿರುಗುವ ಕಾಲ ಒಂದು ವರುಷ. ಇದಕ್ಕೆ ಭೂಮಿಯ ಸಂವತ್ಸರದ ಗತಿಯೆಂದು ಹೇಳಲ್ಪಡುವದು.

6. Why the Earth does not appear to us to move.

೬. ಭೂಮಿ ಯಾವಾಗಲು ತಿರುಗುತ್ತಿದ್ದರೂ ತಿರಿಗಿದ ಹಾಗೆ ನಮಗೆ ತೋರದು. ಹೇಗೆಯೇ ಹಡಗವು ಸಮುದ್ರದ ಮೇಲೆ ಬಹಳ ತೀವ್ರವಾಗಿ ಹೋಗುತ್ತಿರುವಾಗ ಅದರೊಳಗಿರುವವರು ಹೊರಗೆ ನೋಡಿಕೊಳ್ಳದಿದ್ದರೆ ಹಡಗ ಸಂಚಾರ ಮಾಡುತ್ತದೆಂದು ನೆನಸರು. ಯಾಕೆಂದರೆ ಅವರು ಅದಕ್ಕೆ ಅಂಟಿಕೊಂಡಿದ್ದಾರೆ. ಮತ್ತು ಹಡಗ ಬಹು ಸರಾಳವಾಗಿ ನೀರಿನಲ್ಲಿ ಹೋಗುತ್ತದೆ. ಆದಕಾರಣ ಆಕಾಶದಲ್ಲಿ ಸರಾಳವಾಗಿ ಸಂಚರಿಸುವ ಈ ಭೂಮಿಗೆ ಅಂಟಿಕೊಂಡಿರುವ ನಮಗೆ ಅದರ ಚಲನೆ ತೋರದಿದ್ದಾಗ್ಯೂ ಆಶ್ಚರ್ಯವಿಲ್ಲ.

7. Cause of day and night.

೭. ಭೂಮಿ ತನ್ನನ್ನು ಸುತ್ತಿಕೊಳ್ಳುವದರಿಂದ ರಾತ್ರಿ ಹಗಲು ಆಗುತ್ತದೆ. ಹ್ಯಾಗಂದರೆ, ಅದು ಸುತ್ತಿಕೊಳ್ಳುತ್ತಿರುವಾಗ ಯಾವಕಡೆ ಸೂರ್ಯನಿಗೆ ಎದುರಾಗಿ ಬರುತ್ತದೋ ಆಕಡೆಯಲ್ಲಿ ಬೆಳಕಾಗುತ್ತದೆ. ಮಿಕ್ಕಾದ ಸ್ಥಳಗಳಲ್ಲಿ ಕತ್ತಲಿರುವದು. ಇನ್ನು ಸುತ್ತಿಕೊಳ್ಳುತ್ತಾ ಬರಲು, ಸೂರ್ಯನಿಗೆ ಎದುರಾಗಿದ್ದಕಡೆ ಹಿಂದಕ್ಕೆ ಹೋಗಿ ಅಲ್ಲಿ ಕತ್ತಲಾಗುವದು. ಮುಂಚೆಹಿಂದೆ ಇದ್ದಕಡೆ ಮುಂದಕ್ಕೆ ಬಂದು ಸೂರ್ಯನಿಗೆ ಎದುರಾಗಿ ಸೇರುವದರಿಂದ ಅಲ್ಲಿ ಬೆಳಕಾಗುತ್ತದೆ.

8. Of the seasons.

೮. ಭೂಮಿ ಸೂರ್ಯನ ಸುತ್ತಲು ಸ್ವಲ್ಪ ವಾರೆಯಾಗಿ ತಿರುಗುವದರಿಂದ ಬೇರೆಬೇರೆ ಋತುಗಳಾಗುತ್ತವೆ. ಹ್ಯಾಗಂದರೆ, ಭೂಮಿ ಸೂರ್ಯನ ಸುತ್ತಲು ತಿರುಗುತ್ತಾ ಬರುವಾಗ ಆಗಾಗ್ಯೆ ಅದರ ಕಿರಣಗಳು ಭೂಮಿಯಮೇಲೆ ನೆಟ್ಟಗಾಗಿ

ಯೂ, ಆಗಾಗ್ಯೆ ವಾರೆಯಾಗಿಯೂ, ಬೀಳುವವು. ಯಾವ್ಯಾವ ದೇಶಗಳ ಮೇಲೆ ಅವು ನೆಟ್ಟಗಾಗಿ ಬೀಳುವವೋ ಆ ದೇಶಗಳಲ್ಲಿ ಆ ಕಾಲದಲ್ಲಿ ಹೆಚ್ಚಾದ ಸೆಖೆಯಾಗುವದು. ಯಾವ್ಯಾವ ಸೀಮೆಗಳಲ್ಲಿ ಅವು ವಾರೆಯಾಗಿ ಬೀಳುವವೋ ಆ ಸೀಮೆಗಳಲ್ಲಿ ಆ ಕಾಲದಲ್ಲಿ ಸೆಖೆ ಕಡಿಮೆಯಾಗುವದು.

—o—

SECTION 5.

೫. ಅಧ್ಯಾಯ.

Representation of the Earth on Globes and Maps.

ಗೋಳಗಳಿಂದಲೂ ಭೂಪಟಗಳಿಂದಲೂ ಭೂಮಿಯ ವಿವರವನ್ನು ತೋರಿಸುವದು.

---

೧. ಭೂಮಿಯ ಮೇಲಿರುವ ವಿಧವಿಧವಾದ ದೇಶ ಪಟ್ಟಣ ಸಮುದ್ರ ದ್ವೀಪ ಮೊದಲಾದವುಗಳನ್ನು ಗೋಳಗಳಿಂದಲೂ ಭೂಪಟಗಳಿಂದಲೂ ತೋರಿಸುವದುಂಟು. 1. Use of Globes and Maps.

೨. ಗೋಳಗಳು ಭೂಮಿಯ ರೂಪದ ಹಾಗೆಯೇ ಮಾಡಲ್ಪಡುವವು. ಭೂಮಿ ಹ್ಯಾಗೆ ಸುತ್ತಿಕೊಳ್ಳುತ್ತದೋ ಹಾಗೆಯೇ ಅವುಗಳನ್ನು ತಿರಿಗಿಸ ಕೀಲುವುಂಟು. ಮತ್ತು ಅವುಗಳ ಮೇಲೆ ದೇಶ ಮೊದಲಾದವುಗಳು ಬರೆಯಲ್ಪಟ್ಟವೆ. 2. Globes.

೩. ಭೂಪಟಗಳಲ್ಲಿ ಭೂಮಿಯ ರೂಪವು ಚನ್ನಾಗಿ ಕಾಣಿಸುವದಿಲ್ಲ. ಅವುಗಳಿಂದ ಅದರ ಚಲನೆ ತೋರಿಸುವ 3. Maps.

ದಕ್ಕಾಗದು. ಆದರೆ ಅವುಗಳ ಮೇಲೆ ಅದರ ದೇಶ ಮೊದಲಾದವುಗಳು ಸ್ಪಷ್ಟವಾಗಿ ಬರೆಯಲ್ಪಟ್ಟವೆ.

4. Map of the World.

೪. ಭೂಮಿಯ ಮೇಲಿರುವ ದೇಶಗಳನ್ನೆಲ್ಲಾ ಒಂದೇ ಪಟದಲ್ಲಿ ತೋರಿಸಬೇಕಾಗಿರುವಾಗ ಎರಡು ಚಕ್ರ ಪಂಕ್ತಿಗಳ ಒಳಗಡೆಯಲ್ಲಿ ಗುಂಡಾಗಿರುವ ಭೂಮಿಯ ಎರಡು ಪಕ್ಕಗಳಲ್ಲಿರುವ ದೇಶ ಮೊದಲಾದವುಗಳು ತೋರಿಸಲ್ಪಡುವವು. ಬಲಗಡೆಯಲ್ಲಿರುವ ಚಕ್ರಪಂಕ್ತಿಗೆ ಪೂರ್ವದ ಅರ್ಧ ಗೋಳವೆಂದು (Eastern Hemisphere,) ಎಡಗಡೆಯಲ್ಲಿರುವ ಚಕ್ರಪಂಕ್ತಿಗೆ ಪಶ್ಚಿಮದ ಅರ್ಧ ಗೋಳವೆಂದು (Western Hemisphere,) ಹೇಳಲ್ಪಡುವದು.

5. Geographical lines.

೫. ದೇಶಗಳ ಸ್ಥಳ ಚನ್ನಾಗಿ ತಿಳಿಯುವದಕ್ಕೆ ಗೋಳಗಳ ಮೇಲೆಯೂ ಭೂಪಟಗಳ ಮೇಲೆಯೂ ಕೆಲವು ಪಂಕ್ತಿಗಳನ್ನು ಬರೆಯುವರು.

6. Equator.

೬. ಹ್ಯಾಗಂದರೆ, ಭೂಮಿಯ ಮಧ್ಯದಲ್ಲಿ ಮಧ್ಯರೇಖೆ ಎಂಬುವದು ಬರುತ್ತದೆ.

7. Parallels of Latitude

೭. ಇದಕ್ಕೆ ಸರಿಯಾಗಿ ಒಂದೊಂದು ಅರ್ಧ ಗೋಳಿನಲ್ಲಿ ಉತ್ತರ ದಿಕ್ಕಿಗೂ ದಕ್ಷಿಣ ದಿಕ್ಕಿಗೂ ೯೦ ಪಂಕ್ತಿಗಳು ಬರುತ್ತವೆ. ಇವಕ್ಕೆ ಅಗಲದಳತೆಯ ಪಂಕ್ತಿಗಳೆಂಬುವ ಹೆಸರುಂಟು.

8. Of Longitude.

೮. ಮಧ್ಯರೇಖೆಯನ್ನು ೩೬೦ ವಿಭಾಗಗಳಾಗಿ ವಿಂಗಡ ಮಾಡಿ ಭೂಮಿಯ ಅಚ್ಚಿನ ಉತ್ತರದ ಮೊನೆಯಿಂದ (North Pole,) ಅದರ ದಕ್ಷಿಣದ ಮೊನೆಯ (South Pole,) ವರಿಗೂ ಒಂದೊಂದು ವಿಭಾಗಕ್ಕೆ ಒಂದೊಂದು ಪಂಕ್ತಿ ಬರದು ಇವಕ್ಕೆ ಉದ್ದದಳತೆಯ ಪಂಕ್ತಿಯೆಂದು ಹೇಳುವರು.

9. Degrees.

೯. ಒಂದೊಂದು ವಿಭಾಗ ಹೆಚ್ಚುಕಡಿಮೆ ೬೯॥ ಮೈಲುಗಳ ದೂರವನ್ನು ತೋರಿಸುವದು. ಈ ಪಂಕ್ತಿಗಳ ಸಹಾಯದಿಂದ ಒಂದು ದೇಶವಾಗಲಿ ಪಟ್ಟಣವಾಗಲಿ ದ್ವೀಪವಾಗಲಿ ಇಂಥಿಂಥಾ ದಿಕ್ಕಿನಲ್ಲಿ ಇಂಥಿಂಥಾ ಸ್ಥಳದಲ್ಲಿ ಇದೆಯೆಂದೂ ಆ ಸ್ಥಳಕ್ಕೂ ಇನ್ನೊಂದು ಸ್ಥಳಕ್ಕೂ ಇಷ್ಟು ದೂರವುಂಟೆಂದು ಗೊತ್ತಾಗಿ ತಿಳಿಯುವದಕ್ಕಾಗುತ್ತದೆ.

10. Torrid Zone.

೧೦. ಮಧ್ಯರೇಖೆಗೆ ಉತ್ತರ ದಕ್ಷಿಣ ಕಡೆಗಳಲ್ಲಿ ಅದಕ್ಕೆ ೨೩॥ ವಿಭಾಗಗಳ ದೂರದಲ್ಲಿ ಅಯನರೇಖೆ (Tropics,) ಯೆಂಬುವ ಪಂಕ್ತಿಗಳು ಬರುತ್ತವೆ. ಈ ಪಂಕ್ತಿಗಳ ನಡುವೆ ಯಿರುವ ದೇಶಗಳೆಲ್ಲಾ ಬಹು ಉಷ್ಣ ದೇಶಗಳು.

11. Temperate Zone.

೧೧. ಉತ್ತರ ದಕ್ಷಿಣ ಕಡೆಗಳಲ್ಲಿ ಅಯನ ರೇಖೆಯಿಂದ ೪೩ ವಿಭಾಗಗಳ ಆಚೆಗೆ ಬರುವ ದೇಶಗಳು ಅಷ್ಟು ಉಷ್ಣವಾದ ದೇಶಗಳು ಅಲ್ಲ. ಅಷ್ಟು ಶೀತವಾದ ದೇಶಗಳು ಅಲ್ಲ. ಶೀತೋಷ್ಣಗಳು ಒಟ್ಟಾಗಿರುವ ಸ್ಥಳಗಳು.

12. Frigid Zone.

೧೨. ಅವಕ್ಕೆ ಆಚೆ ಯಿರುವ ದೇಶಗಳು, ಉತ್ತರ ದಕ್ಷಿಣಗಳಲ್ಲಿ, ಭೂಮಿಯ ಅಚ್ಚಿನ ಉತ್ತರ ದಕ್ಷಿಣಗಳ ಕೊನೆಗಳ ಪಟ್ಟಿಗೂ, ಬಹು ಶೀತಸ್ಥಳಗಳು.

13. Use of a Map of the World.

೧೩. ಭೂಗೋಳ ಪಟದಲ್ಲಿ ಹೀಗೆ ಭೂಮಿಯಲ್ಲಿರುವ ದೇಶ ಮೊದಲಾದವುಗಳ ವಿವರವೆಲ್ಲಾ ತೋರಿಸಲ್ಪಡುವದು.

14. Of separate Maps.

೧೪. ಬೇರೆಬೇರೆ ದೇಶಗಳನ್ನು ಇನ್ನು ವಿಸ್ತಾರವಾಗಿಯೂ ವಿವರವಾಗಿಯೂ ಬೇರೆಬೇರೆ ಪಟಗಳಿಂದ ತೋರಿಸುವದುಂಟು.

15. Position of the four points on Maps.

೧೫. ಭೂಪಟಗಳಲ್ಲಿ ನಾಲ್ಕು ದಿಕ್ಕುಗಳನ್ನು ತೋರಿಸುವ ರೀತಿ ಹ್ಯಾಗಂದರೆ, ಪಟದ ಬಲಗಡೆಯಲ್ಲಿ ಪೂ

ರ್ವದಿಕ್ಕಿನ ದೇಶಗಳು, ಎಡಗಡೆಯಲ್ಲಿ ಪಶ್ಚಿಮವಾದವುಗಳೂ, ಮೇಲ್ಗಡೆಯಲ್ಲಿ ಉತ್ತರವಾದವುಗಳೂ, ಕೆಳಗಡೆಯಲ್ಲಿ ದಕ್ಷಿಣವಾದವುಗಳೂ, ಬರೆಯಲ್ಪಡುವವು.

SECTION 6.
೬. ಅಧ್ಯಾಯ.

Geographical Terms.
ಭೂಗೋಳ ಶಾಸ್ತ್ರದಲ್ಲಿ ಪ್ರಯೋಗಿಸಲ್ಪಡುವ ಶಬ್ದಾರ್ಥಗಳು.

---

1. Continent. ೧. ಭೂಮಿಯಲ್ಲಿ ವಿಸ್ತಾರವಾದ ಭಾಗಕ್ಕೆ ಖಂಡವೆಂದು ಹೇಳಲ್ಪಡುವದು.

2. Country. ೨. ಅದಕ್ಕಿಂತ ಕಡಿಮೆಯಾದ ಭಾಗಗಳಾಗಿರುವಂಥ ಬೇರೆಬೇರೆ ಜನರು ವಾಸಮಾಡುವಂಥ ಸ್ಥಳಗಳಿಗೆ ದೇಶಗಳೆಂದು ಹೇಳುವದುಂಟು.

3. Island. ೩. ನೀರು ಸುತ್ತಿಕೊಂಡಿರುವ ದೇಶಕ್ಕೆ ದ್ವೀಪವೆಂಬುವ ಹೆಸರುಂಟು.

4. Peninsula. ೪. ಸ್ವಲ್ಪ ಕಡಿಮೆಯಾಗಿ ನೀರು ಸುತ್ತಿಕೊಂಡಿರುವ ದೇಶಕ್ಕೆ ಅರ್ಧದ್ವೀಪವೆಂಬುವ ಹೆಸರುಂಟು.

5. Cape or Promontory. ೫. ಭೂಮಿಯಲ್ಲಿ ಒಂದು ಕೊನೆ ಸಮುದ್ರದಲ್ಲಿ ಸ್ವಲ್ಪ ದೂರವಾಗಿ ಬಂದರೆ ಅದಕ್ಕೆ ಮೂಲೆಯೆಂದು ಹೇಳತಕ್ಕದ್ದು.

೬. ಎರಡು ಸಮುದ್ರಗಳಿಗೆ ನಡುವೆ ಬರುವ ಭೂಮಿಗೆ ಕಂಠವೆಂದು ಹೇಳಲ್ಪಡುವದು. 6. Isthmus.

೭. ಸಮುದ್ರದ ಅಂಚಿನಲ್ಲಿರುವ ಭೂಮಿಗೆ ದಡವೆಂಬುವದು ಹೆಸರು. 7. Coast or Shore.

೮. ವಿಸ್ತಾರವಾಗಿ ಕೂಡಿರುವ ನೀರಿಗೆ ಸಮುದ್ರವೆಂಬುವ ಹೆಸರಿದೆ. 8. Ocean.

೯. ಅದಕ್ಕಿಂತ ಕಡಿಮೆಯಾಗಿ ಕೂಡಿರುವ ನೀರಿಗೆ ಕಡಲು ಎಂದು ಹೇಳತಕ್ಕದ್ದು. 9. Sea.

೧೦. ಬೆಟ್ಟದಮೇಲೆ ಹರಿದು ಸಮುದ್ರಕ್ಕೆ ಇಲ್ಲವೇ ಕಡಲಿಗೆ ಸೇರುವ ನೀರಿಗೆ ನದಿಯೆಂಬುವದು ಹೆಸರು. 10. River.

೧೧. ಭೂಮಿ ಸುತ್ತಿಕೊಂಡಿರುವ ನೀರಿಗೆ ಕೆರೆಯೆಂದು ಹೇಳಲ್ಪಡುವದು. 11. Lake.

೧೨. ಸಮುದ್ರವು ಭೂಮಿಯಲ್ಲಿ ಸ್ವಲ್ಪ ದೂರವಾಗಿ ಸೇರಿದರೆ ಅದಕ್ಕೆ ಕೊಲ್ಲಿಯೆಂದು ಹೇಳುವದುಂಟು. 12. Gulf or Bay.

೧೩. ಎರಡು ಸಮುದ್ರಗಳನ್ನು ಇಲ್ಲವೇ ಎರಡು ಕಡಲುಗಳನ್ನು ಜೋಡಿಸುವ ನೀರಿನ ದಾರಿಗೆ ಗೊಂದಿಯೆಂಬುವ ಹೆಸರುಂಟು. 13. Strait or Channel.

೧೪. ದೊರೆತನ ಮಾಡುವವರು ವಾಸಮಾಡುವ ಪಟ್ಣವು ಸಂಸ್ಥಾನವು. 14. Capital.

೧೫. ಬಹಳ ಜನರು ವೊಕ್ಕಲುತನವಾಗಿದ್ದು ಬಹಳ ವ್ಯಾಪಾರ ನಡೆಯುವ ವೂರು ಪಟ್ಣವಾಗಿದೆ. 15. City.

೧೬. ಅದಕ್ಕಿಂತ ಚಿಕ್ಕದ್ದಕ್ಕೆ ಗ್ರಾಮವೆಂದು ಹೇಳತಕ್ಕದ್ದು. 16. Town.

೧೭. ಇದಕ್ಕಿಂತ ಚಿಕ್ಕದ್ದು ಹಳ್ಳಿಯೆಂದು ಹೇಳಲ್ಪಡುವದು. 17. Village.

18. Mountain. ೧೮. ಬಹಳ ಎತ್ತರವಾದ ಸ್ಥಳಕ್ಕೆ ಬೆಟ್ಟವೆಂದು ಹೇಳಲ್ಪಡುವದು.

19. Volcano. ೧೯. ಹೊಗೆ ಬೂದಿ ಕೆಂಡಗಳನ್ನು ಬೆಂಕಿಯಿಂದ ಕರಗಿದ ವಸ್ತುಗಳನ್ನು ಹೊರಡಿಸುವ ಬೆಟ್ಟಗಳಿಗೆ ಅಗ್ನಿಪರ್ವತಗಳೆಂಬುವದುಂಟು.

20. Hill. ೨೦. ಬೆಟ್ಟಕ್ಕಿಂತ ಹೊಂಚ ತಗ್ಗಾದ ಸ್ಥಳಕ್ಕೆ ಗುಟ್ಟವೆಂದು ಹೇಳುವದುಂಟು.

21. Hillock ೨೧. ಗುಟ್ಟಕ್ಕಿಂತ ಸ್ವಲ್ಪ ತಗ್ಗಾದ ಸ್ಥಳಕ್ಕೆ ದಿನ್ನೆಯೆಂಬುವ ಹೆಸರು.

22. Rock. ೨೨. ಬಹಳ ಕಲ್ಲುಗಳೂ ಬಂಡೆಗಳೂ ಇರುವ ಎತ್ತರವಾದ ಸ್ಥಳಕ್ಕೆ ಗುಡ್ಡವೆಂದು ಹೇಳತಕ್ಕದ್ದು.

23. Valley. ೨೩. ಬೆಟ್ಟಗಳಾಗಲಿ ಗುಟ್ಟಗಳಾಗಲಿ ದಿನ್ನೆಗಳಾಗಲಿ ಗುಡ್ಡಗಳಾಗಲಿ ಅಂಥಾ ಎರಡು ಎತ್ತರವಾದ ಸ್ಥಳಗಳ ನಡುವೆ ಯಿರುವ ಭೂಮಿಗೆ ತಗ್ಗು ಎಂದು ಹೇಳಲ್ಪಡುವದು.

24. Plain. ೨೪. ಬಹಳ ದೂರದ ಮಟ್ಟಿಗೂ ಭೂಮಿ ಸಮವಾಗಿದ್ದರೆ ಅಂಥಾ ಸ್ಥಳಕ್ಕೆ ಮೈದಾನವೆಂದು ಹೇಳುವದುಂಟು.

25. Forest. ೨೫. ಗಿಡಗಳೂ ಮರಗಳೂ ಒಂದೇ ಸ್ಥಳದಲ್ಲಿ ಬಹಳವಾಗಿದ್ದರೆ ಅದಕ್ಕೆ ಕಾಡು ಎಂಬುವ ಹೆಸರು.

26. Desert. ೨೬. ಒಂದು ಸ್ಥಳದಲ್ಲಿ ವಿಸ್ತಾರವಾಗಿ ಮರಳು ಭೂಮಿ ಯಾಗಲಿ ಹಸರು ಮಾಡದೆ ಇರುವಂಥಾದ್ದಾಗಲಿ ಬಂದರೆ ಆ ಸ್ಥಳಕ್ಕೆ ಬೀಡು ಎಂಬುವ ಹೆಸರು.

27. The four quarters. ೨೭. ಚತುರ್ದಿಕ್ಕುಗಳು ಯಾವವೆಂದರೆ ಪೂರ್ವ ಪಶ್ಚಿಮ ಉತ್ತರ ದಕ್ಷಿಣಗಳು.

SECTION 7.

೭. ಅಧ್ಯಾಯ.

General divisions of the Earth's surface.

ಭೂಮಿಯ ಮುಖ್ಯ ವಿಭಾಗಗಳು.

---

೧. ಭೂಮುಖವು ಆರು ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಹ್ಯಾಗಂದರೆ. 1. Divisions of Land.

೧) ಏಷ್ಯ ಖಂಡ. 1) Asia.

೨) ಯೂರೋಪ್ ಖಂಡ. 2) Europe.

೩) ಆಫ್ರಿಕ ಖಂಡ. 3) Africa.

೪) ಅಮೇರಿಕ ಖಂಡ. 4) America.

೫) ಆಸ್ಟ್ರೇಲಿಯ ದ್ವೀಪಗಳು. 5) Australia

೬) ಪೊಲಿನೀಸಿಯ ದ್ವೀಪಗಳು. 6) Polynesia.

೨. ಮುಖ್ಯವಾದ ಸಮುದ್ರಗಳು ಯಾವವಂದರೆ, 2. Divisions of Water.

೧) ಪಸಿಫಿಕ್ ಸಮುದ್ರ. ಇದು ಏಷ್ಯ ಖಂಡಕ್ಕೂ ಅಮೇರಿಕ ಖಂಡಕ್ಕೂ ಮಧ್ಯದಲ್ಲಿ ಇದೆ. 1) Pacific Ocean.

೨) ಅಟ್ಲಾಂಟಿಕ್ ಸಮುದ್ರ. ಇದು ಅಮೇರಿಕ ಖಂಡಕ್ಕೂ ಯೂರೋಪ್ ಆಫ್ರಿಕ ಖಂಡಗಳಿಗೂ ಮಧ್ಯದಲ್ಲಿ ಇದೆ. 2) Atlantic Ocean.

೩) ಹಿಂದೂ ಸಮುದ್ರ. ಇದು ಏಷ್ಯ ಖಂಡದ ದಕ್ಷಿಣದಲ್ಲಿ ಇದೆ. 3) Indian Ocean.

4) Northern Ocean. ೪) ಉತ್ತರ ಸಮುದ್ರ. ಇದು ಭೂಮಿಯ ಉತ್ತರ ಮೊನೆಯ (North Pole,) ಹತ್ತಿರವಿದೆ.

5) Southern Ocean. ೫) ದಕ್ಷಿಣ ಸಮುದ್ರ. ಇದು ಭೂಮಿಯ ದಕ್ಷಿಣ ಮೊನೆಯ (South Pole,) ಹತ್ತಿರವಿದೆ.

—o—

SECTION 8.

೮. ಅಧ್ಯಾಯ.

Plants.

ಸಸ್ಯಾದಿಗಳು.

1. The Earth covered with Vegetation. ೧. ಮರಳಿನ ನೆಲದಲ್ಲಿಯೂ ಗುಡ್ಡಗಳಿರುವ ಜಾಗಗಳಲ್ಲಿಯೂ ಯಾವಾಗಲು ಬಹು ಚಳಿ ವುಂಟಾಗಿರುವ ಶೀಮೆಗಳಲ್ಲಿಯೂ ಅಲ್ಲದೆ ಕಡಿಮೆಯಾದ ಸ್ಥಳಗಳಲ್ಲಿ ಭೂಮುಖದಲ್ಲೆಲ್ಲಿಯು ಹುಲ್ಲು ಪಲ್ಯ ಮರಗಳು ಬೆಳೆಯುತ್ತವೆ.

2. Heat favourable to its developement. ೨. ಉಷ್ಣ ದೇಶಗಳಲ್ಲಿ ಸಸ್ಯಾದಿಗಳು ಹೇರಳವಾಗಿಯೂ ಬಹಳ ದೊಡ್ಡವುಗಳಾಗಿಯೂ ಬೆಳೆಯುವವು.

3. Cold the reverse. ೩. ಶೀತ ದೇಶಗಳಲ್ಲಿ ಅವು ಅಷ್ಟು ಚನ್ನಾಗಿ ಬೆಳೆಯುವದಿಲ್ಲ.

4. Number of species. ೪. ಸಸ್ಯಾದಿಗಳನ್ನು ಪರೀಕ್ಷೆ ಮಾಡುವ ವಿದ್ವಾಂಸರು ಭೂಮಿ ಮೇಲೆಲ್ಲಿಯೂ ೬೦,೦೦೦ ಜಾತಿಗಳುಂಟೆಂದು ಹೇಳುತ್ತಾರೆ.

—o—

SECTION 9.

೯. ಅಧ್ಯಾಯ.

Animals.

ಜೀವರಾಶಿಗಳು.

---

೧. ಬೇರೆಬೇರೆ ದೇಶಗಳೊಳಗೆ ಬೇರೆಬೇರೆ ಮೃಗ ಪಕ್ಷಿ ಮೊದಲಾದ ಜೀವಿಗಳ ಜಾತಿಗಳುಂಟು. **1. Distribution of Animals.**

೨. ಶೀತ ದೇಶಗಳಲ್ಲಿ ಅವುಗಳ ಲೆಖ್ಖ ಕಡಿಮೆಯಾಗಿದೆ. ಉಷ್ಣದೇಶಗಳಲ್ಲಿ ಹೆಚ್ಚಾಗಿದೆ. ಆದರೆ ಸಮುದ್ರದಲ್ಲಿರುವ ಮೀನುಗಳಲ್ಲಿ ಈ ಭೇದ ಕಾಣುವದಿಲ್ಲ. ಮೀನುಗಳು ಎಲ್ಲೆಲ್ಲಿ ಸಮುದ್ರಗಳಲ್ಲಿ ಬಹಳವುಂಟು. **2. Less numerous in cold countries than in hot.**

೩. ಮನುಷ್ಯರಿಗೆ ಬಹಳ ಅಗತ್ಯವಾಗಿರುವ ಕುದುರೆ ದನ ಕುರಿ ಮೊದಲಾದವುಗಳು ಎಲ್ಲಾ ಕಡೆಗಳಲ್ಲಿಯೂ ಶೀತ ದೇಶಗಳಲ್ಲಿಯೂ ಉಷ್ಣ ದೇಶಗಳಲ್ಲಿಯೂ ಸಿಕ್ಕುತ್ತವೆ. **3. Tame Animals.**

೪. ದುಷ್ಟ ಮೃಗಗಳು ಸಾಧು ಮೃಗಗಳಿಗಿಂತ ಕಡಿಮೆಯಾಗಿವೆ. **4. Wild Animals.**

೫. ಭೂಮಿಯಮೇಲೆ ಹೆಚ್ಚುಕಡಿಮೆ ೫೦,೭೦೦ ಜಾತಿಯ ಜೀವರಾಶಿಗಳುಂಟೆಂದು ವಿದ್ವಾಂಸರು ಅನ್ನುತ್ತಾರೆ. **5. Number of species.**

SECTION 10.

೧೦. ಅಧ್ಯಾಯ.

Man.

ಮನುಷ್ಯನು.

---

1. Capability of existing in different climates.

೧. ಮನುಷ್ಯನು ಎಲ್ಲಾ ದೇಶಗಳಲ್ಲಿ ಚಳಿಯಾದದ್ದಾಗಲಿ ಶಖೆಯಾದದ್ದಾಗಲಿ ಬದುಕತಕ್ಕ ಶರೀರವುಳ್ಳವನಾಗಿದ್ದಾನೆ.

ಮೃಗ ಪಕ್ಷಿ ಜಾತಿಗಳಲ್ಲಿ ಚಳಿಯಾಗುವ ಸೀಮೆಯಲ್ಲಿ ಹುಟ್ಟಿದವುಗಳು ಶಖೆಯಾಗುವ ಸೀಮೆಗೆ ತೆಗದುಕೊಂಡು ಹೋದರೆ ಬಲಹೀನವಾಗುವವು. ಇಲ್ಲವೇ ರೋಗದಲ್ಲಿ ಬೀಳುವವು. ಒಂದುವೇಳೆ ಸಾಯುವವು. ಶಖೆಯಾಗುವ ದೇಶದಲ್ಲಿ ಹುಟ್ಟಿದಂಥಾವು ಶೀತಸ್ಥಳಕ್ಕೆ ತೆಗದುಕೊಂಡು ಹೋದರೆ ಹಾಗೆಯೇ ಆಗುವದು. ಆದರೆ ಮನುಷ್ಯನು ಭೂಮಿಯನ್ನೆಲ್ಲಾ ಸಂಚರಿಸುವದಕ್ಕೂ ಅಗತ್ಯವಿರುವ ಸ್ಥಳಗಳಲ್ಲಿ ವಾಸ ಮಾಡುವದಕ್ಕೂ ಶಕ್ತವನಾಗಿದ್ದಾನೆ.

2. Identity of the human species

೨. ಮೃಗ ಪಕ್ಷಿ ಮೊದಲಾದವುಗಳ ಜಾತಿಗಳಲ್ಲಿ ರೂಪ ಭೇದವಿರುವ ಪ್ರಕಾರ ಮನುಷ್ಯರಲ್ಲಿ ಇಲ್ಲ. ಮನುಷ್ಯರನ್ನು ಯಾವ ದೇಶದಲ್ಲಿ ನೋಡಿದಾಗ್ಯು ಒಂದೇ ಶರೀರವೂ ಒಂದೇ ಸ್ವಭಾವವೂ ಉಳ್ಳವರಾಗಿದ್ದಾರೆ.

3. Difference of colour &c.

3. ಆದರೆ ಬಣ್ಣದಲ್ಲಿಯೂ ತಲೆ ಮುಖಗಳಲ್ಲಿಯೂ ಈ ದೇಶಸ್ಥರಿಗೂ ಆ ದೇಶಸ್ಥರಿಗೂ ಸ್ವಲ್ಪ ವ್ಯತ್ಯಾಸವುಂಟು.

೪. ವಿದ್ವಾಂಸರು ಈ ವ್ಯತ್ಯಾಸಗಳನ್ನು ಚನ್ನಾಗಿ ಪರೀಕ್ಷಿಸಿ ಮನುಷ್ಯರನ್ನು ೫ ತರಗಳಾಗಿ ವಿಂಗಡಿಸಿದ್ದಾರೆ. 4. These differences classified.

೧) ಕಾಕೇಶಿಯನ್ ತರ.

1) CAUCASIAN RACE.

ಇವರು ಕೆಂಪುಜನ. ಇಲ್ಲವೇ ಅತಿ ಸ್ವಲ್ಪ ಕಪ್ಪಾದವರು. ತಲೆ ಕಮಾನಿನ ರೂಪವಾಗಿದೆ. ಹಣೆ ದೊಡ್ಡದಾಗಿಯೂ ಮೂಗು ಬಾಯಿಗಳು ಚಿಕ್ಕವಾಗಿಯೂ ಅವೆ. ಕೂದಲು ಬಹಳವಾಗಿಯೂ ಉದ್ದವಾಗಿಯೂ ಇದೆ. ಈ ತರದವರು ಮಿಕ್ಕಾದ ತರದವರಿಗಿಂತ ಬುದ್ಧಿವಂತರು. ಇವರಲ್ಲಿ ಚಮತ್ಕಾರವೂ ವಿದ್ಯವೂ ಯಾವಾಗಲು ಪ್ರಬಲವಾಗಿರುವದುಂಟು. Description

ಯೂರೋಪ್ ಖಂಡದಲ್ಲಿಯೂ ಏಷ್ಯ ಖಂಡದ ಪಶ್ಚಿಮ ದಿಕ್ಕಿನಲ್ಲಿಯೂ ಇದ್ದಾರೆ. Locality.

ಅವರು ಕಾಕಸಸ್ (Caucasus,) ಬೆಟ್ಟಗಳ ಪ್ರಾಂತ್ಯಗಳಿಂದ ಹುಟ್ಟಿದವನಾದ್ದರಿಂದ ಕಾಕೇಶಿಯನ್ ತರವೆಂಬುವ ಹೆಸರು ಹೊಂದಿದ್ದಾರೆ. Origin of name.

೨) ಮೊಂಗೋಲಿಯನ್ ತರ.

2) MONGOLIAN RACE

ಇವರು ಇಪ್ಪಿ ಹಣ್ಣಿನ ವರ್ಣವುಳ್ಳವರು. ತಲೆ ಅಷ್ಟುಗುಂಡಾಗಿರದೆ ಮೇಲ್ಗಡೆಯಲ್ಲಿ ಸ್ವಲ್ಪ ಸಮವಾಗಿದೆ. ಹಣೆ ಚಿಕ್ಕದ್ದಾಗಿಯೂ ಮೂಗು ಅಗಲವಾಗಿಯೂ ತುಟಿಗಳು ದಪ್ಪನಾಗಿಯೂ ಕೂದಲು ಸ್ವಲ್ಪವಾಗಿಯೂ ಅವೆ. Description

ಏಷ್ಯ ಖಂಡದ ಪೂರ್ವ ದಿಕ್ಕಿನಲ್ಲಿರುವವರು ಈ ತರದವರಾಗಿದ್ದಾರೆ. Locality.

ಏಷ್ಯ ಖಂಡದಲ್ಲಿರುವ ಮೊಂಗೋಲಿಯ (Mongolia,) Origin of name.

ಸೀಮೆಯಿಂದ ಹುಟ್ಟಿದಕಾರಣ ಮೊಂಗೋಲಿಯನ್ ತರವೆಂಬುವ ಹೆಸರು ಅವರಿಗಾಯಿತು.

3) ETHIOPIAN RACE.

3) ಈಥಿಯೋಪಿಯನ್ ತರ.

Description

ಇವರು ಬಹು ಕಪ್ಪಾಗಿದ್ದಾರೆ. ಹಣೆ ಚಿಕ್ಕದ್ದಾಗಿಯೂ ವಾರೆಯಾಗಿಯು ಇದೆ. ಕೆನ್ನೆಯ ಮೆಲುಬುಗಳು ಬಹಳವಾಗಿ ಈಚೆಗೆ ಕಾಣಿಸುತ್ತವೆ. ದವಡೆಗಳು ಉದ್ದವಾಗಿದ್ದು ಮುಂದಕ್ಕೆ ಬರುತ್ತವೆ. ಮೂಗು ಬಹು ಅಗಲವಾಗಿಯೂ ತುಟಿಗಳು ಬಹು ದಪ್ಪವಾಗಿಯೂ ಅವೆ. ಕೂದಲು ಕಪ್ಪಾಗಿಯೂ ಕುರಿಯ ಉಣ್ಣೆಯ ಹಾಗೆಯೂ ಇದೆ.

Locality.

ಇವರು ಆಪ್ರಿಕ ಖಂಡದಲ್ಲಿ ಇದ್ದಾರೆ. ಇವರಲ್ಲಿ ಅನೇಕರು ಅಮೇರಿಕ ಖಂಡಕ್ಕೆ ಗುಲಾಮರಾಗಿ ತೆಗದುಕೊಂಡು ಹೋಗಲ್ಪಟ್ಟಿರುವದರಿಂದ ಅಲ್ಲಿಯು ಪ್ರಬಲವಾಗಿದ್ದಾರೆ.

Origin of name.

ಆಪ್ರಿಕ ಖಂಡದಲ್ಲಿರುವ ಈಥಿಯೋಪಿಯ (Ethiopia,) ದೇಶದಿಂದ ಅವರ ಹೆಸರು ಹುಟ್ಟಿತು.

4) AMERICAN RACE.

೪) ಅಮೇರಿಕನ್ ತರ.

Description locality & name.

ಇವರು ತಾಂಬ್ರ ವರ್ಣವುಳ್ಳವರು. ಇವರು ಅಮೇರಿಕ ಖಂಡದಲ್ಲಿ ಇರುವವರು. ಇದರಿಂದ ತಮ್ಮ ಹೆಸರು ಹೊಂದಿದ್ದಾರೆ.

Caucasian race in America.

ಇವರಲ್ಲದೆ ಯೂರೋಪ್ ಖಂಡದಿಂದ ಬಂದ ಕಾಕೇಶಿಯನ್ ಜನರು ಅಮೇರಿಕದಲ್ಲಿ ಬಹಳ ಪ್ರಬಲವಾಗಿದ್ದಾರೆ.

5) MALAY RACE.

೫) ಮಲಾಯಿ ತರ.

Description & Locality.

ಇವರು ಒಣಗಿದ ಅಡಿಕೆ ಬೀಜದ ವರ್ಣವುಳ್ಳವರು.

ಏಷ್ಯ ಖಂಡದಲ್ಲಿರುವ ಮಲಾಯಿ (Malay,) ದೇಶದಲ್ಲಿಯೂ ಅದರ ಹತ್ತಿರವಿರುವ ದ್ವೀಪಗಳಲ್ಲಿಯೂ ಪಸಿಫಿಕ್ (Pacific,) ಸಮುದ್ರದಲ್ಲಿರುವ ದ್ವೀಪಗಳಲ್ಲಿಯೂ ಇದ್ದಾರೆ.

ಕೆಲವು ವಿದ್ವಾಂಸರು ಈ ಐದು ತರಗಳನ್ನು ಮೂರು ತರಗಳಾಗಿ ವಿಂಗಡಿಸಬಹುದೆಂದು ಹೇಳುತ್ತಾರೆ, ಹ್ಯಾಗಂದರೆ, ೧) ಕಾಕೇಶಿಯನ್ ತರ. ೨) ಮೊಂಗೋಲಿಯನ್ ತರ. 3) ಈಥಿಯೋಪಿಯನ್ ತರ. ಹೀಗೆ ವಿಂಗಡ ಮಾಡಿದರೆ ಅಮೇರಿಕನ್ ಮಲಾಯಿ ತರಗಳನ್ನು ಮಿಕ್ಕಾದ ಮೂರು ತರಗಳಲ್ಲಿ ಸೇರುತ್ತವೆ. These varieties reduced to three.

೫. ಮನುಷ್ಯರಲ್ಲಿ ಹೀಗೆ ಬಣ್ಣಗಳೂ ತಲೆ ಮುಖ ರೂಪಗಳೂ ಸ್ವಲ್ಪ ವ್ಯತ್ಯಾಸವಾದಾಗ್ಯೂ ಅವರಲ್ಲಿ ಬೇರೆಬೇರೆ ಜಾತಿಗಳುಂಟೆಂದು ಅನ್ನಕೂಡದು. 5. All descended from one human pair.

ಎಲ್ಲರು ಮೂಲ ಸ್ತ್ರೀಪುರುಷರಾದ ಇಬ್ಬರಿಂದಲೇ ಹುಟ್ಟಿದರೆಂದು ನಿಶ್ಚಯವುಂಟು, ಆದದರಿಂದ ಅವರಲ್ಲಿ ಜಾತಿ ಭೇದವಿಲ್ಲ.

೬. ಈ ಬೇರೆಬೇರೆ ಬಣ್ಣಗಳೂ ಮುಖ ರೂಪಗಳೂ ಉಂಟಾಗಿರುವದಕ್ಕೆ ಕಾರಣವನ್ನು ತಿಳಿಯುವದು ಕಷ್ಟವಾಗಿದೆ. ಜಲಪ್ರಳಯವಾದಮೇಲೆ ಭೂಮಿಯನ್ನು ಜನಗಳಿಂದ ತುಂಬಿಸಿದ ನೋಹನ ಮಕ್ಕಳಾದ ಶೇಮ್ ಹಾಮ್ ಯಾಫೇತರಿಂದ ದೇವರು ಮೂರು ವಿಧವಾದ ತರದವರನ್ನು ಹುಟ್ಟಿಸುವದಕ್ಕೆ ಚಿತ್ತವುಳ್ಳವನಾಗಿದ್ದನೆಂದು ನೆನಸಬಹುದು. ಮತ್ತು ಬೇರೆಬೇರೆ ಜನರು ವೊಬ್ಬರ ಸಂಗಡಲೊಬ್ಬರು ಕೂಡಿರುವದರಿಂದಲೂ ಕೆಲವರು ಶೀತ ದೇಶಗಳಲ್ಲಿಯೂ ಕೆಲವರು ಉಷ್ಣ ದೇಶಗಳಲ್ಲಿಯೂ ವಾಸ ಮಾಡುವದರಿಂದಲೂ ಕೆಲ 6. Causes of these varieties.

ವರು ಒಂದು ಪ್ರಕಾರವಾಗಿಯೂ ಕೆಲವರು ಇನ್ನೊಂದು ಪ್ರಕಾರವಾಗಿಯೂ ಜೀವನ ಮಾಡಿಕೊಳ್ಳುವದರಿಂದಲೂ ಮೊದಲಿದ್ದ ವ್ಯತ್ಯಾಸಗಳು ಹೆಚ್ಚಾದವೆಂದು ತೋರುತ್ತದೆ. ಕುದುರೆ ನಾಯಿ ಮೊದಲಾದ ಮೃಗಗಳಲ್ಲಿ ಒಂದೇ ಜಾತಿಯಿಂದ ಅನೇಕವಿಧ ರೂಪ ವರ್ಣಗಳುಳ್ಳವುಗಳು ಹುಟ್ಟುತ್ತವೆಂದು ನಾವು ಸಾಧಾರಣವಾಗಿ ನೋಡುವಾಗ ಮನುಷ್ಯರಲ್ಲಿ ಇಂಥಾ ಹೆಚ್ಚು ಕಡಿಮೆಗಳು ತೋರಿದರೆ ಆಶ್ಚರ್ಯವಿಲ್ಲ.

7. Population of the Earth. ೭. ಭೂಮಿಯಮೇಲೆಲ್ಲಾ ಹೆಚ್ಚು ಕಡಿಮೆ ತೊಂಭತ್ತಾರು ಕೋಟಿ ಐವತ್ತು ಲಕ್ಷ ೯೬,೫೦,೦೦,೦೦೦ ಮನುಷ್ಯರು ಇದ್ದಾರೆ.

—o—

SECTION 11.

೧೧. ಅಧ್ಯಾಯ.

Languages.

ಭಾಷೆಗಳು.

---

1. Originally one language. ೧. ಭೂಮಿಯ ಸೃಷ್ಟಿಯು ಮೊದಲುಗೊಂಡು ಬಹಳ ಕಾಲದ ವರೆಗೂ ಮನುಷ್ಯರು ಒಂದೇ ಭಾಷೆ ಆಡಿದರು. ಇದು ಯಾವ ಭಾಷೆಯೋ ಗೊತ್ತಿಲ್ಲ. ಹೀಬ್ರು (Hebrew,) ಭಾಷೆಯೆಂದು ಕೆಲವರು ಅನ್ನುತ್ತಾರೆ. ಸತ್ಯವೇದದಲ್ಲಿ ಒಂದು ಭಾಗವು ಆ ಭಾಷೆಯಲ್ಲಿ ಬರದದೆ.

2. Origin of the present diversity. ೨. ಜಲಪ್ರಳಯವಾದಮೇಲೆ ಮನುಷ್ಯರು ದೇವರ ಪ್ಪಣೆಯ ಪ್ರಕಾರ ಭೂಮಿಯಮೇಲೆ ಚದರಿಹೋಗಿ ಅಲ್ಲ

ಲ್ಲಿ ವಾಸ ಮಾಡುವದಕ್ಕೆ ಮನಸ್ಸಿಲ್ಲದವರಾಗಿದ್ದು ಅದು ಆ ಗದಹಾಗೆ ಬಾಬೆಲ್ ಯೆಂಬುವ ಗೋಪುರವನ್ನು ಪಟ್ಣವನ್ನು ಕಟ್ಟುತ್ತಿರುವಾಗ ದೇವರು ಅವರ ಭಾಷೆ ಹಾರು ಮಾರು ಮಾಡಿದನು. ಆ ಕಾಲವು ಮೊದಲುಗೊಂಡು ಮನುಷ್ಯರಲ್ಲಿ ಅನೇಕವಿಧ ಭಾಷೆಗಳನ್ನು ಆಡುವದುಂಟು.

೩. ಮನುಷ್ಯರು ಬೇರೆಬೇರೆ ದೇಶಗಳಿಗೆ ಚದರಿ ಹೋಗುವದರಿಂದಲೂ ಅವರವರ ಉಚ್ಚಾರಣೆ ಹೆಚ್ಚುಕಡಿಮೆಯಾಗಿರುವದರಿಂದಲೂ ಅವರವರಲ್ಲಿ ವಿಧವಿಧವಾದ ಯೋಚನೆ ಕೆಲಸ ವಿದ್ಯೆಗಳು ಹುಟ್ಟುವದರಿಂದಲೂ ಭಾಷೆಗಳ ವ್ಯತ್ಯಾಸಗಳು ಮೊದಲು ಇದ್ದದಕ್ಕಿಂತ ಬರಬರ ಹೆಚ್ಚಾಗುತ್ತಾ ಬಂದವು. 3. Gradual increase of that diversity.

೪. ಈಗ ಮನುಷ್ಯರಲ್ಲಿ ಪ್ರಯೋಗಿಸಲ್ಪಡುವ ಭಾಷೆಗಳು ಎಷ್ಟಂದರೆ. 4. Number of languages.

ಏಷ್ಯ ಖಂಡದಲ್ಲಿ	೯೮೭
ಯೂರೋಪಿನಲ್ಲಿ	೫೮೭
ಆಫ್ರಿಕದಲ್ಲಿ	೨೭೬
ಅಮೇರಿಕದಲ್ಲಿ	೧೨೧೪
	೩೦೬೪

೫. ಆದರೆ ಇವುಗಳಲ್ಲಿ ಕೆಲವು ಮಾತ್ರ ಮೂಲ ಭಾಷೆಗಳು. ಮಿಕ್ಕಾದವುಗಳು ಅವುಗಳಿಂದ ಹುಟ್ಟಿದವು. ಮತ್ತು ಇವುಗಳಲ್ಲಿ ವೊಂದಕ್ಕೊಂದು ಬಹಳ ಹೆಚ್ಚುಕಡಿಮೆ ಯಿಲ್ಲ. 5. Many of these differ but slightly.

—o—

SECTION 12.

೧೨. ಅಧ್ಯಾಯ.

Religions.

ಮತಗಳು.

---

1. Original worship of the one true God. ೧. ಭೂಮಿ ಸೃಷ್ಟಿಯ ಕಾಲದಲ್ಲಿ ಮನುಷ್ಯರು ಒಬ್ಬನಾದ ದೇವರನ್ನು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸಿದರು.

2. Gradual fall into Polytheism & Idolatry. ೨. ಆದರೆ ತರುವಾಯ ಪಾಪದಲ್ಲಿ ಬಿದ್ದು ಬರಬರ ಕೆಟ್ಟುಹೋಗಿ ಒಬ್ಬನಾಗಿರುವ ನಿಜವಾದ ದೇವರನ್ನು ಮರತುಬಿಟ್ಟು ಮೊದಲು ಸೂರ್ಯ ಚಂದ್ರ ನಕ್ಷತ್ರಗಳನ್ನೂ ಆ ಮೇಲೆ ಸತ್ತುಹೋದ ಪರಾಕ್ರಮ ಶಾಲಿಗಳನ್ನೂ ಕೀರ್ತಿಹೊಂದಿದವರನ್ನೂ ಕಡೆಯಲ್ಲಿ ಬೇರೆಬೇರೆ ರೂಪಗಳಾದ ವಿಗ್ರಹಗಳನ್ನೂ ಪೂಜಿಸುವಹಾಗೆ ಅಷ್ಟು ಅಜ್ಞಾನಾಂಧಕಾರದಲ್ಲಿ ಬಿದ್ದರು.

ಈ ವಿಗ್ರಹಾರಾಧನೆಗೆ ಸಮ್ಬಂಧವಾದ ಮುಖ್ಯವಾದ ಮತಗಳು ಯಾವವಂದರೆ.

1) HINDOOISM. ೧) ಹಿಂದೂಮತ. ಇದು ಹಿಂದೂಸ್ಥಾನದಲ್ಲಿ ಪ್ರಬಲವಾಗಿದೆ.

2) BUDDHISM. ೨) ಬೌದ್ಧಮತ. ಇದು ಚೀನ ಅದರ ಸಮೀಪದಲ್ಲಿರುವ ದೇಶಗಳಲ್ಲಿಯೂ ಸೀಲೋನ್ (Ceylon,) ದ್ವೀಪದಲ್ಲಿಯೂ ಪ್ರಬಲವಾಗಿದೆ.

3 FETISHISM. 3) ಫೆಟಿಷ್ಮತ. ಇದು ಆಫ್ರಿಕ ಖಂಡದಲ್ಲಿ ಪ್ರಬಲ.

ಈ ಮತದವರೆಲ್ಲರು ಬೇರೆಬೇರೆ ಅಬದ್ಧ ದೇವರುಗಳನ್ನು ಬೇರೆಬೇರೆ ವಿಗ್ರಹಗಳನ್ನು ಪೂಜಿಸುತ್ತಾರೆ. ಆದರೆ ಅವರೆಲ್ಲರು ನಡಿಯುವ ಮಾರ್ಗ ಬುದ್ಧಿಗೆ ವಿರೋಧವೂ ದೇವರಿಗೆ ವಿರೋಧವೂ ಸುಖಕ್ಕೆ ವಿರೋಧವೂ ನರಕಕ್ಕೆ ಹೋಗುವ ಮಾರ್ಗವಾಗಿದೆ. *All in heathen darkness.*

೩. ಮನುಷ್ಯರೆಲ್ಲರೂ ಪೂರ್ಣವಾಗಿ ಕೆಟ್ಟುಹೋಗದಹಾಗೆ ದೇವರು ಪೂರ್ವ ಕಾಲದಲ್ಲಿ ಅಬ್ರಹಾಮನ ವಂಶಸ್ಥರಾದ ಯೆಹೂದಿಯರೆಂಬುವ ಜನರನ್ನು ತನ್ನ ಜನರಾಗಿ ಆರಿಸಿ ತೆಗೆದುಕೊಂಡು ಅವರಲ್ಲಿ ತನ್ನ ನೀತಿ ನ್ಯಾಯಗಳನ್ನು ಪ್ರಸಿದ್ಧ ಮಾಡಿ ಅವರು ಯೆಹೋವನೆಂಬ ಪ್ರಭುವಾಗಿರುವ ದೇವರಾದ ತನಗೆ ಆರಾಧನೆ ಮಾಡುವದಕ್ಕೆ ಅಪ್ಪಣೆ ಕೊಟ್ಟು ಇನ್ನುಮೇಲೆ ಅವರಿಗೂ ಎಲ್ಲಾ ಮನುಷ್ಯರಿಗೂ ಪಾಪ ವಿಮೋಚನೆ ಮಾಡುವದಕ್ಕಾಗಿ ತನ್ನ ಕುಮಾರನನ್ನು ಕಳುಹಿಸುವದಕ್ಕೆ ಮಾತು ಕೊಟ್ಟನು. ದೇವರು ಮಾತು ಕೊಟ್ಟಿದ್ದಹಾಗೆಯೇ ತನ್ನ ಕುಮಾರನಾದ ಯೇಸುಕ್ರಿಸ್ತನು ಅವತಾರವೆತ್ತಿದ ಮೇಲೆ ಯೆಹೂದಿಯರಲ್ಲಿ ಅನೇಕರು ಕಠಿನ ಹೃದಯವುಳ್ಳವರಾಗಿದ್ದು ಆತನನ್ನು ನಂಬದೆ ಹೋದರು. ಇದಕ್ಕಾಗಿಯೂ ಮತ್ತು ಅವರು ದೇವರ ಕುಮಾರನನ್ನು ಶಿಲುಬೆಗೆ ಹಾಕಿ ಕೊಲ್ಲುವದರಲ್ಲಿ ಮಾಡಿದ ಪಾಪಕ್ಕಾಗಿಯೂ ದೇವರು ಅವರನ್ನು ತಮ್ಮ ದೇಶದಿಂದ ಹೊರಡಿಸಿ ಭೂಮಿಯ ಮೇಲೆ ಚದರಿಸಿ ಬಿಟ್ಟನು. ಈಗ ಅಲ್ಲಲ್ಲಿಯೂ ಇದ್ದಾರೆ. ಅವರಲ್ಲಿ ಅನೇಕರು ಈಗಲು ಯೇಸುಕ್ರಿಸ್ತನ ಸಭೆಯಲ್ಲಿ ಸೇರುತ್ತಿದ್ದಾರೆ. ಇನ್ನುಮೇಲೆ ಎಲ್ಲರು ಸೇರುವರೆಂದು ದೇವರು ತನ್ನ ವಾಕ್ಯದಿಂದ ತಿಳಿಸಿದ್ದಾನೆ.

3. THE JEWS.
Lord's chosen people.
Their pure worship.
Promise of a Saviour.
Unbelief of the Jews.
Their dispersion.

4. CHRISTIANITY.

೪. ಕ್ರೀಸ್ತಮತ.

True Christians Christ's disciples.

ಈ ಮತದವರೆಲ್ಲರು ಭೂಲೋಕದವರ ಪಾಪಗಳನ್ನು ತನ್ನ ಪ್ರಾಣ ಬಲಿಯಾಗಿ ಅರ್ಪಿಸುವದರಿಂದ ಪರಿಹಾರ ಮಾಡಿದ ಜಗದ್ರಕ್ಷಕನಾದ ಯೇಸುಕ್ರೀಸ್ತನ ಶಿಷ್ಯರು.

Progress of Christianity.

ದೇವರು ಪೂರ್ವಕಾಲದಲ್ಲಿ ದೀರ್ಘದರ್ಶಿಗಳಿಂದ ವಾಗ್ದತ್ತ ಮಾಡಿದಹಾಗೆ ಯೇಸುಕ್ರೀಸ್ತನು ಯೆಹೂದಿಯ ದೇಶದಲ್ಲಿ ಹುಟ್ಟಿ ಜನರಿಗೆ ದಿವ್ಯಜ್ಞಾನವನ್ನು ಬೋಧಿಸಿ ತನ್ನನ್ನು ಬಲಿಯಾಗಿ ಅರ್ಪಿಸಿ ಸಮಾಧಿಯಿಂದ ಎದ್ದು ಪರಲೋಕಕ್ಕೆ ಹೋದನು. ಆ ಕಾಲದಿಂದ ಈವರೆಗೂ ಆತನು ಸ್ಥಾಪಿಸಿದ ಮತವು ಪ್ರಬಲವಾಗುತ್ತಾ ಬಂತು. ಈಗ ಆತನ ಶಿಷ್ಯರು ಭೂಲೋಕದಲ್ಲೆಲ್ಲಿಯೂ ಇದ್ದಾರೆ. ಮತ್ತು ವರುಷ ವರುಷಕ್ಕೆ ಬೇರೆಬೇರೆ ದೇಶಗಳಲ್ಲಿರುವ ಅಜ್ಞಾನಿಗಳು ಆತನ ಶಿಷ್ಯರಿಂದ ಬೋಧಿಸಲ್ಪಟ್ಟು ತಮ್ಮ ಮಾರ್ಗ ಕೆಟ್ಟದ್ದೆಂದು ತಿಳಿದು ಅದನ್ನು ಬಿಟ್ಟು ಆತನ ಸಭೆಯಲ್ಲಿ ಸೇರುತ್ತಾ ಬರುತ್ತಾರೆ. ಕಡೆಯಲ್ಲಿ ಭೂಮಿಯವರೆಲ್ಲರು ಆತನ ಶಿಷ್ಯರಾಗುವರೆಂದು ದೇವರ ವಾಗ್ದತ್ತವುಂಟು.

Its effects on human character.

ಯಾರು ನಿಜವಾಗಿ ಯೇಸುಕ್ರೀಸ್ತನಲ್ಲಿ ವಿಶ್ವಾಸವಿಡುತ್ತಾರೋ ಅವರ ಮನಸ್ಸು ಬದಲಾಗುತ್ತದೆ. ಹೊಸ ಸ್ವಭಾವವು ಬರುತ್ತದೆ. ಯೋಗ್ಯರಾಗಿಯೂ ನೀತಿವಂತರಾಗಿಯೂ ಬೇರೊಬ್ಬರಿಗೆ ಪ್ರಯೋಜಕರಾಗಿಯೂ ಆಗುತ್ತಾರೆ.

Nominal Christians.

ಆದರೆ ಕ್ರೀಸ್ತಿಯರೆಂದು ಹೇಳಲ್ಪಟ್ಟ ಅನೇಕರು ಕ್ರೀಸ್ತನ ಹೆಸರುಮಾತ್ರ ಹೊಂದಿದ್ದಾರೆ. ಆತನಲ್ಲಿ ನಿಜವಾದ ವಿಶ್ವಾಸವಿಡಲಿಲ್ಲ. ಹೊಸ ಸ್ವಭಾವವು ಆಗಲಿಲ್ಲ. ಅದದ

ರಿಂದ ಆ ಹೆಸರು ಅವರಿಗೆ ಉಂಟಾಗಿದ್ದರೂ ಅವರಿಗೂ ಲೋಕದವರಿಗೂ ವ್ಯತ್ಯಾಸವಿಲ್ಲ.

Corrupted Christianity.

ಮತ್ತು ಮನುಷ್ಯರ ಸ್ವಭಾವವು ಕೆಟ್ಟದ್ದಾದದರಿಂದ ಕ್ರಿಸ್ತನ ಸಭೆಯಲ್ಲಿ ಸೇರಿದ ಅನೇಕರು ಅಬದ್ಧ ಬೋಧನೆಗಳಿಂದ ಮೋಸಹೋಗಿ ಅಯುಕ್ತವಾಗಿ ನಡಿಯುತ್ತಾರೆ. ಹೀಗೆ ಮಾಡುವವರಲ್ಲಿ ರೋಮಾನ್ ಸಭೆಯವರು ಮುಖ್ಯಸ್ಥರು. ಇವರು ಶಿಲುಬೆಯ ಹಾಗೆಯೂ ಕ್ರಿಸ್ತನ ಹಾಗೆಯೂ ಪೂರ್ವದಲ್ಲಿದ್ದ ಆತನ ಭಕ್ತರಹಾಗೆಯೂ ರೂಪಗಳನ್ನು ಮಾಡಿ ಅವುಗಳನ್ನು ನೋಡಿ ದೇವರನ್ನು ಆರಾಧಿಸುತ್ತಾರೆ. ಇನ್ನು ವೇದಕ್ಕೆ ವಿರೋಧವಾದ ಅನೇಕ ಕಾರ್ಯಗಳನ್ನು ಮಾಡುತ್ತಾರೆ. ಇವರು ತಮ್ಮ ವಿಗ್ರಹ ಪೂಜೆ ಮೊದಲಾದವುಗಳಿಂದ ಕ್ರಿಸ್ತನ ಮಾರ್ಗಕ್ಕೆ ಬಹಳ ಅಪಕೀರ್ತಿ ತರಿಸುತ್ತಾರೆ. Romanism

Protestantism.

ಇಂಥಾ ವಿಗ್ರಹಗಳೂ ಲೋಕಾಚಾರಗಳೂ ಇಲ್ಲದೆ ಯೇಸುಕ್ರಿಸ್ತನನ್ನು ಸೇವಿಸುವವರು ಆತನ ವಾಕ್ಯಕ್ಕೆ ಸರಿಯಾಗಿ ನಡಿಯುತ್ತಾರೆ. ಇವರು ಪ್ರೊತೆಸ್ತಾಂತ್ ಸಭೆಯವರೆಂದು ಹೇಳಲ್ಪಡುತ್ತಾರೆ.

೫. ಮಹಮ್ಮದನ ಮತ.

5. MOHAMMEDANISM.

ಯೇಸುಕ್ರಿಸ್ತನ ಅವತಾರವತ್ತಿ ೬೨೨ ವರುಷಗಳ ತರುವಾಯ ಅರಬಿ ದೇಶದಲ್ಲಿ ಹುಟ್ಟಿದ ಮಹಮ್ಮದ್ ಎಂಬವನು ತಾನು ಮನುಷ್ಯರಿಗೆ ಜ್ಞಾನಬೋಧನೆ ಸಂಪೂರ್ಣವಾಗಿ ಹೇಳಿ ಅವರಲ್ಲಿ ಹೊಸ ಮಾರ್ಗವನ್ನು ಸ್ಥಾಪಿಸುವದಕ್ಕೆ ಕಳುಹಿಸಲ್ಪಟ್ಟಿದ್ದೇನೆಂದು ಹೇಳಿ ಸತ್ಯವೇದವನ್ನೂ ಇನ್ನು ಕೆಲವು ಪುಸ್ತಕಗಳನ್ನೂ ನೋಡಿ ಅವುಗಳಿಂದ ಕೆಲವು ಒಳ್ಳೇ ಮಾತುಗಳನ್ನು ತೆಗದು ತನ್ನ ಬುದ್ಧಿಯ ಪ್ರ

Its founder. Its nature.

ಕಾರವಾಗಿಯೂ ತನಗೆ ಸಹಾಯ ಕೊಟ್ಟವರ ಬುದ್ಧಿಯ ಪ್ರಕಾರವಾಗಿಯೂ ಖುರಾನ್ ಎಂಬುವ ಪುಸ್ತಕವನ್ನು ಕಲ್ಪಿಸಿ ತನ್ನನ್ನು ದೇವರಿಂದ ಬಂದ ಮಹಾತ್ಮನ ಹಾಗೆ ಸ್ಥಾಪಿಸಿಕೊಂಡು ಬರಬರ ಬಲ ಹೊಂದಿ ದಂಡುಗಳನ್ನು ಕೂಡಿಸಿ

Its propagation. ಅನೇಕ ದೇಶಸ್ಥರ ಸಂಗಡ ಜಗಳವಾಡಿ ತನ್ನ ಶಿಷ್ಯರಿಗೆ ಗುರುತಾಗಿರುವ ಸುನ್ನತಿಯನ್ನು ಆದೇಶಸ್ಥರಿಗೆ ಕೊಡಿಸಿ ಬಲವಂತದಿಂದ ಅವರನ್ನು ತನ್ನ ಮತದಲ್ಲಿ ಸೇರಿಸಿಕೊಂಡನು. ಅವನು ಮಾಡಿದ ಬೋಧನೆಗಳಲ್ಲಿ ಕೆಲವು ಒಳ್ಳೇವಾಗಿರುವದರಿಂದಲೂ ಕೆಲವು ಮನುಷ್ಯರ ಕೆಟ್ಟ ಸ್ವಭಾವಕ್ಕೆ ಸರಿಯಾಗಿರುವದರಿಂದಲೂ ಆ ಕಾಲದಲ್ಲಿ ಭೂಮಿಯಲ್ಲಿ ಬಹಳ

Causes of its progress. ಅಜ್ಞಾನದ ಕತ್ತಲು ಇದ್ದದರಿಂದಲೂ ಅವನು ಸ್ಥಾಪಿಸಿದ ಮತ ಪ್ರಬಲವಾಗುತ್ತಾ ಬಂತು. ಮೊದಲು ಬಲವಂತದಿಂದಲಾದರೂ ರಾಜಿಯಿಂದಲಾದರೂ ಆ ಮತದಲ್ಲಿ ಸೇರಿದವರ ಮಕ್ಕಳು ಹಾಗೆಯೇ ಈವರಿಗೂ ನಡಿಯುತ್ತಾ ಬಂದಿದ್ದಾರೆ. ಆದರೆ ಮಹಮ್ಮದನ ಮತದವರು ಈಗ ಕಡಿಮೆಯಾಗುತ್ತಾ ಬರುತ್ತಾರೆ.

6. Numbers professing the above religions.

೬. ಈ ವಿಧವಿಧವಾದ ಮತಗಳಲ್ಲಿ ಸೇರಿರುವವರು ಸ್ವಲ್ಪ ಹೆಚ್ಚುಕಡಿಮೆಯಾಗಿ ಎಷ್ಟೆಂದರೆ.

	ಜನ.
ಹಿಂದೂ ಮತದವರು	೧೦,೦೦,೦೦,೦೦೦
ಬೌದ್ಧ ಮತದವರು	೪೦,೦೦,೦೦,೦೦೦
ಶಿಕಿಷ್ ಮೊದಲಾದ ವಿಗ್ರಹಾರಾಧಕರು	೧೦,೦೦,೦೦,೦೦೦
ಯೆಹೂದಿಯರು	೫೦,೦೦,೦೦೦
ಕ್ರೀಸ್ತಿಯರು	೨೬,೦೦,೦೦,೦೦೦
ಮಹಮ್ಮದಿನವರು	೧೦,೦೦,೦೦,೦೦೦
ಒಟ್ಟು.	೯೬,೫೦,೦೦,೦೦೦

೭. ಈ ಮತಗಳಲ್ಲಿ ದೇವರಿಂದ ಬಂದದ್ದೂ ಸತ್ಯ ಸಾಕ್ಷಿಗಳಿಂದ ಸ್ಥಾಪಿಸಲ್ಪಟ್ಟದ್ದೂ ಮನುಷ್ಯರಲ್ಲಿ ಪಾಪ ಪರಿಹಾರ, ಸಮಾಧಾನ, ನೀತಿ, ಪ್ರೀತಿ, ಸಂತೋಷಗಳನ್ನು ಹುಟ್ಟಿಸತಕ್ಕದ್ದೂ ಒಂದೇ, ಯಾವದಂದರೆ ಕ್ರೀಸ್ತಮತವೇ. 7. But one true religion, the Christian.

—o—

SECTION 13.
೧೩. ಅಧ್ಯಾಯ.

—

Civilization.
ಸ್ಥಿತಿ.

—

ಮನುಷ್ಯರಲ್ಲಿರುವ ಬೇರೆಬೇರೆ ಗೋತ್ರಗಳ ಸ್ಥಿತಿ ನೋಡಿದರೆ ಅವರವರಿಗೂ ಹೆಚ್ಚುಕಡಿಮೆ ವುಂಟು.

೧. ಕೆಲವರು ಊರುಗಳಲ್ಲಿ ವಾಸಮಾಡದೆ, ಭೂಮಿಯನ್ನು ಹಸನು ಮಾಡದೆ, ಚಮತ್ಕಾರಗಳನ್ನು ತಿಳಿಯದೆ, ಬೇಟೆ ಆಡುವದರಿಂದಲಾಗಲಿ ಮೀನು ಹಿಡಿಯುವದರಿಂದಲಾಗಲಿ ಕಾಡಿನಲ್ಲಿ ಕೈಗೆ ಸಿಕ್ಕಿದ ಬೇರುಗಳನ್ನು ಪಲ್ಯಗಳನ್ನು ಕಿತ್ತು ತಿಂಬುವದರಿಂದಲಾಗಲಿ ಜೀವನ ಮಾಡಿಕೊಂಡು, ಚರ್ಮಗಳನ್ನು ಉಟ್ಟುಕೊಂಡು, ಗವಿಗಳಲ್ಲಾದರೂ ಕಾಡಿನಲ್ಲಾದರೂ ಬದುಕುತ್ತಾರೆ. ಇಂಥಾವರಲ್ಲಿ ಬಹಳ ಕ್ರೂರವಾದ ಮರ್ಯಾದೆಗಳು ನಡೆಯುತ್ತವೆ. ಒಬ್ಬರಸಂಗಡಲೊಬ್ಬರು ಬಹಳ ಜಗಳ ಮಾಡುವದುಂಟು. ಮಧ್ಯ ಆಫ್ರಿಕದಲ್ಲಿರುವವರೂ ಉತ್ತರ ದಕ್ಷಿಣ ಅಮೇರಿಕದಲ್ಲಿಯೂ ಆಸ್ತ್ರೇಲಿ 1. Barbarians.

ಯದಲ್ಲಿಯೂ ಪೊಲಿನೀಶಿಯದಲ್ಲಿಯೂ ಅನೇಕರು ಹೋಗಿದ್ದಾರೆ. ಇವರಿಗೆ ಕಿರಾತಕರೆಂದು ಹೇಳಬಹುದು.

2. Uncivilized.

೨. ಕೆಲವರು ಊರುಗಳಲ್ಲಿ ಯಾವಾಗಲು ವಾಸ ಮಾಡದೆ ಅಲ್ಲಲ್ಲಿ ತಿರುಗಿಕೊಂಡು, ಕುರಿ ದನ ಮೇಯಿಸುವದರಿಂದ ಬದುಕುತ್ತಾರೆ. ಇಂಥಾವರಲ್ಲಿ ಕಿರಾತಕರಲ್ಲಿ ಇರುವದಕ್ಕಿಂತ ಹೆಚ್ಚಾಗಿ ಬುದ್ಧಿ ವುಂಟು. ಆದರೆ ಇವರಲ್ಲಿಯೂ ಕ್ರಮವಾದ ಮರ್ಯಾದೆಗಳು ಇರುವವು. ಇಂಥಾವರು ಆಫ್ರಿಕ ಖಂಡದಲ್ಲಿಯೂ ಏಷ್ಯ ಖಂಡಕ್ಕೆ ಸೇರಿದ ಅರಬಿಯಲ್ಲಿಯೂ ಕೆಲವು ದ್ವೀಪಗಳಲ್ಲಿಯೂ ಇದ್ದಾರೆ. ಇವರಿಗೆ ತಿದ್ದುಪಾಟಿಲ್ಲದವರೆಂದು ಹೇಳಬಹುದು.

3. Half civilized.

೩. ಕೆಲವರು ಪಟ್ಟಣಗಳಲ್ಲಿಯೂ ವೂರುಗಳಲ್ಲಿಯೂ ವಾಸವಾಗಿದ್ದು, ಭೂಮಿಯನ್ನು ಹಸನುಮಾಡಿ, ಬೇರೆಬೇರೆ ಉದ್ಯೋಗಗಳನ್ನು ನಡಿಸುವದರಿಂದ ಜೀವನ ಮಾಡುತ್ತಾರೆ. ಇವರಲ್ಲಿ ದೊರೆತನವೂ ನೀತಿ ನ್ಯಾಯಗಳೂ ಸ್ಥಾಪಿಸಲ್ಪಟ್ಟಿರುವವು. ಇವರಿಗೆ ಸ್ವಲ್ಪ ಚಮತ್ಕಾರವಿರುವದು. ಸ್ವಲ್ಪ ಮರ್ಯಾದೆ ತಿಳಿಯುವದು. ಆದರೆ ಪೂರ್ಣವಾಗಿಲ್ಲ. ಸ್ವಲ್ಪ ಹೆಚ್ಚುಕಡಿಮೆ ಏಷ್ಯ ಖಂಡದಲ್ಲಿರುವವರೆಲ್ಲರು ಇಂಥಾವರೇ, ಮತ್ತು ಉತ್ತರ ಆಫ್ರಿಕದಲ್ಲಿ ಇಂಥಾವರು ಇದ್ದಾರೆ. ಇವರಿಗೆ ಅರೆತಿದ್ದುಪಾಟಾದವರೆಂದು ಹೇಳಬಹುದು.

4. Civilized

೪. ಕೆಲವರು ದೊಡ್ಡ ರಾಜ್ಯಗಳಲ್ಲಿ ವಾಸ ಮಾಡಿ ಬಹು ಚಮತ್ಕಾರಗಳನ್ನು ವಿದ್ಯಗಳನ್ನು ತಿಳಿದು, ಬಹಳ ಮರ್ಯಾದೆಯುಳ್ಳವರಾಗಿದ್ದು, ಸಮುದ್ರಕ್ಕಾಚೆ ಯಿರುವ ದೂರ ದೇಶಸ್ಥರ ಸಂಗಡ ವ್ಯಾಪಾರ ನಡಿಸಿ, ಬುದ್ಧಿಯಲ್ಲಿಯೂ ನೀತಿ ನ್ಯಾಯಗಳಲ್ಲಿಯು ಪ್ರವೀಣರಾಗಿದ್ದು, ಭೂಮಿಯಲ್ಲಿರುವ ಬೇ

ರೆಬೇರೆ ಜನರಿಗೆ ಪ್ರಯೋಜಕರಾಗಿಯೂ ಇದ್ದಾರೆ. ಇಂಥಾವರು ಯೂರೋಪ್ ಖಂಡದಲ್ಲಿಯೂ ಉತ್ತರ ಅಮೇರಿಕದಲ್ಲಿಯೂ ಇದ್ದಾರೆ. ಇವರಿಗೆ ತುಂಬ ತಿದ್ದುಪಾಟಾದ ಜನವೆಂದು ಹೇಳಬಹುದು.

—o—

SECTION 14.
೧೪. ಅಧ್ಯಾಯ.

Government.
ದೊರೆತನಗಳು.

ಬೇರೆಬೇರೆ ಜನಗಳಲ್ಲಿ ಬೇರೆಬೇರೆ ದೊರೆತನಗಳುಂಟು. ಹ್ಯಾಗಂದರೆ

೧. ಕಿರಾತಕರೂ ತಿದ್ದುಪಾಟಿಲ್ಲದವರೂ ಅನೇಕ ಗೋತ್ರಗಳಾಗಿ ವಿಭಾಗಿಸಲ್ಪಟ್ಟು ವೊಂದೊಂದು ಗೋತ್ರವು ವೊಬ್ಬೊಬ್ಬ ಪ್ರಧಾನಿಯಿಂದ ಆಳಲ್ಪಡುವದು. **1. Chiefs, the Heads of Tribes.**

೨. ಅರೆ ತಿದ್ದುಪಾಟಾದ ಜನಗಳು, ತನ್ನ ಮನಸ್ಸು ಬಂದಹಾಗೆ ಆಳುವ ರಾಜನಿಂದ ಆಳಲ್ಪಡುತ್ತಾರೆ. **2. Absolute monarchy.**

೩. ತುಂಬ ತಿದ್ದುಪಾಟಾದವರಲ್ಲಿ ಮೂರು ವಿಧ ದೊರೆತನಗಳುಂಟು. ಹ್ಯಾಗಂದರೆ, **3. Government among the civilized.**

೧) ಕೆಲವು ರಾಜ್ಯದವರು ಸ್ಥಾಪಿಸಲ್ಪಟ್ಟಿರುವ ನೀತಿ ನ್ಯಾಯಗಳ ಪ್ರಕಾರದೊರೆತನ ಮಾಡುವ ಅರಸಗಳಿಂದ ಆಳಲ್ಪಡುತ್ತಾರೆ. ಯೂರೋಪ್ ಖಂಡದಲ್ಲಿರುವ ರಸ್ಸಿಯ (Russia,) ಮೊದಲಾದ ರಾಜ್ಯಗಳಲ್ಲಿ ಹೀಗಿದೆ. **1) Absolute monarchy with laws.**

2) Limited Monarchy. ೨) ಇನ್ನು ಕೆಲ ಪ್ರಜೆಗಳು ತಾವೇ ಆರಿಸಿ ನೇಮಿಸುವ ಸರಕಾರದವರ ಆಲೋಚನೆಯ ಪ್ರಕಾರವಾಗಿಯೂ ದೊಡ್ಡ ವಂಶಸ್ಥರ ಸಂಘಕ್ಕೆ ಸೇರುವವರ ಆಲೋಚನೆಯ ಪ್ರಕಾರವಾಗಿಯೂ ದೊರೆತನ ಮಾಡುವ ಅರಸಗಳಿಂದ ಆಳಲ್ಪಡುತ್ತಾರೆ. ಯೂರೋಪ್ ಖಂಡದಲ್ಲಿರುವ ಗ್ರೇಟ್ ಬ್ರಿಟನ್ (Great Britain,) ಫ್ರಾನ್ಸ್ (France,) ಮೊದಲಾದ ರಾಜ್ಯಗಳಲ್ಲಿ ಹೀಗಿದೆ.

3) Republican government. 3) ಬೇರೆ ಕೆಲವರು ಇಷ್ಟು ವರುಷಗಳಿಗೆ ಒಂದುಸಾರಿ ಪ್ರಜೆಗಳಿಂದ ನೇಮಿಸಲ್ಪಟ್ಟಿರುವ ದೊರೆಯಿಂದಲೂ ಆತನಿಗೆ ಸಹಾಯವಾಗಿ ನೇಮಿಸಲ್ಪಟ್ಟಿರುವ ಸಂಘದವರಿಂದಲೂ ಆಳಲ್ಪಡುತ್ತಾರೆ. ಉತ್ತರ ದಕ್ಷಿಣ ಅಮೇರಿಕದಲ್ಲಿ (N. & S. America,) ಹೀಗಿದೆ.

DESCRIPTION OF COUNTRIES.

ದೇಶಗಳ ವಿವರ.

1. ASIA.

೧. ಏಷ್ಯ.

1. Boundaries. ೧. ಮೇರೆಗಳು. ಪೂರ್ವದಲ್ಲಿ ಪಸಿಫಿಕ್ ಸಮುದ್ರವೂ (Pacific Ocean,) ಪಶ್ಚಿಮದಲ್ಲಿ ಉರಾಲ್ ಬೆಟ್ಟಗಳೂ (Ural Mountains,) ಉರಾಲ್ ನದಿಯೂ (River Ural,) ಕಾಸ್ಪಿಯನ್ ಕಡಲೂ (Caspian Sea,) ಕಪ್ಪು ಕ

ಡಲೂ (Black Sea,) ಆರ್ಕಿಪೆಲ್ಲಗೊ (Archipelago,) ಮೆಡಿಟೆರ್ರೇನಿಯನ್ ಕಡಲೂ (Mediterranean Sea,) ಕೆಂಪು ಕಡಲೂ (Red Sea,) ಉತ್ತರದಲ್ಲಿ ಉತ್ತರ ಸಮುದ್ರ (Northern Ocean,) ದಕ್ಷಿಣದಲ್ಲಿ ಹಿಂದೂ ಸಮುದ್ರವೂ (Indian Ocean.)

೨. ಜನಸಂಖ್ಯೆ ೪೬,೦೦,೦೦,೦೦೦. 2. Population.

೩. ವಿಭಾಗಗಳು. 3. Divisions

೧) ಏಷ್ಯದ ತುರುಕಿ (Asiatic Turkey)
೨) ಅರಬಿ (Arabia)
೩) ಪಾರಶಿ (Persia)
೪) ಅಫ್ಗಾನಿಸ್ಥಾನ (Afghanistan)
೫) ಬೆಲೂಚಿಸ್ಥಾನ (Beloochistan)
೬) ಹಿಂದೂಸ್ಥಾನ (Hindoostan)
೭) ಗಂಗಾನದಿಗಾಚೆ ಕುಂಪಣಿಯವರಿಗೆ ಸೇರಿದ ದೇಶಗಳು (British Provinces beyond the Ganges.)
೮) ಬೂತಾನ್ (Bootan)
೯) ಬರ್ಮ (Burmah)
೧೦) ಸಯಾಮ್ (Siam)
೧೧) ಮಲಾಯ (Malaya)
೧೨) ಕೋಚಿನ್ ಚೀನ (Cochin China)
೧೩) ಚೀನ (China)
೧೪) ಜಾಪಾನ್ (Japan)
೧೫) ತಿಬೆಟ್ (Tibet)

೧೬) ಸ್ವತಂತ್ರ ಟಾರ್ಟರಿ (Independent Tartary)

೧೭) ಚೀನ ಟಾರ್ಟರಿ (Chinese Tartary)

೧೮) ಏಷ್ಯದ ರಸ್ಸಿಯ (Asiatic Russia)

೧೯) ಏಷ್ಯ ಖಂಡಕ್ಕೆ ಸೇರುವ ದ್ವೀಪಗಳು (Islands connected with Asia.)

4. Remarks ೪. ವಿವರ. ಭೂಮಿ ವಿಂಗಡಿಸಲ್ಪಟ್ಟಿರುವ ಯೆಲ್ಲಾ ವಿಭಾಗಗಳಲ್ಲಿ ಏಷ್ಯ ಖಂಡವು ದೊಡ್ಡದು. ಇದರಲ್ಲಿ ಬಹಳ ದೊಡ್ಡ ನದಿಗಳೂ ಯೆತ್ತರವಾದ ಬೆಟ್ಟಗಳೂ ವುಂಟು. ಹಿಂದೂಸ್ಥಾನದಲ್ಲಿರುವ ಹಿಮವತ್ಪರ್ವತಗಳು ಭೂಮಿಯಲ್ಲಿರುವ ಯೆಲ್ಲಾ ಪರ್ವತಗಳಲ್ಲಿ ಯೆತ್ತರವಾದವುಗಳು. ದೇವರು ವುಂಟುಮಾಡಿದ ಆದಿಸ್ತ್ರೀ ಪುರುಷರಾದ ಆದಾಮನೂ ಹವ್ವಳೂ ಇದ್ದ ರಮ್ಯವಾದ ಏಡೆನ್ (Eden,) ತೋಟವು ಏಷ್ಯ ಖಂಡದಲ್ಲಿ ಇತ್ತು. ಮತ್ತು ದೇವರ ಕುಮಾರನಾದ ಯೇಸುಕ್ರೀಸ್ತನು ಮನುಷ್ಯರಿಗೋಸ್ಕರ ಪಾಪ ವಿಮೋಚನೆ ಮಾಡುವದಕ್ಕೆ ಅವತಾರ ಯೆತ್ತಿದಾಗ ವಾಸ ಮಾಡಿದ ದೇಶವು ಇದೇ ಖಂಡದಲ್ಲಿ ಇತ್ತು.

I. *Asiatic Turkey.*

೧. ಏಷ್ಯದ ತುರುಕಿ.

---

1. Boundaries. ೧. ಮೇರೆಗಳು. ಪೂರ್ವದಲ್ಲಿ ಪಾರಸಿ (Persia,) ಪಶ್ಚಿಮದಲ್ಲಿ ಆರ್ಕಿಪೆಲ್ಲಗೊ (Archipelago,) ಉತ್ತರದಲ್ಲಿ

ಕಪ್ಪು ಕಡಲೂ (Black Sea,) ದಕ್ಷಿಣದಲ್ಲಿ ಅರಬಿ (Arabia,) ಮೆಡಿಟೆರ್ರೇನಿಯನ್ ಕಡಗಲುಳೂ (Mediterranean Sea.)

೨. ಜನಸಂಖ್ಯೆ. ೧,೨೦,೦೦,೦೦೦, — 2. Population.

೩. ವಿಭಾಗಗಳು	ಮುಖ್ಯ ಪಟ್ಟಣಗಳು.
ಚಿಕ್ಕ ಏಷ್ಯ (Asia Minor).	ಸ್ಮರ್ನ (Smyrna)
ಸಿರಿಯ (Syria)	ಅಲೆಪ್ಪೊ (Aleppo) ದಮಾಸ್ಕಸ್ (Damascus) ತ್ರಿಪೊಲಿ (Tripoli) ಬೇರೂತ್ (Beirout.)
ಪಾಲೆಸ್ತೀನ್ (Palestine)	ಯೆರೂಸಲೇಮ್ (Jerusalem.)

3. Divisions & Chief Towns.

ಈದೇಶಕ್ಕೆ ಪೂರ್ವ ಕಾಲದಲ್ಲಿ ಕಾನಾನ್ (Canaan,) ಇಲ್ಲವೇ ಯೆಹೂದಿಯ (Judea,) ಎಂದು ಹೇಳಲ್ಪಟ್ಟಿತು.

ಇದರಲ್ಲಿ ಇಸ್ರಾಯೇಲಿಯರು ಇಲ್ಲವೇ ಯೆಹೂದಿಯರು ಎಂದು ಹೇಳಲ್ಪಟ್ಟಜನ ವಾಸ ಮಾಡಿದರು. ಮತ್ತು ಈದೇಶದಲ್ಲಿ ಜಗದ್ರಕ್ಷಕನಾದ ಯೇಸು ಕ್ರಿಸ್ತನು ಅವತಾರವೆತ್ತಿ, ದಿವ್ಯ ಬೋಧನೆ ಹೇಳಿ, ಆಶ್ಚರ್ಯವಾದ ಕ್ರಿಯೆಗಳನ್ನು ಮಾಡಿ, ಮನುಷ್ಯರ ಪಾಪಕ್ಕೋಸ್ಕರ ತನ್ನ ಪ್ರಾಣವನ್ನು ಬಲಿಯಾಗಿ ಕೊಟ್ಟು ಪರಲೋಕಕ್ಕೆ ಏರಿಹೋದನು.

ಆರ್ಮೀನಿಯ (Armenia,) — ಎರ್ಜರೂಮ್ (Erzeroum,)

ಆದಿ ಸ್ತ್ರೀಪುರುಷರಾದ ಆದಾಮನೂ ಹವ್ವಳೂ ಇದ್ದ ರಮ್ಯವಾದ ಏದೆನ್ (Eden,) ತೋಟವು ಈ ದೇಶದಲ್ಲಿ ಇಲ್ಲವೇ ಇದರ ಸಮೀಪದಲ್ಲಿ ಒಂದುಕಡೆ ಇತ್ತು.

ಕರ್ಡಿಸ್ಥಾನ (Kurdistan,) — ಬೆಟ್ಲಿಸ್ (Betlis,)

ಪೂರ್ವಕಾಲದಲ್ಲಿದ್ದ ದೊಡ್ಡ ಪಟ್ಟಣವಾದ ನಿನಿವಿ (Nineveh,) ಈ ದೇಶದಲ್ಲಿತ್ತು.

ಐರಾಕ್ ಅರಬಿ (Irak Arabi,) — ಬಾಗ್ದಾಡ್ (Bagdad,) ಬಸ್ಸೊರ (Bussora.)

ಪೂರ್ವ ಕಾಲದಲ್ಲಿದ್ದ ದೊಡ್ಡ ಪಟ್ಟಣವಾದ ಬಾಬಿಲೋನ್ (Babylon,) ಈ ದೇಶದಲ್ಲಿತ್ತು.

ಅಲ್ಜಿಸ್ಸಿರ (Algezira) — ದಯಾರ್ಬೆಕ್ಕುರ್ (Diarbekir) ಮೋಸಲ್ (Mosul,)

ಪೂರ್ವ ಕಾಲದಲ್ಲಿ ಈ ದೇಶಕ್ಕೆ ಮೆಸೊಪೊಟೇಮಿಯ (Mesopotamia,) ಯೆಂಬುವ ಹೆಸರಿತ್ತು. ಇಸ್ರಾಯೇಲಿಯರಿಗೆ ಮೂಲ ಪುರುಷನಾದ ಅಬ್ರಹಾಮನು ಮೊದಲು ಇದ್ದ ದೇಶವು ಇದೇ.

ಸೈಪ್ರಸ್ ದ್ವೀಪ (Cyprus.) — ನಿಕೋಸಿಯ (Nicosia)

೪. ಬೆಟ್ಟಗಳು.

4. Mountains.

ಅರರಾಟ್ (Ararat,) ಟಾರಸ್ (Taurus.)

* ಜಲಪ್ರಳಯವಾದ ತರುವಾಯ ನೋಹನ ಹಡಗವು ಅರರಾಟ್ ಬೆಟ್ಟಗಳ ಮೇಲೆ ನಿಂತಿತು.

೫. ನದಿಗಳು.

5. Rivers.

ಯೂಫ್ರೇಟೀಸ್ (Euphrates,) ಟೈಗ್ರಿಸ್ (Tigris,) ಯೋರ್ಡೆನ್ (Jordan,)

ಯೂಫ್ರೇಟೀಸ್ ಟೈಗ್ರಿಸ್ ನದಿಗಳು ಆದಿ ಸ್ತ್ರೀಪುರುಷರಾದ ಅದಾಮನೂ ಹವ್ವಳೂ ಇದ್ದ ಏದೆನ್ (Eden,) ತೋಟದ ಮಧ್ಯದಲ್ಲಿ ಹರಿದವು.

ಇಸ್ರಾಯೇಲಿಯರು ಕಾನಾನ್ ದೇಶದಲ್ಲಿ ಪ್ರವೇಶಿಸುವಾಗ ಯೋರ್ದೆನ್ ನದಿಯನ್ನು ಆಶ್ಚರ್ಯವಿಧವಾಗಿ ದಾಟಿದರು. ಅದರ ನೀರು ಉಬ್ಬಿ ದಡಗಳನ್ನು ಮೀರಿದ ಕಾಲದಲ್ಲಿ ದೇವರು ತನ್ನ ಜನರಿಗೋಸ್ಕರ ಅದರ ಮಧ್ಯದಲ್ಲಿ ದಾರಿ ಮಾಡಿದನು. ನೀರು ಈಕಡೆಯೂ ಆಕಡೆಯೂ ಗೋಡೆಯಹಾಗೆ ನಿಂತು ಅವರು ದಾಟಿಹೋಗುವ ಪರಿಯಂತರ ಮಾರ್ಗ ಬಿಟ್ಟಿತು.

೬. ಕೆರೆ.

6. Lake. Dead Sea.

ಮೃತ್ಯುಕಡಲೆಂಬುವಂಥಾದ್ದು.

ಇದಕ್ಕೆ ಕಡಲೆಂಬುವ ಹೆಸರು ಇದ್ದಾಗ್ಯೂ ಕಡಲಲ್ಲ.

ವಿಸ್ತಾರವಾದ ಕೆರೆಯೇ. ಈ ಕೆರೆ ಯಿರುವ ಸ್ಥಳದಲ್ಲಿ ಪೂರ್ವ ಕಾಲದಲ್ಲಿ ಸೊಡೋಮ್ (Sodom,) ಗೊಮೋರ್ (Gomorrah,) ವೆಂಬುವ ಪಟ್ಟಣಗಳು ಇದ್ದವು. ಈ ಪಟ್ಟದವರ ಪಾಪಕ್ಕೋಸ್ಕರ ದೇವರು ಅವರನ್ನು ಅವರ ಪಟ್ಟಣಗಳನ್ನು ಬೆಂಕಿಯಿಂದಲೂ ಗಂಧಕದಿಂದಲೂ ಸುಟ್ಟುಬಿಟ್ಟನು. ಆ ಕಾಲದಿಂದ ಈವರೆಗೂ ಆ ಸ್ಥಳದಲ್ಲಿ ಈ ದೊಡ್ಡ ಕೆರೆ ವುಂಟು.* ಅದರ ನೀರಿನಲ್ಲಿ ಮೀನುಗಳು ಬದುಕಲಾರವು. ಅದರ ದಡಗಳಲ್ಲಿ ಹುಲ್ಲು ಪಲ್ಯಗಳು ಬೆಳೆಯುವದಿಲ್ಲ. ಇದರಿಂದ ಅದಕ್ಕೆ ಮೃತ್ಯುಸಮುದ್ರವೆಂಬುವ ಹೆಸರಾಯಿತು.

7. Remarks ೭. ವಿವರ. ಏಷ್ಯದ ತುರಕಿಯಲ್ಲಿ ಬೇರೆಬೇರೆ ಗೋತ್ರಗಳವರು ಇದ್ದಾರೆ. ಆದರೆ ಅದರ ಜನಗಳಲ್ಲಿ ತುರುಕರು ಮುಖ್ಯ. ಮತ್ತು ಅನೇಕ ಕ್ರೀಸ್ತಿಯರು ಅಲ್ಲಿ ಇದ್ದಾರೆ. ದೇಶ ಒಳ್ಳೇದಾಗಿದೆ. ಅದರ ಘಾಳಿ ಆರೋಗ್ಯವಾದದ್ದು. ಭೂಮಿ ಚೆನ್ನಾಗಿ ಫಲ ಕೊಡುವಂಥಾದ್ದು. ವಿಧವಿಧವಾದ ಹಣ್ಣುಗಳು ಅಲ್ಲಿ ಬೆಳೆಯುತ್ತವೆ. ಆದರೆ ಆರಂಭ ಮಾಡುವವರು ಅನೇಕರಿಲ್ಲದದರಿಂದ ಧಾನ್ಯಗಳನ್ನು ಬೆಳಸುವದು ಸ್ವಲ್ಪ ಕಡಿಮೆ. ಜನಗಳಲ್ಲಿ ಅನೇಕರು ಕುರಿ ದನ ಮೇಯಿಸುವವರಾಗಿದ್ದಾರೆ. ಬೆಟ್ಟಗಳ ಮೇಲೆಯೂ ಕಪ್ಪು ಕಡಲಿನ ಸಮೀಪದಲ್ಲಿಯೂ ಕಾಡುಗಳುಂಟು. ಇವುಗಳಲ್ಲಿ ಸಿಂಹ, ನರಿ, ಜಿಂಕೆ, ಮೊದಲಾದವುಗಳು ಅವೆ. ಆದೇಶದ ಕುರಿ ಮೇಕೆಗಳಿಗೆ ಉದ್ದವಾದ ಕೂದಲುಗಳುಂಟು. ಇದರಿಂದ ಒಳ್ಳೆ ಬಟ್ಟೆ ಮಾಡುತ್ತಾರೆ. ಚಿಕ್ಕ ಏಷ್ಯದಲ್ಲಿರುವ ಒಲಿಂಪಸ್ (Olympus,) ಬೆಟ್ಟದ ಬುಡದ ಹತ್ತಿರ ಔಷದ ಸ್ವಭಾವವುಳ್ಳ ಬಿಸಿನೀರಿನ ಬುಗ್ಗೆ ಅದೆ.

2. *Arabia*.

೨. ಅರಬಿ.

---

೧. ಮೇರೆಗಳು. ಪೂರ್ವದಲ್ಲಿ ಪಾರಶಿ ಕೊಲ್ಲಿ (Persian Gulf,) ಪಶ್ಚಿಮದಲ್ಲಿ ಕೆಂಪು ಕಡಲು (Red Sea,) ಉತ್ತರದಲ್ಲಿ ಏಷ್ಯದ ತುರುಕಿ (Asiatic Turkey,) ದಕ್ಷಿಣದಲ್ಲಿ ಹಿಂದೂಸಮುದ್ರ (Indian Ocean) **1. Boundaries.**

೨. ಜನ ಸಂಖ್ಯೆ. ೧,೦೦,೦೦,೦೦೦ **2. Population.**

೩. ಮುಖ್ಯ ಪಟ್ಣಗಳು. **3. Chief Towns.**

ಮಕ್ಕಾ (Mecca.) — ಇಲ್ಲಿ ತುರುಕರ ದೀರ್ಘದರ್ಶಿಯಾದ ಮಹಮ್ಮದನು ಹುಟ್ಟಿದನು. ಅಲ್ಲಿ ದೊಡ್ಡ ಗುಡಿ ವುಂಟು. ಬೇರೆ ಸೀಮೆಗಳಲ್ಲಿರುವ ತುರುಕರಲ್ಲಿ ಅನೇಕರು ಅಲ್ಲಿಗೆ ಯಾತ್ರೆಯಾಗಿ ಹೋಗುವರು. ಹೀಗೆ ಮಾಡುವದು ಬಹಳ ಪುಣ್ಯವೆಂದು ಯೆಣಿಸುತ್ತಾರೆ.

ಮದೀನ (Medina.) — ಇಲ್ಲಿ ಮಹಮ್ಮದನ ಸಮಾಧಿ ಅದೆ.

ಮಸ್ಕಾಟ್ (Muscat.) — ಇಲ್ಲಿ ಬಹಳ ವ್ಯಾಪಾರ ನಡೆಯುತ್ತದೆ.

ಮೊಖ (Mocha.) — ಇಲ್ಲಿಬಹಳ ಪ್ರೌಢ ಕಾಪಿ ಬೀಜ ಬೆಳೆಯುತ್ತದೆ. ಈ ಬೀಜದ ವ್ಯಾಪಾರ ಅಲ್ಲಿ ಬಹಳ ನಡೆಯುತ್ತದೆ.

ಏಡೆನ್ (Aden.) — ಹಿಂದೂಸ್ಥಾನದಿಂದ ಗ್ರೇಟ್ ಬ್ರಿಟನಿಗೆ (Great Britain,) ಹೋಗೆ ಹಡಗಗಳನ್ನು

ನಡಿಸುವಂಥಾವರು, ಅಲ್ಲಿಂದ ಇಲ್ಲಿಗೂ ಬರುವ ವರು, ಹಡಗಗಳನ್ನು ಈ ವೂರಿನ ಬಳಿಯಲ್ಲಿ ನಿಲ್ಲಿಸಿ ತಮ್ಮ ಕೆಲಸಕ್ಕೆ ಬೇಕಾದವುಗಳನ್ನು ಹಡಗದಲ್ಲಿ ಸೇರಿಸಿಕೊಳ್ಳುವರು.

೪. ಬೆಟ್ಟವು.

4. Mountain. ಸಿನಾಯಿ (Sinai) } ಈ ಬೆಟ್ಟದಲ್ಲಿ ಪೂರ್ವ ಕಾಲದಲ್ಲಿ ದೇವರು ಇಸ್ರಾಯೇಲಿಯರಿಗೆ ಪ್ರತ್ಯಕ್ಷವಾಗಿ ಅವರಿಗೆ ಮೋಶೆಯ ಮುಖಾಂತ್ರ ನ್ಯಾಯಪ್ರಮಾಣ ಕೊಟ್ಟನು.

ಅದರ ಸಮೀಪದಲ್ಲಿರುವ ಕಾಡಿನಲ್ಲಿ ಇಸ್ರಾಯೇಲಿಯರು ಕಾನಾನ್ ದೇಶಕ್ಕೆ ಹೋಗುವಾಗ ೪೦ ವರುಷಗಳ ಪರಿಯಂತರ ತಿರುಗಾಡಿದರು.

5. Cape. ೫. ಮೂಲೆ. ಬೇಬೆಲ್ಮಾಂಡಿಬ್ (Babel-mandeb.)

6. Straits. ೬. ಗೊಂದಿ. ಬೇಬೆಲ್ಮಾಂಡಿಬ್ (Babel-mandeb.)

7. Remarks ೭. ವಿವರ. ಅರಬಿ ಜನರು ಮಹಮ್ಮದನ ಮತದವರಾಗಿದ್ದಾರೆ. ಅವರಲ್ಲಿ ಅನೇಕರು ಸ್ಥಿರವಾಗಿ ಊರುಗಳಲ್ಲಿ ವಾಸ ಮಾಡುವವರಲ್ಲ. ಅಲ್ಲಲ್ಲಿ ತಿರುಗಾಡಿ ಕುರಿ ದನ ಮೇಯಿಸುವದರಿಂದಲಾಗಲಿ, ಪ್ರಯಾಣ ಮಾಡುವವರನ್ನು ಕೊಳ್ಳೆ ಯಿಡುವದರಿಂದಲಾಗಲಿ, ಜೀವನ ಮಾಡುತಾರೆ. ಕೆಂಪು (Red Sea,) ಅರಬಿ ಕಡಲುಗಳೂ (Arabian Sea,) ಪಾರಶಿ ಕೊಲ್ಲಿಯೂ (Persian Gulf,) ಇವುಗಳ ಕಡ

ಗಳ ಸಮೀಪದಲ್ಲಿರುವವರು ಮಾತ್ರ ಊರುಗಳನ್ನು ಕಟ್ಟಿ ಅಲ್ಲಿ
ವಾಸವಾಗಿದ್ದಾರೆ. ಅರಬಿ ದೇಶದ ಮಧ್ಯಭಾಗದಲ್ಲಿ ಬಹು ವಿ
ಸ್ತಾರವಾದ ಮರಳಿನ ಭೂಮಿಗಳುಂಟು. (Deserts,) ಇವುಗ
ಳಲ್ಲಿ ಅಲ್ಲಲ್ಲಿ ಹೊಂದಿಕೊಂಡು ದೂರವಾಗಿ ನೀರು ಹುಲ್ಲು
ಇರುವ ಸ್ಥಳಗಳು (Oases,) ಅವೆ. ಮತ್ತೆಲ್ಲೆಲ್ಲಿಯು ನೀರಾ
ದರೂ ಹುಲ್ಲಾದರೂ ಗಿಡವಾದರೂ ಸಿಕ್ಕುವದಿಲ್ಲ. ಅಲ್ಲಿ
ಜನರು ಒಬ್ಬರಿಬ್ಬರಾಗಿ ಪ್ರಯಾಣ ಮಾಡುವದಿಲ್ಲ. ಅ
ನೇಕರು ಕೂಡಿಕೊಂಡು ಗುಂಪು ಗುಂಪಾಗಿ ಹೋಗುವರು.
ಇಂಥಾ ಪ್ರಯಾಣಗಳಲ್ಲಿ ಬೇರೆ ಪದಾರ್ಥಗಳು ಅಲ್ಲದೆ ಜನ
ರು ತಮ್ಮ ಸಂಗಡ ನೀರು ಸಹ ತೆಗದುಕೊಂಡು ಹೋಗಬೇ
ಕಾಗಿದೆ. ಈ ನೀರು ಖರ್ಚಾದಮೇಲೆ ನೀರಿರುವ ಸ್ಥಳ ಸಿ
ಕ್ಕದಿದ್ದರೆ ಜನರು ದಾಹದಿಂದಲೂ ಸಿವೆಯಿಂದಲೂ ಬಹ
ಳ ಕಷ್ಟಪಡುವರು. ಇಂಥಾ ಸ್ಥಳಗಳಲ್ಲಿ ಪ್ರಯಾಣ ಮಾಡು
ವವರಿಗೆ ಒಂಟೆಗಳು ಬಹಳ ಪ್ರಯೋಜನವಾಗಿರುತ್ತವೆ.
ಯಾತಕ್ಕಂದರೆ ಇವು ಬಹಳ ಕಾಲದವರಿಗೂ ನೀರು ಕುಡಿ
ಯದೆ ಸಂಚಾರ ಮಾಡುವವು. ಆ ದೇಶದಲ್ಲಿರುವ ಮರಳಿನ
ಭೂಮಿಗಳಮೇಲೆ ಆಗಾಗ್ಯೆ ದೊಡ್ಡ ಧೂಳಿ ಬೀಸುವದುಂಟು.
ಅಂಥಾ ಸಮಯದಲ್ಲಿ ಅಂತರಿಕ್ಷವು ಮರಳಿನಿಂದ ತುಂಬು
ತ್ತದೆ. ಪ್ರಯಾಣ ಮಾಡುವವರಿಗೆ ಬಹಳ ಕಷ್ಟವಾಗುತ್ತದೆ.
ಕೆಂಪು (Red Sea,) ಅರಬಿ ಕಡಲುಗಳ (Arabian Sea,)
ಸಮೀಪದಲ್ಲಿಯೂ ಪಾರಸಿ ಕೊಲ್ಲಿಯ (Persian Gulf,) ಸ
ಮೀಪದಲ್ಲಿಯೂ ಇರುವ ದೇಶವು ಒಳ್ಳೇದಾಗಿಯೂ ಬಹು
ಫಲ ಕೊಡುವಂಥಾದ್ದಾಗಿಯೂ ಇದೆ. ಈ ಸ್ಥಳಗಳಲ್ಲಿ ಆಲ
ಹುಣಸಿ ಖರ್ಜೂರ ಮರಗಳೂ, ದಾಳಿಂಬ, ಕಿತ್ತಳೆ, ಅರಳೆ,

ಕಾಪಿ, ವಿಧವಿಧವಾದ ಸುಗಂಧವಾದ ಗಿಡಗಳು, ಚನ್ನಾಗಿ ಬೆಳೆಯುತ್ತವೆ. ಅರಬಿ ದೇಶದಲ್ಲಿ ಚಿರತೆ, ನರಿ, ತೋಳ, ಮೊದಲಾದ ಅನೇಕ ದುಷ್ಟ ಮೃಗಗಳುಂಟು. ಸಾಧು ಮೃಗಗಳಲ್ಲಿ ಒಂಟೆಯೂ ಕುದರೆಯೂ ಮುಖ್ಯ. ಕುದುರೆಗಳು ಬಹಳ ಒಳ್ಳೇವು. ಶೀಘ್ರವಾಗಿ ಓಡುವಂಥಾವು.

---

3. *Persia.*

3. ಪಾರಶಿ.

---

1. Boundaries. ೧. ಮೇರೆಗಳು. ಪೂರ್ವದಲ್ಲಿ ಅಫ್ಗಾನಿಸ್ಥಾನ (Afghanistan,) ಪಶ್ಚಿಮದಲ್ಲಿ ಏಷ್ಯದ ತುರಕಿ (Asiatic Turkey,) ಉತ್ತರದಲ್ಲಿ ಜೋರ್ಜಿಯ (Georgia,) ಕಾಸ್ಪಿಯನ್ ಕಡಲು (Caspian Sea,) ಸ್ವತಂತ್ರ ಟಾರ್ಟರಿ (Independent Tartary,) ದಕ್ಷಿಣದಲ್ಲಿ ಪಾರಶಿ ಕೊಲ್ಲಿ (Persian Gulf.)

2. Population. ೨. ಜನ ಸಂಖ್ಯೆ. ೯೦,೦೦,೦೦೦

3. Chief Towns. ೩. ಮುಖ್ಯ ಪಟ್ಟಣಗಳು.

ಟೆಹೆರಾನ್ (Teheran.) — ಇದು ಪಾರಶಿಗೆ ಸಂಸ್ಥಾನವು.

ಇಸ್ಪಹಾನ್ (Ispahan.) — ಪೂರ್ವ ಕಾಲದಲ್ಲಿ ಇದು ಪಾರಶಿಗೆ ಸಂಸ್ಥಾನವಾಗಿತ್ತು. ಈಗಲು ಆ ದೇಶದಲ್ಲಿರುವ ಎಲ್ಲಾ ಪಟ್ಟಣಗಳಿಗಿಂತ ಇದರಲ್ಲಿ ಹೆಚ್ಚಾದ ಜನರು ಇದ್ದಾರೆ.

ಶಿರಾಸ್ (Shiraz.) } ಇದು ಪೂರ್ವದ ಕಡೆಯಲ್ಲಿ ಇದೆ. ಈ ಊರಿನಲ್ಲಿ ಬಹಳ ಒಳ್ಳೆ ದ್ರಾಕ್ಷಿ ರಸ ಮಾಡುತ್ತಾರೆ.

೪. ಬೆಟ್ಟಗಳು. 4. Mountains.

ಎಲ್ಬರ್ಸ್ (Elburz)

೫. ವಿವರ. ಪಾರಶಿ ದೇಶದ ದಕ್ಷಿಣದಿಕ್ಕಿನಲ್ಲಿ ಬಹಳ ಬೀಡು ಭೂಮಿ (Desert,) ಅದೆ. ಆದರೆ ಉತ್ತರ ದಿಕ್ಕಿನಲ್ಲಿ ಫಲ ಚನ್ನಾಗಾಗುತ್ತದೆ. ಅಲ್ಲಿ ವಿಧವಿಧವಾದ ಒಳ್ಳೆ ಮರಗಳೂ ಹಿಪ್ಪಲಿ ನೇರಳೆ, ಅರಳೆ ಗಿಡಗಳೂ, ಅಂಜೂರ, ದಾಳಿಂಬ, ಬಾದಾಮಿ, ದ್ರಾಕ್ಷಿ, ಕಿತ್ತಲೆ, ಹಣ್ಣುಗಳೂ, ಗೋಧಿ, ನೆಲ್ಲು, ಕಬ್ಬು, ಮೊದಲಾದವುಗಳು, ಬೆಳಿಯುತ್ತವೆ. ಆ ದೇಶದ ಕುದರೆಗಳು ಅರಬಿ ದೇಶದ ಕುದರೆಗಳಷ್ಟು ಕೀವ್ರವಾಗಿ ಓಡಲಾರವು. ಆದರೆ ಅವು ಕಿಂತ ಅಂದವಾಗಿವೆ. ಕುರಿಗಳಿಗೆ ಬಹಳ ದೊಡ್ಡ ಬಾಲಗಳುಂಟು. ಈ ಬಾಲಗಳಲ್ಲಿ ಕೆಲವು ೩೦ ಸೇರುಗಳಷ್ಟು ತೂಕವಾಗಿವೆ. ಪಾರಶಿಯಲ್ಲಿ ಸಿಂಹ, ಚಿರತೆ, ಕರಡಿ, ಕಾಡು ಹಂದಿಗಳು, ವುಂಟು. ಜನರು ಬಹಳ ಮರ್ಯಾದೆ ಯುಳ್ಳವರಾಗಿದ್ದಾರೆ. ಜಂಬುಖಾನೆ, ರೇಶಿಮೆ, ವಿಧವಿಧವಾದ ಒಳ್ಳೆ ಬಟ್ಟೆಗಳನ್ನು ಚನ್ನಾಗಿ ನೇಯುವರು. ಅವರು ಮಹಮ್ಮದನ ಮತಸ್ಥರಾಗಿದ್ದಾರೆ. 5. Remarks

—o—

4. *Afghanistan.*

೪. ಅಫ್ಗಾನಿಸ್ಥಾನ.

---

೧. ಮೇರೆಗಳು. ಪೂರ್ವದಲ್ಲಿ ಪಂಜಾಬ್ (Punjab,) 1. Boundaries.

ಪಶ್ಚಿಮದಲ್ಲಿ ಪಾರಶಿ (Persia,) ಉತ್ತರದಲ್ಲಿ ಸ್ವತಂತ್ರ ಟಾರ್ಟರಿ (Independent Tartary,) ದಕ್ಷಿಣದಲ್ಲಿ ಬೆಲೂಚಿಸ್ಥಾನ (Beloochistan.)

2. Population. ೨. ಜನಸಂಖ್ಯೆ. ೫೦,೦೦,೦೦೦.

3. Chief Towns. ೩. ಮುಖ್ಯ ಪಟ್ಟಣಗಳು. ಕಾಬೂಲ್ (Cabul,) ಹೀರಾತ್ (Herat,) ಗಿಜ್ನಿ (Ghizni,) ಜಲಾಲಬಾಡ್ (Jellalabad,) ಕಾಂದಹಾರ್ (Candahar.)

4. Mountains. ೪. ಬೆಟ್ಟಗಳು. ಹಿಂದೂಕೂಷ್ (Hindoo Coosh.)

5. River. ೫. ನದಿ. ಕಾಬೂಲ್ (Cabul.)

6. Remarks ೬. ವಿವರ. ಉತ್ತರ ದಿಕ್ಕಿಗೆ ಅಫ್ಗಾನಿಸ್ಥಾನ ಬೆಟ್ಟಗಳುಳ್ಳ ಶೀಮೆಯಾಗಿದೆ. ಮತ್ತು ದನಗಳು ಚನ್ನಾಗಿ ಮೇಯತಕ್ಕ ಮೈದಾನಗಳುಂಟು. ದಕ್ಷಿಣ ಭಾಗದಲ್ಲಿ ಬಹಳ ಬೀಡು ಭೂಮಿ ಅದೆ. ಅಫ್ಗಾನ್ ಜನರು ಬಲಿಷ್ಟರಾಗಿಯೂ ಸ್ವೈರಸ್ಥರಾಗಿಯೂ ಯುದ್ಧ ಮಾಡುವದರಲ್ಲಿ ಘಟ್ಟಿಗರಾಗಿಯೂ ಇದ್ಧಾರೆ. ಮಹಮ್ಮದನ ಮತಸ್ಥರಾಗಿದ್ಧಾರೆ.

—o—

5. *Beloochistan.*

೫. ಬೆಲೂಚಿಸ್ಥಾನ.

1. Boundaries. ೧. ಮೇರೆಗಳು. ಪೂರ್ವದಲ್ಲಿ ಸಿಂಧುದೇಶ (Sind,) ಪಶ್ಚಿಮದಲ್ಲಿ ಪಾರಶಿ (Persia,) ಉತ್ತರದಲ್ಲಿ ಅಫ್ಗಾನಿಸ್ಥಾನ (Afghanistan,) ದಕ್ಷಿಣದಲ್ಲಿ ಹಿಂದೂ ಸಮುದ್ರ (Indian Ocean.)

೨. ಜನಸಂಖ್ಯೆ. ೨೦,೦೦,೦೦೦ — 2. Population.

೩. ಮುಖ್ಯಪಟ್ಟ. ಕಿಲಾಟ್ (Kelat.) — 3. Chief Town.

೪. ವಿವರ. ಬೆಲೂಚಿಸ್ಥಾನ ಬೆಟ್ಟಗಳುಳ್ಳ ಶೀಮೆ. ಅದರ ಭೂಮಿ ಅಲ್ಲಲ್ಲಿ ಪೈರು ಬೆಳಿಸುವದಕ್ಕೆ ಅಷ್ಟು ಪೊಳ್ಳೇದಲ್ಲ. ಆದರೆ ಅನೇಕ ಸ್ಥಳಗಳಲ್ಲಿ ಧಾನ್ಯ ಮೊದಲಾದವುಗಳು ಚನ್ನಾಗುತ್ತವೆ. ಜನರು ಧೈರ್ಯಸ್ಥರಾಗಿಯೂ ಆಗಾಗ್ಯೆ ಪ್ರಯಾಣ ಮಾಡುವವರನ್ನು ಕೊಳ್ಳೆ ಯಿಡುವವರಾಗಿಯೂ ಇದ್ಧಾರೆ. ಅವರು ಮಹಮ್ಮದನ ಮತಸ್ಥರು. — 4. Remarks

—o—

6. *Hindoostan.*

೬. ಹಿಂದೂಸ್ಥಾನ.

೧. ಮೇರೆಗಳು. ಪೂರ್ವದಲ್ಲಿ ಭೂತಾನ್ (Bhootan,) ಅಸ್ಸಾಮ್ (Assam,) ಬರ್ಮ (Burmah,) ಅರಕಾನ್ (Arracan,) ಬಂಗಾಳ ಕೊಲ್ಲಿ (Bay of Bengal,) ಪಶ್ಚಿಮದಲ್ಲಿ ಅರಬಿ ಕಡಲು (Arabian Sea,) ಸಿಂಧೂ ನದಿ (Indus,) ಉತ್ತರದಲ್ಲಿ ಹಿಮವತ್ಪರ್ವತಗಳು (Himalaya Mountains,) ದಕ್ಷಿಣದಲ್ಲಿ ಹಿಂದೂ ಸಮುದ್ರ (Indian Ocean.) — 1. Boundaries.

೨. ಜನಸಂಖ್ಯೆ. ೧೪,೧೦,೦೦,೦೦೦ — 2. Population.

೩. ವಿಭಾಗಗಳು. ಶೀಳಗಳು. — 3. Divisions

೧. ಉತ್ತರ ಹಿಂದೂಸ್ಥಾನ. — 1. Northern Hindoostan

೧) ಕಾಶ್ಮೀರ್ (Cashmeer)

೨) ಸರ್ಮೂರ್ (Sirmoor)

౩) గర్వాల్ (Gurwal)

౪) కుమాయూన్ (Kumaoon)

౫) నేపాళ్ (Nepal)

2. Hindoostan Proper

౨. నిజ హిందూస్థాన.

౧) పంజాబ్ (Punjab)

౨) డిల్లి (Delhi)

౩) ఊడ్ (Oude)

౪) బహార్ (Bahar)

౫) బంగాళ్ (Bengal)

౬) మూల్తాన్ (Mooltan)

౭) అజ్మీర్ (Ajmeer)

౮) ఆగ్ర (Agra)

౯) అలహబాడ్ Allahabad)

౧౦) సింధూ (Sind)

౧౧) కొచ్చి (Kuch)

౧౨) గుజరాతి (Guzerat)

౧౩) మల్వ (Malwa)

3. Deccan.

౩. దఖణ.

౧) కాందేష్ (Khandesh)

౨) గోండ్వాన (Gondwana)

౩) ఓఢ్ర (Orissa)

౪) బిరార్ (Berar)

౫) అవరంగబాడ్ (Aurungabad)

౬) బీదర్ (Beder)

౭) హైదరాబాద్ (Hyderabad)

౮) ఉత్తర సరకారగళు (Northern Circars)

౯) బిజాపుర (Bejapoor)

౪. దక్షిణ హిందూస్థాన.

4. Southern India.

౧) దూవాబ్ (Dooab)

౨) ఒప్పిసిద గడిగళు (Ceded Districts)

౩) ఉత్తర కర్నాటక (Northern Carnatic)

౪) కనర (Canara)

౫) మైసూరు (Mysore)

౬) బరమాల్ (Baramahal)

౭) మధ్య కర్ణాటక (Central Carnatic)

౮) కొడగు (Coorg)

౯) శాల్య (Salem)

౧౦) మలబార్ (Malabar)

౧౧) కోయిముత్తూరు (Coimbatoor)

౧౨) త్రావణకూరు (Travancore)

౧౩) దక్షిణ కర్నాటక (Southern Carnatic)

5. Islands connected with India.

೫. ಹಿಂದೂಸ್ಥಾನಕ್ಕೆ ಸೇರುವ ದ್ವೀಪಗಳು.

೧) ಸಿಲೋನ್ (Ceylon)

೨) ಲಕ್ಕ ದೀವಿಗಳು (Laccadives)

೩) ಮಲ್ದೀವಿಗಳು (Maldives)

4. Rivers.

೪. ನದಿಗಳು.

1) Indus. ೧) ಸಿಂಧೂ. ಇದರ ಉದ್ದ ೧೭೦೦ ಮೈಲುಗಳು. ಹಿಮವತ್ಪರ್ವತಗಳಿಗೆ ಆಚೆ ಹುಟ್ಟಿ ಅರಬಿ ಕಡಲಿಗೆ ಸೇರುತ್ತದೆ.

2) Sutlej. ೨) ಸಟ್ಲೆಜ್. ಇದರ ಉದ್ದ ೫೦೦ ಮೈಲುಗಳು. ಹಿಮವತ್ಪರ್ವತಗಳಿಗೆ ಆಚೆ ಹುಟ್ಟಿ ಚೇನಾಬ್ (Chenab,) ನದಿಗೆ ಸೇರುತ್ತದೆ.

3) Jumna. ೩) ಜಮುನ. ಇದರ ಉದ್ದ ೭೦೦ ಮೈಲುಗಳು. ಹಿಮವತ್ಪರ್ವತಗಳಲ್ಲಿ ಹುಟ್ಟಿ ಗಂಗಾನದಿಗೆ ಸೇರುತ್ತದೆ.

4) Ganges. ೪) ಗಂಗ. ಇದರ ಉದ್ದ ೧೫೦೦ ಮೈಲುಗಳು. ಹಿಮವತ್ಪರ್ವತಗಳಲ್ಲಿ ಹುಟ್ಟಿ ಬಂಗಾಳ ಕೊಲ್ಲಿಗೆ (Bay of Bengal,) ಸೇರುತ್ತದೆ.

ಗಂಗಾನದಿ ಬಹಳ ಪುಣ್ಯವಾದದ್ದೆಂದು ಹಿಂದೂ ಜನರು ಹೇಳುತ್ತಾರೆ, ಆದರೆ ಅರಿಯದೆ ಹೀಗನ್ನುತ್ತಾರೆ. ಯಾತಕ್ಕೆಂದರೆ ದೇವರು ಗಂಗಾನದಿಯಲ್ಲದೆ ಇನ್ನು ಅನೇಕ ದೊಡ್ಡ ನದಿಗಳನ್ನು ಮನುಷ್ಯರ ಪ್ರಯೋಜನಕ್ಕೋಸ್ಕರ ಉಂಟುಮಾಡಿದ್ದಾನೆ. ಇವುಗ

ಳಲ್ಲಿ ಗಂಗಾನದಿ ಹೊಂದು. ಅದರ ನೀರಿಗೂ ಬೇರೆ ನದಿಗಳ ನೀರಿಗೂ ಹೆಚ್ಚು ಕಡಿಮೆ ಯಿಲ್ಲ.

೫) ಬ್ರಹ್ಮಪುತ್ರ } ಹಿಂದೂಸ್ಥಾನದಲ್ಲಿರುವ ನದಿಗಳೊಳಗೆ ಇದು ದೊಡ್ಡದು. ಅದರ ಉದ್ದ ೧೬೦೦ ಮೈಲುಗಳು. ಹಿಮವತ್ಪರ್ವತಗಳಿಗೆ ಉತ್ತರ ಸೀಮೆಯಲ್ಲಿ ಹುಟ್ಟಿ, ಬಹಳ ಸುತ್ತಿಕೊಂಡು, ಗಂಗಾನದಿಗೆ ಸೇರಿ, ಅದರ ಸಂಗಡ ಬಂಗಾಳ ಕೊಲ್ಲಿಯ (Bay of Bengal,) ಪರಿಯಂತರ ಹರಿದು ಹೋಗುತ್ತದೆ. **5) Brahmapootra.**

೬) ನರ್ಮದ. ಇದರ ಉದ್ದ ೭೫೦ ಮೈಲುಗಳು. ದಖಣದಲ್ಲಿರುವ (Deccan,) ಗೊಂಡ್ವಾನ (Gondwana,) ಸೀಮೆಯಲ್ಲಿ ಹುಟ್ಟಿ ಗುಜರಾತಿ, (Gujerat,) ದೇಶದ ಪರಿಯಂತರ ಹರಿದು ಹೋಗಿ, ಹಿಂದೂ ಸಮುದ್ರಕ್ಕೆ ಸೇರುತ್ತದೆ. **6) Nurbudda.**

೭) ತಪತಿ. ಇದರ ಉದ್ದ ೫೦೦ ಮೈಲುಗಳು. ದಖ್ಖಣದಲ್ಲಿರುವ (Deccan,) ಬಿರಾರ್ (Berar) ಸೀಮೆಯಲ್ಲಿ ಹುಟ್ಟಿ, ಗುಜರಾತಿ ದೇಶದ ಪರಿಯಂತರ ಹರಿದು ಹೋಗಿ, ಹಿಂದೂ ಸಮುದ್ರಕ್ಕೆ ಸೇರುತ್ತದೆ. **7) Tuptee.**

೮) ಮಹಾನದಿ. ಇದರ ಉದ್ದ ೫೫೦ ಮೈಲುಗಳು. ಗೊಂಡ್ವಾನ ಸೀಮೆಯಲ್ಲಿ ಹುಟ್ಟಿ ಓಡ್ರ (Orissa,) ಸೀಮೆಯ ಮೇಲೆ ಹರಿದು, ಬಂಗಾಳ ಕೊಲ್ಲಿಗೆ **8) Mahanuddee.**

ಸೇರುತ್ತದೆ. ಈನದಿಯಲ್ಲಿ ವಜ್ರ ಕಲ್ಲುಗಳು ಸಿಕ್ಕುತ್ತವೆ.

9) Godavery. ೯) ಗೋದಾವರಿ. ಇದರ ಉದ್ದ ೬೫೦ ಮೈಲುಗಳು. ಪಶ್ಚಿಮ ಘಟ್ಟುಗಳಲ್ಲಿ (Western Ghauts,) ಅವರಂಗಬಾಡ್ (Aurungabad,) ಸೀಮೆಯಲ್ಲಿ ಹುಟ್ಟಿ, ಉತ್ತರ ಸರಕಾರಗಳ (Northern Circars,) ಪರಿಯಂತರ ಹರಿದು, ಬಂಗಾಳ ಕೊಲ್ಲಿಗೆ (Bay of Bengal,) ಸೇರುತ್ತದೆ.

10) Krishna. ೧೦) ಕೃಷ್ಣ. ಇದರ ಉದ್ದ ೭೦೦ ಮೈಲುಗಳು. ಬೀಜಾಪುರ ಸೀಮೆಯಲ್ಲಿ ಪಶ್ಚಿಮ ಘಟ್ಟುಗಳ ಹತ್ತಿರ ಹುಟ್ಟಿ, ಉತ್ತರ ಸರಕಾರಗಳ (Northern Circars,) ಮಟ್ಟಿಗೂ ಹರಿದು, ಬಂಗಾಳ ಕೊಲ್ಲಿಗೆ (Bay of Bengal,) ಸೇರುತ್ತದೆ.

11) Toombudra. ೧೧) ತುಂಗಭದ್ರ. ಇದು ಪಶ್ಚಿಮ ಘಟ್ಟುಗಳಲ್ಲಿ (Western Ghauts,) ಹುಟ್ಟಿ, ಬಹಳ ದೂರ ಹರಿದು, ಕೃಷ್ಣ ನದಿಯ ಸಂಗಡ ಕೂಡಿಕೊಳ್ಳುತ್ತದೆ.

12) Pennar. ೧೨) ಪಿನ್ನಾರ್. ಇದು ಮೈಸೂರು ಸೀಮೆಯಲ್ಲಿರುವ ನಂದಿ ದುರ್ಗಕ್ಕೆ ಸೇರುವ ಬೆಟ್ಟಗಳಲ್ಲಿ ಹುಟ್ಟಿ, ಮಧ್ಯ ಕರ್ನಾಟಕ (Central Carnatic,) ಸೀಮೆಯ ಪರಿಯಂತರ ಹರಿದು, ನೆಲ್ಲೂರಿನ ಸಮೀಪದಲ್ಲಿ ಬಂಗಾಳ ಕೊಲ್ಲಿಗೆ (Bay of Bengal,) ಸೇರುತ್ತದೆ.

೧೩) ಪಾಲಾರ್. ಇದು ಪಿನ್ನಾರ್ನದಿ ಹುಟ್ಟುವ ಸ್ಥಾನದ ಹತ್ತಿರ ಹುಟ್ಟಿ, ಮಧ್ಯ ಕರ್ಣಾಟಕ (Central Carnatic,) ದೇಶದವರಿಗೂ ಹರಿದು, ಬಂಗಾಳ ಕೊಲ್ಲಿಗೆ (Bay of Bengal,) ಸೇರುತ್ತದೆ. 13) Palar.

೧೪) ಕಾವೇರಿ. ಇದು ಕೊಡಗ ಸೀಮೆಯ ಬೆಟ್ಟಗಳಲ್ಲಿ ಹುಟ್ಟಿ, ದಕ್ಷಿಣ ಕರ್ಣಾಟಕ (Southern Carnatic,) ಸೀಮೆಯ ಪರಿಯಂತರ ೪೭೦ ಮೈಲುಗಳಷ್ಟು ದೂರವಾಗಿ ಹರಿದು, ಬಂಗಾಳ ಕೊಲ್ಲಿಗೆ (Bay of Bengal,) ಸೇರುತ್ತದೆ. 14) Cavery

೫. ಬೆಟ್ಟಗಳು. — 5. MOUNTAINS.

೧) ಹಿಮಪರ್ವತಗಳು. ಇವು ಟಿಬೆಟ್ (Thibet,) ದೇಶಕ್ಕೂ ಹಿಂದೂಸ್ಥಾನಕ್ಕೂ ಮಧ್ಯದಲ್ಲಿ ಬಂದು, ಹಿಂದೂಸ್ಥಾನಕ್ಕೆ ಉತ್ತರ ಮೇರೆಯಾಗಿವೆ. ಲೋಕದಲ್ಲಿರುವ ಎಲ್ಲಾ ಬೆಟ್ಟಗಳಿಗಿಂತ ದೊಡ್ಡವಾಗಿವೆ. ಹಿಮಪರ್ವತಗಳಲ್ಲಿ ಉನ್ನತವಾದದ್ದು ೨೭,೦೦೦ ಅಡಿಗಳಷ್ಟು ಎತ್ತರವಾಗಿದೆ. 1) Himalayas.

೨) ವಿಂಧ್ಯಪರ್ವತಗಳು. ಇವು ನರ್ಮದಾ ನದಿಗೆ ಉತ್ತರ ಕಡೆಯಲ್ಲಿ ಬಹಾರ್ (Bahar,) ಅಲ್ಲಹಾಬಾದ್ (Allahabad,) ಮಾಲ್ವ (Malwa,) ಸೀಮೆಗಳಲ್ಲಿ ಇರುತ್ತವೆ. 2) Vindhya Mountains.

೩) ಪಶ್ಚಿಮ ಘಟ್ಟಗಳು. ತಪತಿ (Tuptee,) ನದಿಯು ಮೊದಲುಗೊಂಡು ಕನ್ಯಾಕುಮಾರಿ ಕೊನೆಯ (Cape Co- 3) Western Ghauts.

morin,) ಪರಿಯಂತರವಿರುತ್ತವೆ. ಅವುಗಳಲ್ಲಿ ಉನ್ನತವಾದದ್ದು ೬೦೦೦ ಅಡಿಗಳಷ್ಟು ಎತ್ತರವಾಗಿದೆ.

4) Eastern Ghauts. ೪) ಪೂರ್ವಘಟ್ಟಗಳು.

ಇವು ಕೃಷ್ಣನದಿಯು ಮೊದಲು ಕಾವೇರಿನದಿಯ ಪರಿಯಂತರವಿರುತ್ತವೆ. ಇವುಗಳಲ್ಲಿ ವುನ್ನತವಾದದ್ದು ೩೦೦೦ ಅಡಿಗಳಷ್ಟು ಎತ್ತರವಾಗಿದೆ.

5) Neilgherries. ೫) ನೀಲಗಿರಿ ಬೆಟ್ಟಗಳು.

ಇವು ಕೊಯಿಮುತ್ತೂರು (Coimbatore,) ಸೀಮೆಯಲ್ಲಿ ಪಶ್ಚಿಮ ಘಟ್ಟಗಳಿಗೂ ಪೂರ್ವಘಟ್ಟಗಳಿಗೂ ಮಧ್ಯದಲ್ಲಿ ಬರುತ್ತವೆ. ಅವುಗಳಲ್ಲಿ ಉನ್ನತವಾದದ್ದು ೮೮೦೦ ಅಡಿಗಳಷ್ಟು ಎತ್ತರವಾಗಿದೆ.

6. PRODUCTIONS.

೬. ಉತ್ಪತ್ತಿಗಳು.

ಹಿಂದೂಸ್ಥಾನ ಉತ್ಪತ್ತಿಗಳು ಅನೇಕ ವಿಧವಾಗಿವೆ. ಅವುಗಳನ್ನೆಲ್ಲಾ ಇಲ್ಲಿ ವಿವರಿಸುವದಕ್ಕಾಗದು.

1) Trees. ೧. ಮರಗಳಲ್ಲಿ, ತೇಗಿನಮರವೂ, ಆಲದಮರವೂ, ತೆಂಗಿನಮರವೂ, ಗಂಧದಮರವೂ, ಈಚಲುಮರವೂ, ಅಡಿಕೆಮರವೂ, ಬಿದುರು, ಮುಖ್ಯ.

2) Fruits. ೨. ಹಣ್ಣುಗಳಲ್ಲಿ, ಬಾಳೆಹಣ್ಣೂ, ಮಾವಿನಹಣ್ಣೂ, ಕಿತ್ತಳೆಹಣ್ಣೂ, ನಿಂಬೆಹಣ್ಣೂ, ದ್ರಾಕ್ಷೆಹಣ್ಣೂ, ದಾಳಿಂಬೆಹಣ್ಣು, ಮುಖ್ಯ.

3) Grain. ೩. ಧಾನ್ಯಗಳಲ್ಲಿ ಬೇರೆಬೇರೆ ಜಾತಿಗಳುಂಟು. ಗೋಧಿ, ಜವೆಗೋಧಿ, ನೆಲ್ಲು, ರಾಗಿ, ಮುಖ್ಯ.

೪. ಧಾನ್ಯಗಳು ಅಲ್ಲದೆ ಹೊಲದಲ್ಲಿ ಬೆಳಿಯುವ ಪದಾರ್ಥಗಳು ಅನೇಕವುಂಟು. ಕಬ್ಬು, ಎಣ್ಣೆಯುಳ್ಳ ಬೀಜಗಳನ್ನು ಬೆಳಿಸುವ ಗಿಡಗಳೂ, ನೀಲಿ ಬೀಜದ ಗಿಡಗಳೂ, ಅರಳೆ ಗಿಡಗಳೂ, ಗಸಗಸೆ, ಹೊಗೆಸೊಪ್ಪು, ವಿಧವಿಧವಾದ ಸುಗಂಧದ ದಿನಸುಗಳೂ, ಮುಖ್ಯ. ಮತ್ತು ಅನೇಕ ವಿಧವಾದ ಕಾಯಿ ಪಲ್ಯಗಳುಂಟು. 4) Vegetables.

೫. ದುಷ್ಟ ಮೃಗಗಳಲ್ಲಿ, ಆನೆ, ಖಡ್ಗಮೃಗ, ಹುಲಿ, ಕರಡಿ, ಚಿರತೆ, ತೋಳ, ನರಿಗಳು, ಮುಖ್ಯ. 5) Wild Animals.

೬. ಸಾಧು ಮೃಗಗಳಲ್ಲಿ, ಒಂಟೆ, ಕುದುರೆ, ಎತ್ತು, ಹಸ, ಕೋಣ, ಎಮ್ಮೆ, ಕತ್ತೆ, ಕುರಿ, ಮೇಕೆ, ಜಿಂಕೆ, ಕೋತಿಗಳು ಮುಖ್ಯ. 6) Tame Animals.

೭. ಪಕ್ಷಿಗಳಲ್ಲಿ, ನವಿಲು, ಗಿಣಿ, ಅಕ್ಕಿ, ಪಾರಿವಾಳ, ಹದ್ದು, ಕಾಕಿಗಳು, ಮುಖ್ಯ. 7) Birds.

೮. ಕೀಟಕಗಳಲ್ಲಿ, ಹಾವು, ಓಂತಿ, ಹಲ್ಲಿ, ಹಾವರಾಣಿ, ಮೊದಲಾದವುಗಳುಂಟು. 8) Repiles.

೯. ಕ್ರಿಮಿಗಳಲ್ಲಿ, ನೊಣ, ಸೊಳ್ಳೆ, ಇರುವೆ, ಗೆದ್ದಲುಗಳು, ಮುಖ್ಯ. 9) Insects.

೧೦. ನೀರಿನಲ್ಲಿರತಕ್ಕ ಜೀವಿಗಳಲ್ಲಿ, ಮೊಸಳೆ, ತಾಬೇಲು, ಏಡಿ, ಕಪ್ಪೆ, ವಿಧವಿಧವಾದ ಮೀನುಗಳುಂಟು. 10) Fishes.

೧೧. ರತ್ನಗಳಲ್ಲಿ, ಮುತ್ತು, ಹವಳ, ವಜ್ರ, ವೈಡೂರ್ಯ, ಗೋಮೇಧಿಕ, ಪಚ್ಚೆ, ನೀಲ, ಕೆಂಪುಗಳು, ಮುಖ್ಯ. 11) Precious stones.

೧೨. ಲೋಹಗಳಲ್ಲಿ, ಚಿನ್ನ, ಬೆಳ್ಳಿ, ಕಬ್ಬಿಣ, ತಾಂಬ್ರ, ಸೀಸ, ಮೊದಲಾದವುಗಳುಂಟು. 12) Metals.

೧೩. ಮನುಷ್ಯರ ಕೈಕೆಲಸಗಳಲ್ಲಿ, ಜಂಬುಖಾನೆ, ರೇ 13) Manufactures.

ಶಿಸಿ, ವಿಧವಿಧವಾದ ಸಣ್ಣಗಿರುವ ಬಟ್ಟೆಗಳೂ, ದಪ್ಪದ ಬಟ್ಟೆಗಳೂ, ವಿಚಿತ್ರವಾದ ಕೆಲಸಗಳು, ಮುಖ್ಯ.

---

7. CHIEF TOWNS.

೭. ಮುಖ್ಯ ಪಟ್ಣಗಳು.

1) In Northern Hindoostan.

೧) ಉತ್ತರ ಹಿಂದೂಸ್ಥಾನ.

ಶೀಮೆಗಳು.	ಪಟ್ಣಗಳು.
೧. ಕಾಶ್ಮೀರ್ Cashmeer)	ಕಾಶ್ಮೀರ್ (Cashmeer.)
೨. ಸಮೂರ್ (Sirmoor)	ಸಿಂಲ (Simlah.)
೩. ಗರ್ವಾಲ್ (Gurwal)	ಶ್ರೀನಗರ (Sreenuggur.)
೪. ಕುಮಾಯೂನ್ (Kumaoon)	ಅಲ್ಮೋರ (Almora.)
೫. ನಿಪಾಲ್ (Nepal)	ಕಟ್ಮಂಡೂ (Catmandoo.)

2) In Hindoostan Proper.

೨) ನಿಜ ಹಿಂದೂಸ್ಥಾನ.

೧. ಪಂಜಾಬ್ (Punjab)	ಲಹೋರ್ (Lahore) ಅಂರಿತ್ಸರ್ (Umritsir)
೨. ಡಿಲ್ಲಿ (Delhi)	ಡಿಲ್ಲಿ (Delhi) ಫಿರೋಜ್ಪೂರ್ (Ferozepoor) ಲೂದಿಯಾನ (Loodiana) ಮೀರಟ್ (Meerut) ಅಂಬಲ್ಲ (Umballa)
೩. ಊಡ್ (Oude)	ಊಡ್ (Oude) ಲಕ್ನೋ (Lucknow)

೪. ಬಹಾರ್ (Bahar) } ಬಹಾರ್ (Bahar) ಬಕ್ಸಾರ್ (Buxar) ದಿನಪೂರ್ (Dinapore) ಪಾಟ್ನ (Patna)

೫. ಬಂಗಾಳ (Bengal) } ಕಲ್ಕತ್ತ (CALCUTTA) ಬರ್ಹಂಪೂರ್ (Berhampore) ಸಿರಂಪೂರ್ (Serampore) ಮೂರ್ಷೆದಬಾದ್ (Moorshedabad) ಡಕ್ಕ (Dacca) ಮಿಡ್ನಪೂರ್ (Midnapore) ಬರ್ದ್ವಾನ್ (Burdwan) ಚಿತ್ತಗೊಂಗ್ (Chittagong) ಇತ್ಯಾದಿ.

ಕಲ್ಕತ್ತ, ಬಹು ದೊಡ್ಡ ಪಟ್ಣವಾಗಿದೆ. ಅದರಲ್ಲಿ ೫,೫೦,೦೦೦ ಜನಗಳು ಇದ್ದಾರೆ. ಕುಂಪಣಿಯವರು ಹಿಂದೂಸ್ಥಾನದಲ್ಲಿ ಸ್ಥಾಪಿಸಿರುವ ರಾಜ್ಯಕ್ಕೆಲ್ಲಾ ಸಂಸ್ಥಾನವಾಗಿದೆ. ಇಂಗ್ಲೀಷ್ ಜನ ಬಹಳಮಂದಿ ಅಲ್ಲಿ ವಾಸಮಾಡುತ್ತಾರೆ. ಅಲ್ಲಿ ಬಹಳ ವ್ಯಾಪಾರ ನಡಿಯುತ್ತದೆ. ಪಟ್ಣವು ಗಂಗಾ ನದಿಗೆ ಸೇರಿದ ಹುಗ್ಲಿ (Hoogly) ಎಂಬುವ ನದಿಯ ದಡದಮೇಲೆ ಕಟ್ಟಲ್ಪಟ್ಟದೆ. ಸಮುದ್ರ ದಿಂದ ೧೦೦ ಮೈಲುಗಳ ದೂರವಾಗಿದೆ. ಆದರೆ ದೊಡ್ಡ ಹಡಗಗಳನ್ನು ಹುಗ್ಲಿ ನದಿಯಮೇಲೆ ಕಲ್ಕತ್ತ ಪಟ್ಣದ ಪರಿಯಂತರ ನಡಿಸುವದಕ್ಕಾಗುವದು. ಆ ಪಟ್ಣಕ್ಕೆ ಹರಾಗಿ ಆ ನದಿ ೧ ಮೈಲಷ್ಟು ಅಗಲವಾಗಿದೆ.

೬. ಮೂಲ್ತಾನ್ (Mooltan) } ಮೂಲ್ತಾನ್ (Mooltan)

೭. ಅಜ್ಮೀರ್ (Ajmeer) — ಅಜ್ಮೀರ್ (Ajmeer) ಜೀಪೂರ್ (Jeypoor)

೮. ಆಗ್ರ (Agra) — ಆಗ್ರ (Agra) ಬರ್ತ್‌ಪೂರ್ (Bhurtpoor) ಗ್ವಾಲಿಯೋರ್ (Gwalior)

೯ ಅಲ್ಲಹಬಾದ್ (Allahabad) — ಅಲ್ಲಹಬಾದ್ (Allahabad) ಕಾಶಿ (Benares) ಕಾಂಪೂರ್ (Cawnpoor) ಚೂನಾರ್ (Chunar) ಮಿರ್ಜಾಪುರ (Mirzapore)

ಕಾಶಿ ಬಹಳ ಪರಿಶುದ್ಧ ಸ್ಥಳವೆಂದು ಹೇಳಿ ಹಿಂದೂ ಜನರಲ್ಲಿ ಅನೇಕರು ಅಲ್ಲಿಗೆ ಯಾತ್ರೆಯಾಗಿ ಹೋಗುವರು. ಇದು ಪುಣ್ಯಕ್ರಿಯೆಯಂತೆ ನೆನಸುತ್ತಾರೆ. ಕಾಶಿ ಬಹಳ ದೊಡ್ಡ ಪಟ್ಟಣವೇ ಹೌದು. ಅದರಲ್ಲಿ ೭,೦೦,೦೦೦ ಜನ ಇದ್ಧಾರೆ. ಅದು ಹಿಂದೂಸ್ಥಾನದಲ್ಲಿರುವ ಯೆಲ್ಲಾ ಪಟ್ಟಣಗಳಿಗಿಂತ ವಿಸ್ಥಾರವಾದದ್ದಂತೆ. ಆದಾಗ್ಯೂ ಅದು ಚೊಕ್ಕಟವಾಗಿ ಕಟ್ಟಲ್ಪಟ್ಟದ್ದಲ್ಲ. ಅದರ ಬೀದಿಗಳು ಬಹು ಇಕ್ಕಟ್ಟಾಗಿವೆ. ಊರೆಲ್ಲಾ ಬಹಳ ಅಶುಚಿಯಾದದ್ದು. ಅದು ದೊಡ್ಡದೆಂಬುವದು ಪ್ರೊಂಚೇ. ಮತ್ತ್ಯೇನು ಮಹಿಮೆ ಅದರಲ್ಲಿ ಇಲ್ಲ. ಆ ಪಟ್ಟಣಕ್ಕಾದರೂ ಇನ್ನ್ಯಾವ ಪಟ್ಟಣಕ್ಕಾದರೂ ಪ್ರಯಾಣ ಮಾಡುವದು ಪುಣ್ಯಕ್ರಿಯೆಯಾಗಿರುವದು ಹ್ಯಾಗೋ ಕಾಣಿಸಲಿಲ್ಲ. ಆತ್ಮನಾಗಿರುವ ದೇವರನ್ನು ಯೆಲ್ಲ್ಯಾದರು ಆರಾಧಿಸಬಹುದು. ಯೆಲ್ಲಿ ಮಾಡಿದರೂ ಉತ್ತಮವಾದ ಕ್ರಿಯೆಯೇ.

೧೦. ಸಿಂಧು (Sind)	ಹೈದರಬಾದ್ (Hyderabad) ಠಟ್ಟ (Tatta) ಕುರಚಿ (Kurachee) ಸಕ್ಕೂರ್ (Sukkur) ಶಿಕಾರ್ಪೂರ್ (Shikarpore)
೧೧. ಕಚ್ (Kuch)	ಭೂಜ್ (Bhooj)
೧೨. ಗುಜರಾತಿ (Guzerat)	ಸೂರತ್ (Surat) ಬರೋದ (Baroda) ಆಮೆಡಬಾದ್ (Ahmedabad) ಬರೋಚ್ (Baroch)
೧೩. ಮಲ್ವ (Malwa)	ಊಜಿನಿ (Oojein) ಇಂದೂರ್ (Indore)

೩) ದಖಣ.

3) The Deccan.

೧. ಖಾಂದೇಶ್ (Khandesh)	ಮಾಲಿಗಾಮ್ (Malligaum) ಕರ್ಗೂನ್ (Kurgoon) ಹೋಶಂಗಬಾದ್ (Hoshungabad) ಅಸ್ಸೀರ್ಗರ್ (Asseergur) ಬೂರ್ಹಾನ್ಪೂರ್ (Boorhanpoor)
೨. ಗೊಂಡ್ವಾನ (Gondwana)	ನಾಗ್ಪೂರ್ (Nagpore)
೩. ಓಡ್ರ (Orissa)	ಕಟ್ಟಾಕ್ (Cuttack) ಜಗನ್ನಾಥ (Juggernaut)

ಜಗನ್ನಾಥದಲ್ಲಿ ದೊಡ್ಡ ದೇವಸ್ಥಾನವುಂಟು. ವರುಷಕ್ಕೆ ಒಂದು ಸಾರಿ ಅಲ್ಲಿ ಬಹಳ ದೊಡ್ಡ ಪರಷೆ ನಡಿಯುತ್ತದೆ. ನಾಲ್ಕು ದಿಕ್ಕುಗಳಿಂದ ಹಿಂದೂ ಜನಗಳು ಗುಂಪುಗುಂಪಾಗಿ ಆ ಪರಷೆಗೆ ಹೋಗುತ್ತಾರೆ. ಹೋದರೆ ದಾರಿಯಲ್ಲಿ ಬಹಳ ಕಷ್ಟ ಪಡುತ್ತಾರೆ.

ಬಹಳ ಹಣ ಖರ್ಚು ಮಾಡಿ ಬಿಡುತ್ತಾರೆ. ದೂರದಿಂದ ಹೋಗುವವರಲ್ಲಿ ಅನೇಕರು ತಿರಿಗಿ ತಮ್ಮ ಸ್ಥಳಕ್ಕೆ ಸೇರುವದಿಲ್ಲ. ಹಾದಿಯಲ್ಲಿಯೇ ಸಾಯುತ್ತಾರೆ. ಹೋಗಿ ಬಂದವರು ಅಲ್ಲಿರುವ ಮೂರು ವಿಕಾರವಾದ ಮರದ ವಿಗ್ರಹಗಳನ್ನು ಕಂಡಿದ್ಧಾರೆ. ಆ ಸ್ಥಳದ ಹಾರವರ ಹೊಟ್ಟೆಗಳನ್ನು ತುಂಬಿಸಿದ್ಧಾರೆ. ಅಯುಕ್ತವಾದ ಕಾರ್ಯಗಳನ್ನೂ ನಡಿಸಿದ್ಧಾರೆ ಅಷ್ಟೇ. ಇದಕ್ಕಾಗಿ ಜನರು ಇಷ್ಟುದೂರ ಹೋಗುವದೂ, ಇಷ್ಟು ಪ್ರಯಾಸ ಪಡುವದೂ, ಆಶ್ಚರ್ಯವಾಗಿದೆ.

೪. ಬಿರಾರ್ (Berar) — ಎಲ್ಲಿಚ್ಪೂರ್ (Ellichpore)

೫. ಅವರಂಗಬಾಡ್ (Aurungabad) — ಬೊಂಬಾಯಿ (BOMBAY) ಅವರಂಗಬಾಡ್ (Aurungabad) ಅಹಮೆದ್ನಗ್ಗರ್ (Ahmednuggur) ದೌಲತಬಾಡ್ (Doulatabad) ಇತ್ಯಾದಿ.

ಬೊಂಬಾಯಿ ಬಹಳ ದೊಡ್ಡ ಪಟ್ಣವಾಗಿದೆ. ಅವರಲ್ಲಿ ೨,೦೦,೦೦೦ ಜನಗಳಿದ್ಧಾರೆ. ಇವರಲ್ಲಿ ಅನೇಕರು ಇಂಗ್ಲೀಷ್ ಜನ. ಕುಂಪಣಿಯವರ ಕೈಕೆಳಗೆ ದೊರೆತನ ಮಾಡುವ ಒಬ್ಬ ದೊಡ್ಡ ದೊರೆ ಇಲ್ಲಿ ವಾಸಮಾಡುತ್ತಾನೆ. ಈಪಟ್ಣ ಚಿಕ್ಕ ದ್ವೀಪದಮೇಲೆ ಕಟ್ಟಲ್ಪಟ್ಟಿದೆ.

ಅದರಲ್ಲಿ ಹಡಗಗಳಿಗೆ ಒಳ್ಳೆ ರೇವುಗಳುಂಟು. ಅಲ್ಲಿ ಬಹಳ ವ್ಯಾಪಾರ ನಡೆಯುತ್ತದೆ.

೬. ಬಿದರ್ (Beder) } ಬೀದರ್ (Beder)

೭. ಹೈದರಬಾದ್ (Hyderabad) } ಹೈದರಬಾದ್ (Hyderabad)

೮. ಉತ್ತರ ಸರಕಾರಗಳು. (Northern Circars) } ಗಾಂಜಾಮ್ (Ganjam) ಚಿಕ್ಕಾಕೋಲ್ (Chicacole) ವಿಶಾಖಪಟ್ಣ (Vizagapatam) ರಾಜಮಂಡ್ರಿ (Rajahmundry) ಎಲ್ಲೋರ್ (Ellore) ಕೊಂಡಪಿಲ್ಲಿ (Kondapilly) ಮಸೂಲಿಪಟ್ಣ (Masulipatam) ಗಂಟೂರ್ (Guntoor)

೯. ಬೀಜಾಪುರ (Bejapore) } ಪೂನ (Poona) ಶೋಲಾಪುರ (Sholapore) ಗೋವ (Goa)

ಪೂರ್ವದಲ್ಲಿ ಬೀಜಾಪುರವೂ ವಿಜಯನಗರವೂ ಎಂದು ಹೇಳಲ್ಪಟ್ಟ ಎರಡು ದೊಡ್ಡ ಪಟ್ಣಗಳು ಅಲ್ಲಿ ಇದ್ದವು. ಈಗ ಹಾಳಾಗಿ ಬಿದ್ದವೆ.

೪) ದಕ್ಷಿಣ ಹಿಂದೂಸ್ಥಾನ.

4) In Southern India.

೧. ದೂವಾಬ್ (Dooab) } ಬೆಳಗಾವು (Belgaum) ಧಾರವಾಡ (Dharwar) ಕಲದ್ಗಿ (Kuladghee) ಹುಬ್ಬಳ್ಳಿ (Hubli)

೨. ಒಪ್ಪಿಸಿದ ಗಡಿಗಳು. (Ceded Districts) — ಬಳ್ಳಾರಿ (Bellary) ಗುತ್ತಿ (Gooty) ಕರ್ನೋಲ್ (Kurnool) ಅದೋನಿ (Adoni) ಕಡಪೆ (Cuddapah) ಪುಂಗನೂರು (Punganore) ಇತ್ಯಾದಿ.

3. ಉತ್ತರ ಕರ್ನಾಟಕ (Northern Carnatic) — ನೆಲ್ಲೂರು (Nellore)

೪. ಕನರ (Canara) — ಮಂಗಳೂರು, ಇಲ್ಲವೆ ಕವಡಾಲ್ (Mangalore)

೫. ಮೈಸೂರು (Mysore) — ಬೆಂಗಳೂರು (Bangalore) ಮೈಸೂರು (Mysore) ಶ್ರೀರಂಗಪಟ್ಟ (Seringapatam) ಇತ್ಯಾದಿ.

೬. ಬಾರಮಹಾಲ್ (Baramahal) — ಹೊಸೂರು (Ossoor) ಕೃಷ್ಣಗಿರಿ (Krishnagerry) ರಾಯಕೋಟೆ (Raicotta) ಇತ್ಯಾದಿ.

೭. ಮಧ್ಯ ಕರ್ನಾಟಕ Central Carnatic) — ಮದ್ರಾಸ್ ಇಲ್ಲವೇ ಚನ್ನಪಟ್ಟ (MADRAS) ವೇಲೂರು (Vellore) ಆರ್ಕಾಟು (Arcot) ಪುತ್ಚೇರಿ (Pondicherry) ಗುಡಲ್ಲೂರು (Cuddalore) ಇತ್ಯಾದಿ.

ಮದ್ರಾಸ್ ಬಹಳ ದೊಡ್ಡ ಪಟ್ಟಣವಾಗಿದೆ. ಅದರಲ್ಲಿ ೪,೫೦,೦೦೦ ಜನವಿದ್ದಾರೆ. ಇವರಲ್ಲಿ ಅನೇಕರು ಇಂಗ್ಲೀಷ್ ಜನ. ಕುಂಪಣಿಯವರ ಕ್ಕೈಕೆಳಗೆ ದೊರೆತನ ಮಾಡುವ ಒಬ್ಬ ದೊಡ್ಡ ದೊರೆ ಅಲ್ಲಿ ವಾಸಮಾಡುತ್ತಾನೆ.

ಆಪಟ್ಣ ಸಮುದ್ರದ ಧಡದಲ್ಲಿದೆ. ಬಹಳ ವ್ಯಾಪಾರ ಅಲ್ಲಿ ನಡಿಯುತ್ತದೆ.

೮. ಕೊಡಗ (Coorg)	ಮಡಿಕೇರಿ (Mercara)
೯. ಶಾಲೆಮ (Salem)	ಶಾಲೆಮ (Salem)
೧೦. ಮಲಬಾರ (Malabar)	ಕನ್ನನೂರು (Cannanore) ತೆಲ್ಲಿಚೇರಿ (Tellicherry) ಕಾಲಿಕಟ (Calicut)
೧೧. ಕೊಯಿಮುತ್ತೂರು (Coimbatoor)	ಕೊಯಿಮುತ್ತೂರು (Coimbatoor)
೧೨. ತ್ರಿವಂಕೋರ (Travancore)	ತಿರುವಂದಪುರ (Trevandrum) ಕೋಚಿನ (Cochin) ಕ್ವಿಲೋನ (Quilon) ನಾಗರಕೋಯಿಲ (Nagercoil)
೧೩. ದಕ್ಷಿಣ ಕರ್ನಾಟಕ (Southern Carnatic)	ತಿರಿಚಿನಾಪಳ್ಳಿ (Trichinopoly) ತಂಜಾವೂರು (Tanjore) ಕುಂಬಕೋಣ (Combaconum) ತರಂಗಂಬಾಡಿ (Tranquebar) ಮಧುರೆ (Madura) ತಿನ್ನೆವಲ್ಲಿ (Tinnevelly)

೫. ದ್ವೀಪಗಳು.

5. In the Islands connected with India.

೧. ಸಿಲೋನ (Ceylon)	ಕೊಲಂಬೋ (Colombo) ತ್ರಿಂಕೋಮಲೀ (Trincomalee) ಜಾಫ್ನ (Jaffna) ಕಾಂದಿ (Kandy)

ಸಿಲೋನ ದ್ವೀಪಕ್ಕೆ ಹಿಂದೂ ಜನರು ಲಂಕವೆಂದು ಹೇಳುತ್ತಾರೆ. ಅಲ್ಲಿ ರಾಕ್ಷಸ

ರು ಇದ್ಧಾರೆಂದೂ ಒಬ್ಬರಾದರು ಅಲ್ಲಿ ವಾಸಮಾಡಲೂ ಶೇರಲೂ ಕೂಡದೆಂದೂ ಹಿಂದೂ ಶಾಸ್ತ್ರಗಳಲ್ಲಿ ಬರದದೆ. ಇದೆಲಾ ಅಬದ್ಧ. ಹಿಂದೂಸ್ಥಾನದಲ್ಲಿರುವಹಾಗೆ ಲಂಕ ಇಲ್ಲವೇ ಸಿಲೋನ್ ದ್ವೀಪದಲ್ಲಿ ಪಟ್ಟಣಗಳೂ ಗ್ರಾಮಗಳೂ ವುಂಟು. ಅದರಲ್ಲಿ ೯,೦೦,೦೦೦ ಜನಗಳು ವಾಸವಾಗಿದ್ಧಾರೆ. ಇವರಲ್ಲಿ ಅನೇಕರು ಇಂಗ್ಲೀಷ್ ಜನರು. ಇಂಗ್ಲೀಷ್ ಜನರ ರಾಣಿಯ ಕೈಕೆಳಗಿರುವ ದೊರೆ ಆ ದ್ವೀಪದಲ್ಲಿ ಆಳುತ್ತಾನೆ. ಅಲ್ಲಿ ಬಹಳ ವ್ಯಾಪಾರ ನಡೆಯುತ್ತದೆ.

೨. ಲಕ್ಕದೀವಿಗಳು (Laccadives) — ಇವುಗಳಲ್ಲಿ 30 ಬಹು ಸಣ್ಣದ್ವೀಪಗಳು ಶೇರುತ್ತವೆ.

3. ಮಲ್ದೀವಿಗಳು (Maldives) — ಇವುಗಳಲ್ಲಿ ೧೨೦೦ ಬಹು ಸಣ್ಣ ದ್ವೀಪಗಳು ಶೇರುತ್ತವೆ. ಕೆಲವುಗಳಲ್ಲಿ ಜನರು ಇದ್ಧಾರೆ. ಕೆಲವುಗಳಲ್ಲಿ ಇಲ್ಲ.

8. Religion.

೮. ಮತಗಳು.

ಹಿಂದೂಸ್ಥಾನದಲ್ಲಿ ಹಿಂದೂ, ಮಹಮ್ಮದ್, ಬೌದ್ಧ, ಜೈನ, ಮತಸ್ಥರು ಮುಖ್ಯ. ಆದರೆ ಇವರೆಲ್ಲರು ಅಜ್ಞಾನದಲ್ಲಿ ಇದ್ಧಾರೆ. ಪರಲೋಕಕ್ಕೆ ಹೋಗುವ ಮಾರ್ಗವನ್ನು ಅರಿಯದೆ ಯಿದ್ಧಾರೆ. ಕ್ರೀಸ್ತನ ಮತಸ್ಥರು ಮಾತ್ರವೇ ನಿಜವಾದ

ಜ್ಞಾನವನ್ನೂ ಪರಲೋಕಕ್ಕೆ ಹೋಗುವ ಮಾರ್ಗವನ್ನೂ ಸತ್ಯವೇದದಿಂದ ತಿಳಿಸಿದ್ದಾರೆ. ಈಜ್ಞಾನವನ್ನೂ ಮಾರ್ಗವನ್ನೂ ಸಮಸ್ತರಿಗೆ ಬೋಧಿಸುವದಕ್ಕೆ ಬಹಳ ಪ್ರಯಾಸಪಡುತಿದ್ದಾರೆ. ಅವರ ಪ್ರಯಾಸದಿಂದ ಬಹಳ ಫಲವಾಯಿತು. ಅನೇಕ ಸಾವಿರ ಹಿಂದೂ ಮೊದಲಾದ ಜನಗಳು, ಯೇಸುಕ್ರಿಸ್ತನಲ್ಲಿ ವಿಶ್ವಾಸ ವಿಟ್ಟು ಆತನ ಶಿಷ್ಯರಾಗಿದ್ದಾರೆ. ಕ್ರಿಸ್ತನ ಮತವು ಇನ್ನು ಪ್ರಸಿದ್ಧವಾಗುತ್ತಾ ಇದೆ. ಕಡಿಗೆ ದೇಶವನ್ನೆಲ್ಲಾ ತುಂಬುಪಡಿಂಬುವದಕ್ಕೆ ಸಂದೇಹವಿಲ್ಲ.

೯. ಭಾಷೆಗಳು.

9. Languages.

ಇವು ಅನೇಕ ವಿಧ. ದಖಣಿ, (Hindustanee) ಬಂಗಾಳಿ, (Bengalee) ಊರ್ದೂ, (Oordoo) ಹಿಂದವಿ, (Hindee) ವೋಡ್ರ, (Oorya) ಪಂಜಾಬಿ, (Punjabi) ಗುಜರಾತಿ, (Guzaratee) ಮಹಾರಾಷ್ಟ್ರ, (Mahratta) ತೆಲುಗು, (Teloogoo) ಕನ್ನಡ, (Canarese) ಅರವ, (Tamil) ಮಳಯಾಳಿ, (Malayalim) ಮುಖ್ಯ. ಸಂಸ್ಕೃತ ಪ್ರಸಿದ್ಧವಾದ ಭಾಷೆಯಾಗಿತ್ತು. ಈಗ ವಿದ್ವಾಂಸರಿಗೆ ಮಾತ್ರವೇ ತಿಳಿದಿರುತ್ತದೆ.

೧೦. ದೊರೆತನವು.

10. Government.

ಸ್ವಲ್ಪ ಕಡಿಮೆಯಾಗಿ ಹಿಂದೂಸ್ಥಾನ ಶೀಮೆಯೆಲ್ಲಾ ಕುಂಪಣಿಯವರ ಅಧಿಕಾರದಲ್ಲಿ ಇದೆ. ಅವರು ಶೀಮೆಯನ್ನೆಲ್ಲಾ ಮೂರು ಸಂಸ್ಥಾನಗಳಾಗಿ ವಿಭಾಗಿಸಿದ್ದಾರೆ. ಹ್ಯಾಗಂದರೆ, The British

1. Bengal Presidency.	೧. ಬಂಗಾಳ ಸಂಸ್ಥಾನ.	ಒಂದೊಂದು ಸಂಸ್ಥಾನಕ್ಕೆ ಕುಂಪಣಿಯವರ ಕೈಕೆಳಗೆ ದೊರೆತನ ಮಾಡುವ ಒಬ್ಬೊಬ್ಬ ದೊಡ್ಡ ದೊರೆ ಇದ್ದಾನೆ. ಈ ದೊರೆಗಳಲ್ಲಿ ಬಂಗಾಳ ಸಂಸ್ಥಾನದ ದೊರೆ ಮುಖ್ಯಸ್ಥನಾಗಿದ್ದಾನೆ.
2. Madras Presidency.	೨. ಮದ್ರಾಸ್ ಸಂಸ್ಥಾನ.	
3. Bombay Presidency.	೩. ಬೊಂಬಾಯಿ ಸಂಸ್ಥಾನ.	

The Mysore. ಮೈಸೂರು ಶೀಮೆ ಕುಂಪಣಿಯವರಿಂದ ನೇಮಿಸಲ್ಪಟ್ಟಿರುವ ದೊರೆಗಳಿಂದ ಆಳಲ್ಪಡುತ್ತದೆ. ಅರಸನು ಮೈಸೂರಿನಲ್ಲಿ ಇದ್ದಾನೆ. ಆದರೆ ಆತನಿಗೆ ದೊರೆತನವಿಲ್ಲ.

Independent state. Nepal. ನಿಪಾಲ್ ಶೀಮೆಯ ದೊರೆ ಸ್ವತಂತ್ರವಾಗಿ ಆಳುತ್ತಾನೆ.

Tributaries of the British.	ಪಂಜಾಬ್ (Punjab) ಹೈದರಬಾದ್ (Hyderabad) ನಾಗಪುರ (Nagpoor) ಊಡ್ (Oude) ಗುಜರಾತಿ (Guzerat) ತ್ರವಂಕೋರ್ (Travancore)	ಈ ಶೀಮೆಗಳನ್ನು ಆಳುವವರು ಕುಂಪಣಿಯವರ ಆದೀನದಲ್ಲಿ ಇದ್ದಾರೆ.

—o—

7. *British Provinces beyond the Ganges.*

೭. ಗಂಗಾನದಿಗಾಚೆ ಕುಂಪಣಿಯವರಿಗೆ ಶೇರಿದ ದೇಶಗಳು.

	ದೇಶಗಳು.		ಮುಖ್ಯಪಟ್ಣಗಳು.
1. Provinces.	೧) ಅಸ್ಸಾಮ್ (Assam)	ರಂಗ್ಪೂರ್ (Rungpoor)	ಜೋರ್ಹಾಟ್ (Jorhat)

೨) ಅರಕಾನ್ (Aracan) } ಅರಕಾನ್ (Aracan) ಅಕ್ಯಾಬ್ (Akyab)

೩) ಮಾರ್ತಬಾನ್ (Martaban) } ಮಾರ್ತಬಾನ್ (Martaban) ಮೂಲ್ಮೀನ್ (Moulmein)

೪) ಟವ್ಹೋಯಿ (Tavoy) } ಟವ್ಹೋಯಿ (Tavoy)

೫) ಟಿನಾಸಿರಿಮ್ (Tenasserim) } ಮೆರ್ಗ್ವೀ (Mergui)

೬) ಮಲಾಕ್ಕ (Malacca) } ಮಲಾಕ್ಕ (Malacca)

೨. ದ್ವೀಪಗಳು. 2. Islands.

೧) ಸಿಂಗಪೂರ್ (Singapore) } ಸಿಂಗಪೂರ್ (Singapore)

೨) ಪಿನಾಂಗ್ (Penang) } ಪಿನಾಂಗ್ (Penang)

೩. ವಿವರ. ಈ ದೇಶಗಳಲ್ಲಿ ಬೆಳೆಯುವ ಧಾನ್ಯ ಮೊದಲಾದವುಗಳೂ ಸಿಕ್ಕುವ ಮೃಗಗಳೂ ಸ್ವಲ್ಪ ಹೆಚ್ಚುಕಡಿಮೆಯಾಗಿ ಹಿಂದೂಸ್ಥಾನದಲ್ಲಿ ವುಂಟಾಗಿರುವ ಪ್ರಕಾರವಾಗಿವೆ. 3. Remarks

---

8. *Bootan.*

೮. ಬೂತಾನ್.

---

೧. ಮೇರೆಗಳು. ಪೂರ್ವದಲ್ಲಿ ಚೇನ (China) ಪಶ್ಚಿಮದಲ್ಲಿ ನಿಪಾಲ್ (Nepaul) ಉತ್ತರದಲ್ಲಿ ಹಿಮಾಲಯ ಬೆಟ್ಟ 1. Boundaries.

ಗಳು (Himalayas) ದಕ್ಷಿಣದಲ್ಲಿ ಅಸ್ಸಾಮ್ (Assam) ಬಂ ಗಾಳ್ (Bengal)

2. Population. ೨. ಜನಸಂಖ್ಯೆ. ೧,೫೦,೦೦೦

3. Chief Town. ೩. ಮುಖ್ಯಪಟ್ಟಣ. ಟಾಸಿಸೂಡೋನ್ (Tassisudon)

4. Remarks ೪. ವಿವರ. ಬೂತಾನ್ ದೇಶ ಬೆಟ್ಟಗಳುಳ್ಳದ್ದು. ಅಲ್ಲಿ ಅನೇಕವಿಧ ಧಾನ್ಯ ಹಣ್ಣು ಮೊದಲಾದವುಗಳು ಚನ್ನಾಗಿ ಬೆಳಿಯುತವೆ. ಜನರು ಬೌದ್ಧ ಮತಸ್ಥರಾಗಿದ್ದಾರೆ.

—o—

9. *Burmah.*

೯. ಬರ್ಮಾ.

---

1. Boundaries. ೧. ಮೇರೆಗಳು. ಪೂರ್ವದಲ್ಲಿ ಚೀನ (China) ಕೊಚಿನ್ ಚೀನ (Cochin China) ಸೈಯಾಮ್ (Siam) ಪಶ್ಚಿಮದಲ್ಲಿ ಬಂಗಾಳ್ (Bengal) ಅರಕಾನ್ (Aracan) ಉತ್ತರದಲ್ಲಿ ಅಸ್ಸಾಮ್ (Assam) ದಕ್ಷಿಣದಲ್ಲಿ ಸಮುದ್ರ (Ocean)

2. Population. ೨. ಜನಸಂಖ್ಯೆ ೩೫,೦೦,೦೦೦

3. Divisions ೩. ವಿಭಾಗಗಳು. ಮುಖ್ಯ ಪಟ್ಟಣಗಳು.

ವಿಭಾಗಗಳು	ಮುಖ್ಯ ಪಟ್ಟಣಗಳು
೧) ಆವ (Ava)	ಆವ (Ava) ಅಂರಾಪುರ (Amrapoora)
೨) ಪೈಗೊ (Pegu)	ಪೈಗೊ (Pegu) ರಾಂಗೂನ್ (Rangoon)

4. River. ೪. ನದಿ. ಇರವಾಡಿ (Irrawaddy)

5. Islands. ೫. ದ್ವೀಪಗಳು.

೧) ಅಂದಮಾನ್ ದ್ವೀಪಗಳು (Andamans)

೨) ನಿಕೋಬಾರ್ ದ್ವೀಪಗಳು (Nicobars)

ಈ ದ್ವೀಪಗಳಲ್ಲಿರುವ ಜನರು ಬಹಳ ಬುದ್ಧಿಹೀನರಾಗಿಯೂ ದುರ್ಗುಣವುಳ್ಳವರಾಗಿಯೂ ಇದ್ಧಾರೆ. ಅವರು ನೀರಿಗೋಸ್ಕರವಾಗಲಿ ವ್ಯಾಪಾರಕ್ಕೋಸ್ಕರವಾಗಲಿ ತಮ್ಮ ಸ್ಥಳಕ್ಕೆ ಬರುವ ಹಡಗದವರಸಂಗಡ ಜಗಳಕ್ಕೆ ಬರುವದುಂಟು. ಅವರು ಬಟ್ಟೆಗಳನ್ನು ಹಾಕಿಕೊಳ್ಳುವದಿಲ್ಲ. ಬರೀಮೈಯಾಗಿ ಹೋಗುತ್ತಾರೆ. ಸೊಣ ಮೊದಲಾದವುಗಳು ತಮ್ಮನ್ನು ಕಚ್ಚದಹಾಗೆ ತಮ್ಮ ಶರೀರಗಳಿಗೆ ಮಣ್ಣು ಹಚ್ಚುತ್ತಾರೆ.

೬. ವಿವರ. ಬರ್ಮ ದೇಶಸ್ಥರು ಬೌದ್ಧ ಮತಸ್ಥರಾಗಿದ್ಧಾರೆ. ಆಭೂಮಿಯಲ್ಲಿ ನೆಲ್ಲು ಗೋಧಿ ಮೊದಲಾದ ಧಾನ್ಯಗಳೂ, ಖಬ್ಬು, ಅರಳೆ, ನೀಲಿಬೀಜ, ಹೊಗೆಸೊಪ್ಪು, ಯೆಣ್ಣೆ ಬೀಜಗಳುಳ್ಳ ಗಿಡಗಳೂ, ತೇಗು ಮೊದಲಾದ ಮರಗಳೂ, ಚನ್ನಾಗಿ ಬೆಳಿಯುತ್ತವೆ. ಅಲ್ಲಿ ಕೋಲ್ (Coal) ಸೋರುಪ್ಪು, ಶಿಕ್ಕುವದುಂಟು. ಮತ್ತು ತಗಡು, ಕಬ್ಬಿಣ, ಮೊದಲಾದ ಲೋಹಗಳು, ವುಂಟು. ವೊಂಟೆಗಳಲ್ಲದೆ ಹಿಂದೂಸ್ಥಾನದಲ್ಲಿ ಶಿಕ್ಕುವ ಮೃಗಗಳೆಲ್ಲಾ ಅಲ್ಲಿ ಶಿಕ್ಕುವವು. ಪೈಗೊದೇಶದ ಕುದುರೆಗಳು ಬಹಳ ವೊಳ್ಳೆ ಜಾತಿಯವುಗಳು. ಬರ್ಮ ದೇಶದ ಆನೆಗಳು ಬಹಳ ವೊಳ್ಳೇವು. ಅಲ್ಲಿ ಬಿಳೀವರ್ಣವುಳ್ಳ ಆನೆಗಳು ಶಿಕ್ಕುವದುಂಟು. ಬಿಳೀ ವರ್ಣವುಳ್ಳವುಗಳಿಗೆ ಬರ್ಮದವರು ಬಹು ಘನ ತೋರಿಸುತ್ತಾರೆ. ಈ ಜಾತಿಯಲ್ಲಿ ವೊಂದು ಆನೆ ಅರಮನೆಯ ಹತ್ತಿರವಿರುವದು ಅಗತ್ಯವನ್ನುತ್ತಾರೆ. ಹೀಗಿಲ್ಲದಿದ್ದರೆ ರಾಜ್ಯಕ್ಕೆ ಕೇಡು ಬ 6. Remarks

ರುವದಂತೆ. ಆದಕಾರಣ ಅರಮನೆಗೆ ಸಮೀಪದಲ್ಲಿ ಅಂಥಾ ಜಾತಿ ಆನೆಗೋಸ್ಕರ ಬಹಳ ದೊಡ್ಡ ವಿಚಿತ್ರವಾದ ಮನೆ ಕಟ್ಟಲ್ಪಟ್ಟದೆ. ಅದರ ಮುಂಚೆ ಚಿನ್ನದಿಂದ ಅಲಂಕರಿಸಲ್ಪಟ್ಟಂಥ ಬಹು ಶ್ರೇಷ್ಠ ಜಾತಿಯ ಸಕಲಾತಿಯಿಂದ ಮಾಡಲ್ಪಟ್ಟಂಥ ತೆರೆ ಉಂಟು. ಆನೆಯ ಮುಂದಿನ ಕಾಲುಗಳನ್ನು ಬೆಳ್ಳಿಯ ಸರಪಣಿಗಳಿಂದ ಕಟ್ಟುತ್ತಾರೆ. ಅದಕ್ಕೆ ಸೇರುವ ಸಾಮಾನುಗಳೆಲ್ಲಾ ರತ್ನಗಳಿಂದ ಕೆತ್ತಲ್ಪಟ್ಟ ಭಂಗಾರದವುಗಳಾಗಿವೆ. ಅದು ಮಲಗುವದಕ್ಕೆ ಕೆಳಗಿನದು ಸಕಲಾತಿಯಿಂದಲೂ, ಮೇಲಿನದು ರೇಶಿಮೆಯಿಂದಲೂ, ಮಾಡಲ್ಪಟ್ಟ ಎರಡು ಹಾಸಿಕೆಗಳನ್ನು ಹಾಸುವರು. ಸಾವಿರ ಜನರು ಅದರಮೇಲೆ ಕಾವಲಿಯಾಗಿದ್ಧಾರೆ. ಯಾರಾದರು ಅರಸನ ಭೇಟಿ ಮಾಡಿದರೆ ಆನೆಯನ್ನು ಕೂಡ ನೋಡಿ ಅರಸನಿಗೆ ತೋರಿಸುವ ಪ್ರಕಾರ ಅದಕ್ಕೆ ಘನ ತೋರಿಸಿ, ಆತನಿಗೆ ಕೊಡುವ ಪ್ರಕಾರ ಅದಕ್ಕೆ ಕಾಣಿಕೆಗಳನ್ನು ಕೊಡಬೇಕು.

—o—

10. *Siam.*
೧೦. ಸೈಯಾಮ್.

1. Boundaries. ೧. ಮೇರೆಗಳು. ಪೂರ್ವದಲ್ಲಿ ಕೋಚಿನ್ ಚೀನ (Cochin China) ಪಶ್ಚಿಮದಲ್ಲಿ ಮಾರ್ತಬಾನ್ (Martaban) ಟವೋಯಿ (Tavoy) ಟೆನಾಸಿರಿಮ್ (Tenasserim) ಉತ್ತರದಲ್ಲಿ ಲಾವೋಸ್ (Laos) ದಕ್ಷಿಣದಲ್ಲಿ ಸಮುದ್ರ (Ocean.)

2. Population. ೨. ಜನಸಂಖ್ಯೆ ೩೦,೦೦,೦೦೦

೩. ಮುಖ್ಯವಾದ ಪಟ್ಣ. ಬಾಂಕೋಕ್ (Bankok) 3. Chief Town.

೪. ವಿವರ. ಸೈಯಾಮ್ ದೇಶದ ಉತ್ಪತ್ತಿಗಳು (Productions) ಬರ್ಮಾ ದೇಶದವುಗಳಹಾಗಿವೆ. ಜನರ ಮರ್ಯಾದಿಗಳೂ ಮತವೂ ಕೂಡ ಬರ್ಮಾದವರವುಗಳಹಾಗೆಯೇ. 4. Remarks

—o—

11. *Malaya.*

೧೧. ಮಲಾಯ

೧. ಮೇರೆಗಳು. ಪೂರ್ವ ಪಶ್ಚಿಮ ದಕ್ಷಿಣಗಳಲ್ಲಿ ಸಮುದ್ರ (Ocean) ಉತ್ತರದಲ್ಲಿ ಸಯಾಮ್ (Siam) 1. Bouud-aries.

೨. ವಿವರ. ಮಲಾಯದಲ್ಲಿರುವ ಮಲಾಕ್ಕ (Malacca) ಎಂಬುವ ವಿಭಾಗವು ಇಂಗ್ಲೀಷ್ ಜನರ ವಶವಾಗಿದೆ. ಮಿಕ್ಕಾದ ದೇಶವೆಲ್ಲಾ ಮಲಾಯಿ ಜನರ ಪ್ರಧಾನಿಗಳ (Chiefs) ಕೈಕೆಳಗೆ ಇದೆ. ಮಲಾಯಿ ದೇಶದ ಉತ್ಪತ್ತಿಗಳು ಸ್ವಲ್ಪ ಹೆಚ್ಚುಕಡಿಮೆಯಾಗಿ ಹಿಂದೂಸ್ಥಾನದವುಗಳ ಹಾಗಿವೆ. ಮಲಾಯಿ ಜನರು ಬಹಳ ಮೋಸಗಾರರಾಗಿಯೂ ಕ್ರೂರ ಗುಣವುಳ್ಳವರಾಗಿಯೂ ಇದ್ದಾರಂತೆ, ಮಹಮ್ಮದಿನ ಮತಸ್ಥರಾಗಿದ್ದಾರೆ. 2. Remarks

—o—

12. *Cochin China.*

೧೨. ಕೋಚಿನ್ ಚೀನ.

೧. ಮೇರೆಗಳು. ಪೂರ್ವ ದಕ್ಷಿಣಗಳಲ್ಲಿ ಚೀನ ಕಡ 1. Boundaries.

ಲು (Chinese Sea) ಉತ್ತರದಲ್ಲಿ ಚೀನ (China) ಪಶ್ಚಿಮದಲ್ಲಿ ಸಯಾಮ್ (Siam)

2. Chief Town. ೨. ಮುಖ್ಯಪಟ್ಟಣ. ಹೂಯಿ (Hue.) ಇದು ಬಹಳ ದೊಡ್ಡಪಟ್ಟಣ. ಸುತ್ತು ಬಲವಾದ ಕೋಟೆ ಅದೆ. ಇದರ ಮೇಲೆ ೧೨೦೦ ಪಿರಂಗಿಗಳನ್ನು ಇರಿಸುವದಕ್ಕಾಗುತ್ತದೆ.

3. Remarks ೩. ವಿವರ. ಕೋಚಿನ್ ಚೀನ ಫಲ್ವೀ ದೇಶವಾಗಿದೆ ಅಲ್ಲಿ ಪೈರುಗಳು ಚನ್ನಾಗಾಗುತ್ತವೆ. ಫಲ್ವ ಜಾತಿ ಮರಗಳೂ ವಿಧವಿಧವಾದ ಲೋಹಗಳೂ ವುಂಟು. ಜನರು ಬೇರೆ ಬೇರೆ ವುದ್ಯೋಗಗಳನ್ನು ಮಾಡುವದರಲ್ಲಿ ಘಟ್ಟಿಗರಾಗಿದ್ದಾರೆ. ಬೌದ್ಧ ಮತಸ್ಥರಾಗಿದ್ದಾರೆ.

4. Laos. Cambodia. Tonquin. ೪. ಲಾವೋಸ್ (Laos) ಕಾಂಬೋದಿಯ (Cambodia) ತೊಂಕ್ವಿನ್ (Tonquin) ದೇಶಗಳು, ಕೋಚಿನ್ ಚೀನ ರಾಜ್ಯಕ್ಕೆ ಸೇರುತ್ತವೆ. ಈ ದೇಶಗಳನ್ನು ಕುರಿತು ಬಹಳ ವರ್ತಮಾನವಿಲ್ಲ.

——o——

13. *China.*

೧೩. ಚೀನ.

1. Boundaries. ೧. ಮೇರೆಗಳು. ಪೂರ್ವದಲ್ಲಿ ಚೀನ ಕಡಲು (Chinese Sea) ಪಶ್ಚಿಮದಲ್ಲಿ ಚೀನ ಟಾರ್ಟರಿ (Chinese Tartary) ಟಿಬೆಟ್ (Tibet) ಅಸ್ಸಾಮ್ (Assam) ಬರ್ಮ (Burmah) ಉತ್ತರದಲ್ಲಿ ಚೀನ ಟಾರ್ಟರಿ (Chinese)

Tartary) ದಕ್ಷಿಣದಲ್ಲಿ ಕೋಚಿನ್ ಚೀನ (Cochin China)
ಲಾವೋಸ್ (Laos)

೨. ಜನಸಂಖ್ಯೆ. ೨೪,೦೦,೦೦,೦೦೦ — 2. Population.

೩. ಮುಖ್ಯ ಪಟ್ಟಣಗಳು. — 3. Chief Towns.

೧. ಪೀಕಿನ್ (Pekin) } ಇದು ಚೀನಾದೇಶಕ್ಕೆಲ್ಲಾ ಸಂಸ್ಥಾನ. ಇದರಲ್ಲಿ ಮಹಾರಾಜನು ವಾಸ ಮಾಡುತ್ತಾನೆ. ಈ ಪಟ್ಟಣವು ಬಹಳ ದೊಡ್ಡದಾಗಿಯೂ ಸಾಂದರ್ಯ ವುಳ್ಳದ್ದಾಗಿಯೂ ಇದೆ. ಇದರಲ್ಲಿ ೨೦,೦೦,೦೦೦ ಜನಗಳು ಇದ್ದಾರೆ.

೨. ಸಿಂಕಾನ್ (Sinkan) } ಈ ಪಟ್ಟಣವು ಪೀಕಿನ್ ಪಟ್ಟಣಕ್ಕೆಷ್ಟು ದೊಡ್ಡದಾಗಿದೆಅಂತೆ.

೩. ನಾಂಕಿನ್ (Nankin) } ಇದುಕೂಡ ಬಹಳ ದೊಡ್ಡ ಪಟ್ಟಣ. ಇದರ ಸುತ್ತಲಗಲವು ಸ್ವಲ್ಪ ಹೆಚ್ಚುಗಡಿಮೆ ಪ್ರೊಂದೂವರೆ ಗಾವದ ದೂರವಿರುತ್ತದೆ.

೪. ಕಾಂಟೋನ್ (Canton) } ಬಹಳ ದೊಡ್ಡ ಪಟ್ಟಣ ಇದರಲ್ಲಿ ೧೦,೦೦,೦೦೦ ಜನಗಳು ಇದ್ದಾರೆ. ಬಹಳ ಕಾಲದಿಂದ ಯೂರೋಪ್ ಖಂಡದವರು ಅಲ್ಲಿಗೆ ಹೋಗಿ ವ್ಯಾಪಾರ ನಡಿಸುತ್ತಾ ಬಂದಿದ್ದಾರೆ.

ಪೂರ್ವದಲ್ಲಿ ಕಾಂಟೋನ್ ಪಟ್ಟಣಕ್ಕೆಲ್ಲದೆ ಯೂರೋಪಿನವರು ಬೇರೆ ಪಟ್ಟಣಕ್ಕೆ ವ್ಯಾಪಾರಕ್ಕೋಸ್ಕರ ಬರಕೂಡದೆಂದು ರಾಜನು ಅಪ್ಪಣೆ ಕೊಟ್ಟನು. ಆದರೆ ಈ ಕಾಲಕ್ಕೆ ಕೆಲವರುಷಗಳಿಗೆ ಮುಂಚೆ ಆತನಿಗೂ ಇಂಗ್ಲೀಷ್ ಜನರಿಗೂ ಜಗಳ ಹುಟ್ಟಿತು. ಇಂಗ್ಲೀಷ್ ಜನರು ಜಯಿಸಿ ಇನ್ನು — The Five Ports open to European commerce in addition to Canton.

೫ ಪಟ್ಟಣಗಳಿಗೆ ವ್ಯಾಪಾರಕ್ಕೋಸ್ಕರ ಹೋಗಬಹುದೆಂದು ಆತನು ಒಪ್ಪಿಕೊಳ್ಳ ಮಾಡಿದರು. ಈ ೫ ಪಟ್ಟಣಗಳು ಯಾವವಂದರೆ, ಶಾಂಘೇ (Shanghae) ನಿಂಗ್ಪೊ (Ningpo) ಫುಚೌಫು (Foo-chow-foo) ಅಮೋಯಿ (Amoy) ಹೊಂಗ್ಕೊಂಗ್ (Hongkong.) ಇವುಗಳೆಲ್ಲಾ ದೊಡ್ಡ ಪಟ್ಟಣಗಳೇ. ಹೊಂಗ್ಕೊಂಗ್ ಒಂದು ದ್ವೀಪದಲ್ಲಿ ಇದೆ.

Macao. ಚೀನ ದೇಶಕ್ಕೆ ಸೇರಿದ ಮಕಾವೊ (Macao) ಎಂಬುವ ದ್ವೀಪವು ಪೂರ್ವಕಾಲದಿಂದ ಯೂರೋಪಿನಲ್ಲಿರುವ ಪೋರ್ಚುಗಲ್ (Portugal) ಸೀಮೆಯವರ ವಶವಾಗಿದೆ. ಆಗಲಿಂದ ಆ ಸೀಮೆಯವರಲ್ಲಿ ಅನೇಕರು ಅಲ್ಲಿ ವಾಸ ಮಾಡಿ ವ್ಯಾಪಾರ ನಡಿಸಿದ್ದುಂಟು.

4. Rivers. ೪. ನದಿಗಳು. ಹೋಯಾಂಗ್ಹೋ (Hoangho) ಯಾಂಗ್ ಸಿಕಿಯಾಂಗ್ (Yang-tse-kiang) ಟೊಂಗ್ ಚೂಕಿಯಾಂಗ್ Tong-chu-kiang)

5. Islands. ೫. ದ್ವೀಪಗಳು. ಹಾಯಿನಾನ್ (Hainan) ಫೊರ್ಮೋಸ (Formosa) ಲೂಚೂ (Loo-choo) ಚೂಸಾನ್ (Chusan)

6. Remarks ೬. ವಿವರ. ಚೀನ ದೇಶವು ಬಹಳ ವಿಸ್ತಾರವಾದದ್ದು. ಹಿಂದೂಸ್ಥಾನದಲ್ಲಿ ಬೆಳಿಯುವ ಧಾನ್ಯ ಗಿಡ ಮರಗಳೂ ಅಲ್ಲಿ ಸಿಕ್ಕುವ ಲೋಹಗಳೂ ಮೃಗಗಳೂ ಚೀನ ದೇಶದಲ್ಲಿಯೂ ಉಂಟು. ಮತ್ತು ಟೀಗಿಡಗಳು (Tea) ಅಲ್ಲಿ ಬಹಳವಾಗಿ ಬೆಳಿಯುತ್ತವೆ. ಚೀನದವರು ಅವುಗಳ ಎಲೆಗಳನ್ನು ಒಣಗಿಟ್ಟು ಬಿಸಿನೀರು ಹೊಯಿದು ರಸತೆಗೆದು ಕುಡಿಯುತ್ತಾರೆ.

ಮತ್ತು ಈ ಟೀಮಿಲೆಯನ್ನು ಬೇರೆ ದೇಶಸ್ಥರಿಗೆ ಬಹಳವಾಗಿ ಮಾರುತ್ತಾರೆ. ಚೀನ ದೇಶದವರು ಅನೇಕ ಉದ್ಯೋಗಗಳಲ್ಲಿ ಬಹಳ ಚಮತ್ಕಾರಿಗಳಾಗಿದ್ದಾರೆ. ಬೇರೆ ದೇಶಸ್ಥರ ಸಂಗಡ ಸ್ನೇಹವಾಗಿ ಇರುವದಕ್ಕೂ ಅವರನ್ನು ತಮ್ಮ ದೇಶದಲ್ಲಿ ಬಿಡುವದಕ್ಕೂ ಅವರಿಗೆ ಮನಸ್ಸಿಲ್ಲ. ಆದದರಿಂದ ಚೀನ ದೇಶದ ಒಳಗಿನ ಭಾಗವನ್ನು ಕುರಿತು ನಮಗೆ ಬಹಳವಾಗಿ ತಿಳಿಯಲಿಲ್ಲ. ತನ್ನ ದೇಶಕ್ಕೆ ಉತ್ತರಕಡೆಯಲ್ಲಿ ವಾಸ ಮಾಡುವ ಟಾರ್ಟರ್ (Tartars) ಜನರು ತನ್ನ ಸೀಮೆಗೆ ಜಗಳಕ್ಕೋಸ್ಕರ ಬಂದು, ಅದನ್ನು ತಮ್ಮ ವಶ ಮಾಡಿ ಕೊಳ್ಳದಹಾಗೆ ಪೂರ್ವಕಾಲದಲ್ಲಿ ಚೀನದಲ್ಲಿ ಆಳಿದ ಒಬ್ಬ ಅರಸನು ಅದರ ಉತ್ತರ ಮೇರೆಗೆ ಸರಿಯಾಗಿ ಒಂದು ಬಲವಾದ ಗೋಡೆಯನ್ನು ಕಟ್ಟಿಸಿದನು. ಈ ಕೆಲಸ ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಯಾತಕ್ಕೆಂದರೆ ಈ ಗೋಡೆ ೧೫೦೦ ಮೈಲುಗಳಷ್ಟು ಉದ್ದವಾಗಿದೆ ೨೫ ಅಡಿಗಳ ಎತ್ತರವಾಗಿಯೂ ೨೪ ಅಡಿಗಳ ದಪ್ಪವಾಗಿಯೂ ಇದೆ. ಒಂದಕ್ಕೊಂದು ೧೦೦ ಗಜಗಳ ದೂರವಾಗಿ ಅದರ ಉದ್ದಕ್ಕೆ ಸರಿಯಾಗಿ ಬುರುಜುಗಳುಂಟು. ಅಲ್ಲಲ್ಲಿ ಕಮಾನುಗಳ ಮೇಲೆ ಇಳಿಸಲ್ಪಟ್ಟು ನದಿಗಳ ಮೇಲೆಯೂ ಕಣಿವೆಗಳಲ್ಲಿಯೂ ಆ ಗೋಡೆಯನ್ನು ಕಟ್ಟಿದ್ದಾರೆ. ಮತ್ತು ಅಲ್ಲಲ್ಲಿ ೫೦೦೦ ಅಡಿಗಳಷ್ಟು ಎತ್ತರವಾಗಿರುವ ಬೆಟ್ಟಗಳ ಮೇಲೆಯೂ ಅದು ಕಟ್ಟಲ್ಪಟ್ಟಿದೆ. ಚೀನದರವ ಅರಸನು ಇಷ್ಟು ಪ್ರಯಾಸವಾದ ಕೆಲಸ ಮಾಡಿಸಿದಾಗ್ಯೂ ಟಾರ್ಟರ್ ಜನರು ಅವನ ದೇಶದಲ್ಲಿ ಅಧಿಕಾರ ಸಂಪಾದಿಸಿಕೊಂಡರು. ಈವಾಗ ಆಳುವ ಅರಸನು ಟಾರ್ಟರ್ ಜನರ ವಂಶಸ್ಥನೇ. ಚೀನ ದೇಶದವರು ಬೌದ್ಧ

ಮತಸ್ಥರಾಗಿಯೂ ಪೂರ್ವದಲ್ಲಿದ್ದ ಕೊಂಫೂಸಿಯಸ್ (Confucius) ಎಂಬ ವಿದ್ವಾಂಸನ ಮತಸ್ಥರಾಗಿಯೂ ಇದ್ದಾರೆ. ಮತ್ತು ಅವರಲ್ಲಿ ಅನೇಕರು ಕ್ರೀಸ್ತಿಯರಾಗಿದ್ದಾರೆ.

—o—

14. *Japan.*

೧೪. ಜಾಪಾನ್.

1. Situation — ೧. ಜಾಪಾನ್ ರಾಜ್ಯದಲ್ಲಿ ಚೀನ ದೇಶಕ್ಕೆ ಸಮೀಪವಾಗಿರುವ ೪ ದೊಡ್ಡ ದ್ವೀಪಗಳು ಸೇರುತ್ತವೆ.

2. Islands. — ೨. ಇವು ಯಾವವೆಂದರೆ, ನೈಫೊನ್ (Niphon) ಜೆಸ್ಸೊ (Jesso) ಕ್ಯೂಸಿಯೂ (Kiusiu) ಸಿಕೋಕಿ (Siko-ki.)

3. Principal Island and Town. — 3. ಈ ದ್ವೀಪಗಳಲ್ಲಿ ನೈಫೊನ್ (Niphon) ಎಂಬುವದು ದೊಡ್ಡದು. ಜೆದ್ದೊ (Jeddo) ಅದರ ಮುಖ್ಯವಾದ ಪಟ್ಟಣವಾಗಿದೆ.

4. Remarks — ೪. ಜಾಪಾನಿನಲ್ಲಿ ೨,೫೦,೦೦,೦೦೦ ಜನಗಳಿರಬಹುದು. ಅದರಲ್ಲಿ ಅನೇಕ ದೊಡ್ಡ ಊರುಗಳುಂಟು. ದೇಶವು ಒಳ್ಳೇದು. ಜನರು ಬುದ್ಧಿವಂತರು. ಅನೇಕ ಕೆಲಸಗಳಲ್ಲಿ ಬಹು ಚಮತ್ಕಾರ ತೋರಿಸುತ್ತಾರೆ. ಅವರಲ್ಲಿ ವಿದ್ಯೆ ಸ್ವಲ್ಪ ಪ್ರಬಲವಾಗಿದೆ. ಆದರೆ ಬೇರೆ ದೇಶಸ್ಥರ ಸಂಗಡ ಅವರು ಸ್ನೇಹವಾಗಿರುವದಿಲ್ಲ. ಅವರ ಸಂಗಡ ವ್ಯಾಪಾರ ಮಾಡುವದಿಲ್ಲ. ಅವರನ್ನು ತಮ್ಮ ಸೀಮೆಯಲ್ಲಿ ಬರಲೀಸುವದಿಲ್ಲ. ಆದದರಿಂದ ಅವರನ್ನೂ ಅವರ ದೇಶವನ್ನೂ ಕುರಿತು ನಮಗೆ ಬಹಳ ವರ್ತಮಾನವಿಲ್ಲ. ಚೀನ ದೇಶದವರ ಸಂಗಡ

ಲೂ ಯೂರೋಪಿನಲ್ಲಿರುವ ಹೊಲ್ಲಾಂಡ್ (Holland) ದೇಶದವರ ಸಂಗಡಲೂ ಮಾತ್ರವೇ ವ್ಯಾಪಾರ ನಡಿಸುತ್ತಾರೆ. ಹೊಲ್ಲಾಂಡ್ ದೇಶದ ಹಡಗದವರು ಕ್ಯೂಸಿಯು (Kiusiu) ದ್ವೀಪದಲ್ಲಿರುವ ನಾಗಸಾಕಿ (Nagasaki) ಪಟ್ಣಕ್ಕೆ ವ್ಯಾಪಾರ ನಡಿಸುವದಕ್ಕೆ ಅಪ್ಪಣೆ ವುಂಟು. ಬೇರೊಂದು ಸ್ಥಳಕ್ಕೆ ಹೋಗಕೂಡದು.

---

15. *Tibet.*

೧೫. ತಿಬೆಟ್.

---

೧. ಮೇರೆಗಳು. ಪೂರ್ವದಲ್ಲಿ ಚೀನ (China) ಪಶ್ಚಿ 1. Boundaries.
ಮದಲ್ಲಿ ಕಾಷ್ಮೀರ್ (Cashmere) ಸ್ವತಂತ್ರ ಟಾರ್ಟರಿ (Independent Tartary) ಉತ್ತರದಲ್ಲಿ ಚೀನ ಟಾರ್ಟರಿ (Chinese Tartary) ದಕ್ಷಿಣದಲ್ಲಿ ಹಿಮಾಲಯ ಬೆಟ್ಟಗಳು (Himalayas.)

೨. ಜನಸಂಖ್ಯೆ ೫೦,೦೦,೦೦೦. 2. Population.

೩. ಮುಖ್ಯವಾದ ಪಟ್ಣ ಲಾಸ (Lassa) 3. Chief Town.

೪. ವಿವರ. ತಿಬೆಟ್ ದೇಶವು ಬೆಟ್ಟದ ಸೀಮೆಯಾಗಿದೆ. 4. Remarks
ಅದರ ಭೂಮಿ ಹೆಚ್ಚುಕಡಿಮೆ ೧೦,೦೦೦ ಅಡಿಗಳ ಎತ್ತರವಾಗಿದೆ. ಆದದರಿಂದ ಅಲ್ಲಿ ಬಹಳ ಚಳಿಯಾಗುತ್ತದೆ. ಅಲ್ಲಿ ಧಾನ್ಯ ಹಣ್ಣು ಪಲ್ಯಗಳೂ ವಿಸ್ತಾರವಾಗಿ ಬೆಳಿಯುವದಿಲ್ಲ. ಬಹಳ ಕುರಿ ದನಗಳೂ, ಇವುಗಳಿಗೋಸ್ಕರ ಪೈರೂ ಮೇವೂ ವುಂಟು. ತಿಬೆಟ್ ದೇಶಸ್ಥರು ಬೌದ್ಧ ಮತಸ್ಥವರಾಗಿದ್ದಾರೆ.

ಅವರ ದೊಡ್ಡ ಗುರುವಿಗೆ ದಲಾಯಿಲಾಮ (Dalai Lama) ಎಂದು ಹೇಳುತ್ತಾರೆ. ಈತನು ದೇವರ ಅವತಾರವಂತೆ. ದೇವರಿಗೆ ಮಾಡತಕ್ಕ ಆರಾಧನೆಯನ್ನು ಗುರುವಿಗೆ ಮಾಡುವರು.

———o———

16. *Independent Tartary.*

೧೬. ಸ್ವತಂತ್ರ ಟಾರ್ಟರಿ.

1. Boundaries. ೧. ಮೇರೆಗಳು. ಪೂರ್ವದಲ್ಲಿ ಚೀನ ಟಾರ್ಟರಿ (Chinese Tartary) ಪಶ್ಚಿಮದಲ್ಲಿ ಕಾಸ್ಪಿಯನ್ ಕಡಲು (Caspian Sea) ಉತ್ತರದಲ್ಲಿ ಏಷ್ಯದ ರಸ್ಸಿಯ (Asiatic Russia) ದಕ್ಷಿಣದಲ್ಲಿ ಪಾರಸಿ (Persia) ಅಫ್ಗಾನಿಸ್ಥಾನ (Afghanistan)

2. Population. ೨. ಜನಸಂಖ್ಯೆ ೫೦,೦೦,೦೦೦

3. Divisions. ೩. ಮುಖ್ಯ ವಿಭಾಗಗಳು. ಮುಖ್ಯ ಪಟ್ಣಗಳು.

ಮುಖ್ಯ ವಿಭಾಗಗಳು	ಮುಖ್ಯ ಪಟ್ಣಗಳು
೧) ಬೊಕಾರ (Bokhara)	ಬೊಕಾರ (Bokhara) ಸಮಾರ್ಕಾಂಡ್ (Samarcand) ಬಾಲ್ಕ್ (Balkh)
೨) ಕೀವ (Khiva)	ಕೀವ (Khiva)

3. Mountains. ೩. ಬೆಟ್ಟಗಳು. ಕಾಕಸಸ್ (Caucasus)

4. Rivers. ೪. ನದಿಗಳು. ಜೈಹೋನ್ (Jihon) ಸೈಹೋನ್ (Sihon)

5. Seas. ೫. ಕಡಲುಗಳು. ಕಾಸ್ಪಿಯನ್ (Caspian) ಆರಲ್ (Aral)

6. Remarks. ೬. ವಿವರ. ಸ್ವತಂತ್ರ ಟಾರ್ಟರಿಯಲ್ಲಿ ಅಲ್ಲಲ್ಲಿ ಬಹಳ ಬೀಡು ಭೂಮಿ ವುಂಟು, ಅದರ ಜನರಲ್ಲಿ ಅನೇಕರು

ಪೂರುಗಳಲ್ಲಿ ವಾಸಮಾಡದೆ ಬೇರೆಬೇರೆ ಸ್ಥಳಗಳಲ್ಲಿ ತಿರಿಗಾಡುತ್ತಾರೆ. ಬೊಕಾರ ಕೀವ ವಿಭಾಗಗಳಲ್ಲಿಯೂ ಇನ್ನು ಕೆಲವು ಕಡೆಗಳಲ್ಲಿಯೂ ಚನ್ನಾಗಿ ಪೈರಾಗುವ ಭೂಮಿ ಅದೆ. ಜನರು ದುರ್ಗುಣವೂ ಬಲವೂ ಧೈರ್ಯವೂ ವುಳ್ಳವರಾಗಿದ್ಧಾರೆ. ಅವರು ಮಹಮ್ಮದಿನ ಮತಸ್ಥರು.

—o—

17. *Chinese Tartary.*

೧೭. ಚೀನ ಟಾರ್ಟರಿ.

೧. ಮೇರೆಗಳು. ಪೂರ್ವದಲ್ಲಿ ಯಾಪಾನ್ ಕಡಲೂ (Sea of Japan) ಪಶ್ಚಿಮದಲ್ಲಿ ಸ್ವತಂತ್ರ ಟಾರ್ಟರಿ (Independent Tartary) ಉತ್ತರದಲ್ಲಿ ಏಷ್ಯದ ರಸ್ಸಿಯ (Asiatic Russia) ದಕ್ಷಿಣದಲ್ಲಿ ಟಿಬೆಟ್ (Tibet) ಚೀನ (China.) 1. Boundaries.

೨. ಜನಸಂಖ್ಯೆ ೧,೨೦,೦೦,೦೦೦. 2. Population.

೩. ವಿಭಾಗಗಳು. ಮುಖ್ಯ ಪಟ್ಟಣಗಳು. 3. Divisions

೧) ಮಾಂಚೂರಿಯ (Manchuria)	ಕರಿನಾಲ (Karin Oula) ಚಿಂಯಾಂಗ್ (Chinyang) ನಿಂಗೂತ (Ningoota)
೨) ಮೊಂಗೋಲಿಯ (Mongolia)	ಮಾಯಿಮಾಚಿನ್ (Maimatchin)
೩) ಬುಖಾರಿಯ (Bucharia)	ಯಾರ್ಕಾಂಡ್ (Yarkand)

೪) ಕೊರೀಯ (Corea) } ಕಿಂಕಿತಾವೊ (Kingkitao)

4. Mountains. ೪. ಬೆಟ್ಟಗಳು. ಅಲ್ತಾಯಿ (Altai)

5. Rivers. ೫. ನದಿಗಳು. ಸಾಗಲಿನ್ (Sagalin) ಯಾರ್ಕಾಂಡ್ (Yarkand)

6. Remarks ೬. ವಿವರ. ಚೀನ ಟಾರ್ಟರಿ ಶೀಮೆ ಬಹಳ ವಿಸ್ತಾರವಾಗಿದೆ. ಅದರ ಭೂಮಿ ಮೆತ್ತರವಾದದ್ದು. ಅಲ್ಲಲ್ಲಿ ಬೀಡುಗಳು (Deserts) ವುಂಟು. ಇವುಗಳಲ್ಲಿ ಕೋಬಿ ಬೀಡು (Desert of Cobi) ದೊಡ್ಡದು. ಮಿಕ್ಕಾದ ಸ್ಥಳಗಳಲ್ಲಿ ದನಗಳಿಗೆ ಪ್ರೊಶ್ಯೇ ಮೇವು ಅದೆ. ಜನಗಳು ಬೇರೆಬೇರೆ ಗೋತ್ರಗಳವರಾಗಿದ್ದಾರೆ. ಇವರಲ್ಲಿ ಅನೇಕರು ಡೇರಗಳಲ್ಲಿ ವಾಸಮಾಡಿ, ಅಲ್ಲಲ್ಲಿ ತಿರುಗಾಡಿ, ತಮ್ಮ ದನಗಳಿಗೆ ಯೆಲ್ಲಿ ಮೇವು ವುಂಟೋ ಅಲ್ಲಿ ಇಳಿಯುವರು. ಆದ್ದರಿಂದ ಆಶೀಮೆಯಲ್ಲಿ ದೊಡ್ಡ ಪೂರುಗಳು ಬಹಳ ಇರುವದಿಲ್ಲ. ಜನರು ಬಾದ್ಧ ಮತಸ್ಥರಾಗಿದ್ದಾರೆ.

———o———

18. *Asiatic Russia.*

೧೮. ಏಷ್ಯದ ರಸ್ಸಿಯ.

———

1. Boundaries. ೧. ಮೇರೆಗಳು. ಪೂರ್ವದಲ್ಲಿ ಪಸಿಫಿಕ್ ಸಮುದ್ರ (Pacific Ocean) ಪಶ್ಚಿಮದಲ್ಲಿ ಯೂರೋಪಿನ ರಸ್ಸಿಯ (European Russia) ಉತ್ತರದಲ್ಲಿ ಉತ್ತರ ಸಮುದ್ರ (Northern Ocean) ದಕ್ಷಿಣದಲ್ಲಿ ಪಾರಶಿ (Persia) ಸ್ವತಂತ್ರ

ಟಾರ್ಟರಿ (Independent Tartary) ಚೀನ ಟಾರ್ಟರಿ (Chinese Tartary)

೨. ಜನಸಂಖ್ಯೆ ೬೦,೦೦,೦೦೦ — 2. Population.

೩. ವಿಭಾಗಗಳು. ಮುಖ್ಯ ಪಟ್ಟಣಗಳು. — 3. Divisions

೧) ಸೈಬೀರಿಯ (Siberia)	ಟೊಬೋಲ್ಸ್ಕ್ (Tobolsk) ಟೊಂಸ್ಕ್ (Tomsk) ಒಂಸ್ಕ್ (Omsk) ಇರ್ಕುಟ್ಸ್ಕ್ (Irkutsk) ಯಾಕುಟ್ಸ್ಕ್ (Jakutsk) ಒಕೊಟ್ಸ್ಕ್ (Okotsk)
೨) ಕಾಂಚಾಟ್ಕ (Kamtchatka)	ಪೀಟ್ರೊಪಾವ್ಲೋಸ್ಕಿ (Petropawloski)
೩) ಜಾರ್ಜಿಯ (Georgia)	ಟಿಫ್ಲಿಸ್ (Tiflis) ಎರಿವಾನ್ (Erivan)

೪. ಬೆಟ್ಟಗಳು. ಊರಾಲ್ (Ural) — 4. Mountains.

೫. ನದಿಗಳು. ಊರಾಲ್ (Ural) ಓಬಿ (Obi) ಲೀನ (Lena) — 5. Rivers.

೬. ಕಡಲು. ಒಕೊಟ್ಸ್ಕ್ (Okotsk) — 6. Sea.

೭. ವಿವರ. ಏಷ್ಯದ ರಸ್ಸಿಯ ಸೌಖ್ಯವಾದ ದೇಶವಲ್ಲ. ಕೆಲವು ಸ್ಥಳಗಳಲ್ಲಿ ಮಾತ್ರವೇ ಪೈರುಗಳು ಸ್ವಲ್ಪ ಚೆನ್ನಾಗುತ್ತವೆ. ಮಿಕ್ಕಾದ ಭೂಮಿಯೆಲ್ಲಾ ಹಸನುಮಾಡತಕ್ಕ ಭೂಮಿ ಅಲ್ಲ. ಆದೇಶದ ಉತ್ತರದಿಕ್ಕಿನಲ್ಲಿ ಬಹು ಚಳಿಯಾಗುತ್ತದೆ. ಜನಗಳು ವಿಧವಿಧವಾದ ಗೋತ್ರಗಳವರಾಗಿದ್ದಾರೆ. ಇವರಲ್ಲಿ ಅನೇಕರು ಬೇಟೆ ಆಡುವದರಿಂದ ಜೀವನ ಮಾಡಿಕೊಳ್ಳುತ್ತಾರೆ. ಸೈಬೀರಿಯದಲ್ಲಿ ಚಿನ್ನ ತಾಂಬ್ರ — 7. Remarks

కబ్బిణ ఇవుగళు శిక్కువ గణిగళుంటు. ఈగణిగళల్లి అగియువదరల్లి కష్టపడువదక్కె యూరోపినల్లిరువ రస్సియ దేశదింద అపరాధస్తరన్ను కళుహిసుత్తారె.

—o—

19. *Islands connected with Asia.*

౧౯. ఏష్య ఖండక్కెసేరిద ద్వీపగళు.

1. Islands. ౧. ద్వీపగళు.	ముఖ్య పట్టణగళు.
౧) సుమాత్ర (Sumatra)	మినాంకబూ (Menancaboo) బెంకూలెన్ (Benkoolen) అచీన్ (Acheen
౨) జావ (Java)	బటేవియ (Batavia)
౩) బోర్నియో Borneo)	బోర్నియో (Borneo)
౪) సెలిబీస్ (Celebes)	మకాసర్ (Macassar)
౫) మొలక్క ద్వీపగళు (Moluccas)	అంబొయిన (Amboyna)
౬) ఫిలిప్పిన్ ద్వీపగళు (Philippines)	మనిల్ల (Manilla)

2. Remarks ౨. వివర. ఈ ద్వీపగళల్లి బేరెబేరె గోత్రగళవరు ఇద్దారె. మలాయి జన (Malays) ముఖ్య.

ಇವರಲ್ಲಿ ಕೆಲವರು ಚಮತ್ಕಾರಿಗಳಾಗಿಯೂ ಮರ್ಯಾದಸ್ಥರಾಗಿಯೂ ಇದ್ದಾರೆ. ಆದರೆ ಅನೇಕರು ಬುದ್ಧಿಹೀನರಾಗಿಯೂ ದುರ್ಗುಣವುಳ್ಳವರಾಗಿಯೂ ಮರ್ಯಾದೆ ಯಿಲ್ಲದವರಾಗಿಯೂ ಇದ್ದಾರೆ. ಮಹಮ್ಮದಿನ ಮತ ಅವರಲ್ಲಿ ಪ್ರಬಲವಾಗಿದೆ. ಆದರೆ ಅನೇಕರು ವಿಗ್ರಹಾರಾಧಕರಾಗಿದ್ದಾರೆ. ಬಹಳ ಕಾಲದಿಂದ ಯೂರೋಪಿನವರು ಈ ದ್ವೀಪಗಳಿಗೆ ವ್ಯಾಪಾರಕ್ಕೋಸ್ಕರ ಹೋಗುವದುಂಟು. ಅಲ್ಲಿ ವಿಧವಿಧವಾದ ಸುಗಂಧವರ್ಗಗಳೂ ಲೋಹಗಳೂ ಸಿಕ್ಕುತ್ತವೆ. ಯೂರೋಪಿನವರಲ್ಲಿ ಅನೇಕರು ಆ ದ್ವೀಪಗಳಲ್ಲಿ ಈಗ ವಾಸವಾಗಿದ್ದಾರೆ. ಪಿಲಿಪ್ಪಿನ್ ದ್ವೀಪಗಳು ಸ್ಪೇನ್ (Spain) ದೇಶದವರ ವಶವಾಗಿವೆ. ಮಿಕ್ಕಾದವುಗಳಲ್ಲಿ ಹೊಲ್ಲಾಂಡ್ (Holland) ದೇಶದವರು ಮುಖ್ಯವಾಗಿ ದೊರೆ ತನ ಮಾಡುತ್ತಾರೆ. ಬೊರ್ನಿಯೋ ದ್ವೀಪದಲ್ಲಿ ಇಂಗ್ಲೀಷ್ ಜನರಿಗೆ ಅಧಿಕಾರವುಂಟು.

—o—

II. EUROPE.

೨. ಯೂರೋಪ್.

---

1. Boundaries. ೧. ಮೇರೆಗಳು. ಪೂರ್ವದಲ್ಲಿ ಕಾಸ್ಪಿಯನ್ ಕಡಲು (Caspian Sea) ಏಷ್ಯ ಖಂಡ (Asia) ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಮುದ್ರ (Atlantic Ocean) ಉತ್ತರದಲ್ಲಿ ಉತ್ತರ ಸಮುದ್ರ (Northern Ocean) ದಕ್ಷಿಣದಲ್ಲಿ ಮೆಡಿಟರ್ರೇನಿಯನ್ ಕಡಲು (Mediterranean Sea) ಆರ್ಕಿಪೆಲ್ಲಗೊ (Archipelago) ಕಪ್ಪು ಕಡಲು (Black Sea) ಕಾಕಸಸ್ ಬೆಟ್ಟಗಳು (Mount Caucasus.)

2. Population. ೨. ಜನಸಂಖ್ಯೆ ೨೪,೦೦,೦೦,೦೦೦

3. Divisions. ೩. ವಿಭಾಗಗಳು.

೧) ಬ್ರಿಟಿಷ್ ರಾಜ್ಯ (British Empire)
೨) ಫ್ರಾಂಸ್ (France)
೩) ಸ್ಪೇನ್ (Spain)
೪) ಪೋರ್ಟುಗಲ್ (Portugal)
೫) ಇಟಲಿ (Italy)
೬) ಸ್ವಿಟ್ಸರ್ಲಾಂಡ್ (Switzerland)
೭) ಬೆಲ್ಜಿಯಮ್ (Belgium)
೮) ಹೋಲ್ಲಾಂಡ್ (Holland)
೯) ಆಸ್ಟ್ರಿಯ (Austria)
೧೦) ಪ್ರಶ್ಯ (Prussia)

೧೧) ಜೆರ್ಮನಿ (Germany)

೧೨) ಡೆನ್ಮಾರ್ಕ್ (Denmark)

೧೩) ಸ್ವೀಡೆನ್ (Sweden)

೧೪) ನೊರ್ವೆ (Norway)

೧೫) ಯೂರೋಪಿನ ರಸ್ಸಿಯ (European Russia)

೧೬) ಯೂರೋಪಿನ ತುರುಕಿ (European Turkey)

೧೭) ಗ್ರೀಸ್ (Greece)

೪. ವಿವರ. ಯೂರೋಪಿನವರು ಬಹಳ ಬುದ್ಧಿವಂತರಾಗಿದ್ದಾರೆ. ಸಕಲ ವಿದ್ಯಗಳಲ್ಲಿಯೂ ಚಮತ್ಕಾರವಾದ ಕೆಲಸಗಳನ್ನು ಮಾಡುವದರಲ್ಲಿಯೂ ಬಹು ಘಟ್ಟಿಗರು. ಸಕಲ ಶೀಮೆಯವರ ಸಂಗಡ ವ್ಯಾಪಾರ ನಡಿಸುವರು. ಬಹಳ ಮರ್ಯಾದಸ್ಥರಾಗಿಯೂ ಅನೇಕ ದೇಶಸ್ಥರಿಗೆ ಪ್ರಯೋಜನವಾದ ಕಾರ್ಯಗಳನ್ನು ನಡಿಸುವವರಾಗಿಯೂ ಇದ್ದಾರೆ. ಯೂರೋಪಿನಲ್ಲಿ ಅನೇಕ ದೊಡ್ಡ ಬಲವಾದ ರಾಜ್ಯಗಳುಂಟು. ತುರುಕಿ ಶೀಮೆಯವರಲ್ಲದೆ ಮಿಕ್ಕಾದವರೆಲ್ಲರು ಕ್ರೀಸ್ತಿಯರಾಗಿದ್ದಾರೆ. ತುರುಕಿಯವರು ಮಹಮ್ಮದನ ಮತಸ್ಥರು. ಆದರೆ ತುರಕಿಯಲ್ಲಿ ಕೂಡ ಅನೇಕ ಕ್ರೀಸ್ತಿಯರಿದ್ದಾರೆ. 4. Remarks

—o—

1. *British Empire.*

೧. ಬ್ರಿತಿಷ್ ರಾಜ್ಯ.

---

೧. ಬ್ರಿಟಿಷ್ ರಾಜ್ಯದಲ್ಲಿ ಎರಡು ದ್ವೀಪಗಳು ಶೇರುತ್ತವೆ. ಮೊದಲನೇ ದ್ವೀಪವು. ಗ್ರೇಟ್ ಬ್ರಿಟನ್ (Great 1. General Description.

Britain) ಇದು ೩. ವಿಭಾಗಗಳಾಗಿ ವಿಭಾಗಿಸಲ್ಪಟ್ಟದೆ. ೧. ಇಂಗ್ಲಾಂಡ್ (England.) ೨. ವೇಲ್ಸ್ (Wales.) ೩. ಸ್ಕೊಟ್ಲಾಂಡ್ (Scotland.) ಎರಡನೇ ದ್ವೀಪವು. ಐರ್ಲಾಂಡ್ (Ireland.)

2. Boundaries. ೨. ಗ್ರೇಟ ಬ್ರಿಟನ್ ದ್ವೀಪದ ಮೇರೆಗಳು ಯಾವವಂದರೆ, ಪೂರ್ವದಲ್ಲಿ ಜರ್ಮನ್ ಸಮುದ್ರ (German Ocean) ಪಶ್ಚಿಮದಲ್ಲಿ ಐರಿಷ್ ಕಡಲೂ (Irish Sea) ಸಂಟ್ ಜೋರ್ಜಿಸ್ ಗೊಂದಿ (St. George's Channel) ಉತ್ತರದಲ್ಲಿ ಉತ್ತರ ಸಮುದ್ರ (Northern Ocean) ದಕ್ಷಿಣದಲ್ಲಿ ಇಂಗೀಷ್ ಗೊಂದಿ (English Channel.)

ಐರ್ಲಾಂಡ ದ್ವೀಪದ ಮೇರೆಗಳು ಯಾವವಂದರೆ ಪೂರ್ವದಲ್ಲಿ ಐರಿಷ್ ಕಡಲೂ (Irish Sea) ಸಂಟ್ ಜೋರ್ಜಿಸ್ ಗೊಂದಿಯೂ (St. George's Channel) ಪಶ್ಚಿಮ ಉತ್ತರ ದಕ್ಷಿಣಗಳಲ್ಲಿ ಅಟ್ಲಾಂಟಿಕ್ ಸಮುದ್ರ (Atlantic Ocean.)

—o—

1) *England.*

೧) ಇಂಗ್ಲಾಂಡ್

1. Country. ೧. ಇದು ಬಹಳ ಒಳ್ಳೇ ದೇಶ. ಪ್ರತಿ ತಿಂಗಳಲ್ಲಿ ಆಗಾಗ್ಯ ಮಳೆ ಬೀಳುತ್ತಾ ಬರುವದರಿಂದ ಅದರ ಭೂಮಿ ಯಾವಾಗಲು ಸ್ವಲ್ಪ ತ್ಯಾವವಾಗಿರುವದು. ಹೊಲಗಳು ಹ

ಸುಲಾಗಿದ್ದು ಅವುಗಳಲ್ಲಿ ಯಾವಾಗಲು ಕುದುರೆ ದನ ಮೊದಲಾದವುಗಳಿಗೆ ಪುಷ್ಕಳ ಮೇವು ಸಿಕ್ಕುತ್ತದೆ. ಒಕ್ಕಲಿಗರು ಬಹು ಚಮತ್ಕಾರದಿಂದಲೂ ಜಾಗ್ರತೆಯಿಂದಲೂ ಭೂಮಿಯನ್ನು ಹಸನು ಮಾಡುವದರಿಂದ ವಿಧವಿಧವಾದ ಪೈರುಗಳು ಚನ್ನಾಗುತ್ತವೆ.

೨. ಇಂಗ್ಲಾಂಡಿನಲ್ಲಿ ಅನೇಕ ನದಿಗಳುಂಟು. ಕೆಲ 2. Rivers.
ವು ಚಿಕ್ಕವು. ಕೆಲವು ದೊಡ್ಡವು. ಥೇಮ್ಸ್ (Thames) ಸಿವರ್ನ (Severn) ಹಂಬರ್ (Humber) ಮೆರ್ಸೀ (Mersey) ಟೈನ (Tyne) ಊಸ್ (Ouse) ಟ್ರೆಂಟ್ (Trent.) ಮುಖ್ಯ.

೩. ಬೆಟ್ಟಗಳು. ಉತ್ತರ ಪಶ್ಚಿಮ ದಿಕ್ಕುಗಳಲ್ಲಿ ಬೆಟ್ಟ 3. Mountains.
ಗಳುಂಟು. ಇವುಗಳಲ್ಲಿ ದೊಡ್ಡವಾದದ್ದು ೩೦೦೦ ಅಡಿಗಳ ಎತ್ತರವಾಗಿದೆ.

೪. ದ್ವೀಪಗಳು. ಇಂಗ್ಲಾಂಡಿಗೆ ಹತ್ತಿರವಾಗಿರುವ ಕೆ 4. Islands.
ಲವು ಚಿಕ್ಕ ದ್ವೀಪಗಳು ಅದಕ್ಕೆ ಸೇರುತ್ತವೆ. ಯಾವವಂದರೆ, ವೈಟ್ ದ್ವೀಪ (Isle of Wight) ಮಾನ ದ್ವೀಪ (Isle of Man) ಗರ್ನ್ಸೀ (Guernsey) ಜರ್ಸೀ (Jersey) ಆಲ್ಡರ್ನೀ (Alderney.)

೫. ಇಂಗ್ಲಾಂಡ್ ದೇಶದ ಭೂಮಿ ಆರೋಗ್ಯವಾದದ್ದು. 5. Climate.
ನಾಲ್ಕು ಐದು ತಿಂಗಳುಮಾತ್ರ ಶೆಕೆಯಾಗುವದು. ಆದರೆ ಅಷ್ಟು ತೀಕ್ಷ್ಣಾದ್ದಲ್ಲ. ಇನ್ನು ಮೂರು ನಾಲ್ಕು ತಿಂಗಳು

ಚಳಿಯಾದಾಗ್ಯೂ ಸ್ವಲ್ಪ ಮೊಟ್ಟಾಗಿರುವದು. ಮಿಕ್ಕಾದ ತಿಂಗಳುಗಳಲ್ಲಿ ಬಹು ಶೀತವಾಗುತ್ತದೆ. ಅದನ್ನು ತಾಳುವದು ಕಷ್ಟ. ಈ ಕಾಲದಲ್ಲಿ ಮೇಘಗಳಲ್ಲಿರುವ ಆವಿ (Vapour) ಚಳಿಯಿಂದ ಕಟ್ಟಿಕೊಳ್ಳುವದರಿಂದ ಮಳೆಯಾಗಿ ಬೀಳುವದಿಲ್ಲ. ಮೇಕೆದ ಅರಳೆಯ ತುಂಡುಗಳು ಹೇರಳವಾಗಿ ಆಕಾಶದಿಂದ ಬಿದ್ದಹಾಗೆ ಬೆಳ್ಳಗಾಗಿ ಬಿದ್ದು ಭೂಮಿಯಮೇಲೆ ನೀರಿನಹಾಗೆ ಹರಿಯದೆ ಅದನ್ನು ಕರಗಿಸುವಷ್ಟು ಬಿಸಲುಬರುವ ಪರಿಯಂತರ ಅಲ್ಲಿಯೇ ಇದ್ದು ಭೂಮುಖವನ್ನು ಮುಚ್ಚುತ್ತದೆ. ಇದರಿಂದ ಹೊಲ ಮಾರ್ಗ ಮನೆ ಮರ ಮೊದಲಾದವುಗಳೆಲ್ಲಾ ಬೆಳ್ಳಗಾಗುತ್ತವೆ. ಅಂಥಾ ಸಮಯದಲ್ಲಿ ಪ್ರಯಾಣ ಮಾಡುವದು ಕಷ್ಟ; ಯಾತಕ್ಕಂದರೆ, ಮೇಘಗಳಿಂದ ಬಿದ್ದಿರುವ ಸ್ನೋ (Snow) ಯೆಂಬುವ ಆ ವಸ್ತುವು ಭೂಮಿಯ ಮೇಲೆ ಅಲ್ಲಲ್ಲಿ ಬಹಳವಾಗಿರುವದರಿಂದ ಆಳುಗಳು ಮೊಮಟಿಯಿಂದ ಅದನ್ನು ಕತ್ತರಿಸಿ ದಾರಿ ಮಾಡದಿದ್ದರೆ ಮನುಷ್ಯನಾಗಲಿ ರಥವಾಗಲಿ ಯೆಲ್ಲಾದರು ಹೋಗಕೂಡದು. ಮತ್ತು ಆ ಶೀತಕಾಲದಲ್ಲಿ ಕೆರೆ ನದಿಗಳಲ್ಲಿರುವ ನೀರು ಕಲ್ಲಿನಹಾಗೆ ಘಟ್ಟಿಯಾಗುತ್ತದೆ. ಆವಾಗ ಜನರು ಅದರಮೇಲೆ ನಡೆಯುವರು, ಆಟ ಆಡುವರು. ಇಂಥಾ ಸಮಯದಲ್ಲಿ ರಾತ್ರಿಗೆ ಮಲಗುವಾಗ ಸ್ವಲ್ಪ ನೀರು ಪಾತ್ರೆಯಲ್ಲಿ ಮನೆಯೊಳಗೆ ಇರಿಸಿದರೆ ಹೊತಾರೆ ಯೇಳುವಾಗ ಅದು ಕಟ್ಟಿಕೊಂಡು ಕಲ್ಲಿನಹಾಗಿರುವದು.

6. Productions.

೬. ಇಂಗ್ಲಾಂಡಿನಲ್ಲಿ ಗೋಧಿ ಮೊದಲಾದ ವಿಧವಿಧವಾದ ಧಾನ್ಯಗಳೂ ಅನೇಕ ವಿಧ ವೊಳ್ಳೆ ಹಣ್ಣುಗಳೂ ಪಲ್ಯಗಳೂ

ಆಗುತ್ತವೆ. ಅಲ್ಲಿ ಸೌದೆ ಇದ್ದಲುಗಳಿಗೆ ಬದಲಾಗಿ ಒಲೆಯಲ್ಲಿ ಸುಡತಕ್ಕ ಕೋಲ್ (Coal) ಎಂಬುವ ಪದಾರ್ಥವೂ ಕಬ್ಬಿಣ ತಾಂಬ್ರ ತಗಡು ಸೀಸಗಳೂ ಸಿಕ್ಕುತ್ತವೆ.

೭. ಇಂಗ್ಲಾಂಡ್ ದೇಶದವರು ಸಕಲಾತಿ, ವಿಧವಿಧವಾದ ಬಟ್ಟೆ, ರೇಶಿಮೆ, ಶಾಲುಗಳನ್ನು ವಿಚಿತ್ರವಾದ ಪಾತ್ರೆಗಳನ್ನು ಬಹಳವಾಗಿ ಮಾಡಿ, ತಮ್ಮ ದೇಶದಲ್ಲಿ ಮಾತ್ರವೇ ಅಲ್ಲ, ಬೇರೆಬೇರೆ ದೇಶಸ್ಥರಸಂಗಡ ಅವುಗಳಲ್ಲಿ ಬಹಳ ವ್ಯಾಪಾರ ನಡಿಸುತ್ತಾರೆ. ಆದರೆ ಈ ಕೈಕೆಲಸಗಳಲ್ಲಿ ಮಾತ್ರವಲ್ಲ. ಸಕಲ ಕೆಲಸಗಳನ್ನು ಮಾಡುವದರಲ್ಲಿ ಬಹಳ ಘಟ್ಟಿಗರಾಗಿದ್ದಾರೆ. 7. Manufactures.

೮. ಜನಸಂಖ್ಯೆ ೧,೫೦,೦೦,೦೦೦. 8. People.

ಇಂಗ್ಲೀಷ್ ಜನರು ಬಹಳ ಬುದ್ಧಿಯೂ ಜಾಗ್ರತೆಯೂ ನಂಬಿಕೆಯೂ ದಯವೂ ಉಳ್ಳವರಾಗಿದ್ದಾರೆ. ತಮ್ಮ ದೇಶಸ್ಥರಿಗೂ ಬೇರೆ ದೇಶಸ್ಥರಿಗೂ ಪ್ರಯೋಜನವಾದ ಕಾರ್ಯಗಳನ್ನು ನಡಿಸುವದರಲ್ಲಿ ಬಹು ಪ್ರಯಾಸ ಪಡುತ್ತಾರೆ. ಆದರೆ ಎಲ್ಲರು ಅಂಥವರಲ್ಲ. ಬೇರೆ ದೇಶಗಳಲ್ಲಿ ಇರುವಹಾಗೆ ಇಂಗ್ಲಾಂಡಿನಲ್ಲಿಕೂಡ ಕುಂಟರು ದುರ್ಮಾರ್ಗರು ಕೆಲಸಕ್ಕೆ ಬಾರದವರು ಅನೇಕರಿದ್ದಾರೆ. ಇಂಗ್ಲಾಂಡಿನವರೆಲ್ಲರು ಕ್ರೀಸ್ತಿಯರಾಗಿದ್ದಾರೆ. ಅನೇಕರು ರೋಮಾನ್ ಸಭೆಯವರಾಗಿದ್ದಾರೆ. ಆದರೆ ಸ್ವಲ್ಪ ಕಡಿಮೆಯಾಗಿ ದೇಶದವರೆಲ್ಲರು ಪ್ರೊಟೆಸ್ಟಾಂಟ್ (Protestant) ಸಭೆಯವರೇ.

೯. ಸಂಸ್ಥಾನವು. ಲಂಡನ್ (London.) 9. Capital.

ಇದು ಭೂಮಿಯಲ್ಲಿರುವ ಎಲ್ಲಾ ಪಟ್ಣಗಳಿಗಿಂತ ದೊಡ್ಡ

ದು ೩೦,೦೦,೦೦೦ ಜನ ಅಲ್ಲಿ ವಾಸವಾಗಿದ್ದಾರೆ. ಅದರಲ್ಲಿ ೧೪,೦೦೦ ಬೀದಿಗಳುಂಟು. ಒಂದು ದೊಡ್ಡ ಬೀದಿಯಲ್ಲಿ ೭೦೦೦ ರಥಗಳಷ್ಟು ಒಂದೇ ದಿನದಲ್ಲಿ ತಿರುಗುತ್ತವೆ. ಮನೆಗಳೆಲ್ಲಾ ದೊಡ್ಡವು. ಸ್ವಲ್ಪ ಹೆಚ್ಚುಕಡಿಮೆ ಮೆಲ್ಲು ೩, ಇಲ್ಲವೇ ೪, ಇಲ್ಲವೇ ೫, ಅಂತಸ್ತುಗಳುಳ್ಳವು. ಲಂಡನ್ ಪಟ್ಟಣ ಥೇಮ್ಸ್ (Thames) ನದಿಯ ದಡದಲ್ಲಿ ಕಟ್ಟಲ್ಪಟ್ಟಿದೆ. ಆ ನದಿ ಪಟ್ಟಣದ ಮಧ್ಯದಲ್ಲಿ ಹರಿದು ಹೋಗುತ್ತದೆ. ನದಿಯನ್ನು ದಾಟುವದಕ್ಕೆ ಅಲ್ಲಲ್ಲಿ ಆರು ದೊಡ್ಡ ಸೇತುವೆಗಳುಂಟು. ಒಂದು ಸ್ಥಳದಲ್ಲಿ ನದಿಯ ಕೆಳಗೆ ಜನರೂ ರಥಗಳೂ ದಾಟುವ ಹಾಗೆ ದೊಡ್ಡ ಸುರಂಗವನ್ನು (Tunnel) ಮಾಡಿದ್ದಾರೆ. ಪಟ್ಟಣವು ೮ ಮೈಲುಗಳ ಉದ್ದವಾಗಿಯೂ ೫ ಮೈಲುಗಳ ಅಗಲವಾಗಿಯೂ ಇದೆ. ಸುತ್ತಲು ಹೆಚ್ಚುಕಡಿಮೆ ೪೦ ಮೈಲುಗಳ ದೂರವಾಗಿದೆ. ಆ ಪಟ್ಟಣದ ವಿಸ್ತಾರವನ್ನು ಮಹಿಮೆಯನ್ನೂ ಅದರಲ್ಲಿ ನಡೆಯುವ ವಿಧವಿಧವಾದ ಚಮತ್ಕಾರವಾದ ಕೆಲಸಗಳನ್ನೂ ಆಶ್ಚರ್ಯವಾದವುಗಳನ್ನೂ ವ್ಯಾಪಾರಗಳನ್ನೂ ಅದರ ವಶಕ್ಕೆ ಕರಿಗಿರುವ ಐಶ್ವರ್ಯವನ್ನೂ ಪುಸ್ತಕದಲ್ಲಿ ವಿವರಿಸುವದಕ್ಕಾಗದು. ಇವುಗಳನ್ನೆಲ್ಲಾ ಸರಿಯಾಗಿ ತಿಳಿಯಬೇಕಾದರೆ ಕಣ್ಣಿನಿಂದ ನೋಡಬೇಕು.

10. Counties and Towns.

೧೦. ಇಂಗ್ಲಾಂಡ್ ದೇಶ ೪೦ ತಾಲೂಕುಗಳಾಗಿ (Counties) ವಿಭಾಗಿಸಲ್ಪಟ್ಟಿದೆ. ಇವುಗಳಲ್ಲಿ ಅನೇಕ ದೊಡ್ಡ ಪಟ್ಟಣಗಳೂ ಊರುಗಳೂ ಗ್ರಾಮಗಳೂ ಅವೆ.

ಮುಖ್ಯವಾದ ಪಟ್ಟಣಗಳು ಯಾವವಂದರೆ, Chief Towns.

ಲಿವೆರ್ಪೂಲ್ (Liverpool) ಬ್ರಿಸ್ಟೋಲ್ (Bristol) ಹಲ್ (Hull) ನ್ಯೂಕಾಸಿಲ್ (Newcastle)	ಈ ಪಟ್ಟಣಗಳು ಸಮುದ್ರದ ದಡದ ಮೇಲಾಗಲಿ, ಸಮುದ್ರದಲ್ಲಿ ಸೇರುವ ನದಿಗಳ ದಡಗಳ ಮೇಲಾಗಲಿ ಅವೆ. ಇವುಗಳಲ್ಲಿ ಹಡಗದವರು ಬಹಳ ವ್ಯಾಪಾರ ನಡಿಸುತ್ತಾರೆ. ಇಂಥಾ ವ್ಯಾಪಾರ ಲಿವೆರ್ಪೂಲ್ (Liverpool) ಪಟ್ಟಣದಲ್ಲಿ ಮುಖ್ಯವಾಗಿ ನಡಿಯುತ್ತದೆ. ನ್ಯೂಕಾಸಿಲ್ (Newcastle) ಪಟ್ಟಣದಲ್ಲಿ ಕೋಲ್ (Coal) ಯೆಂಬುವ ಸುಡುವ ಪದಾರ್ಥದಲ್ಲಿ ಬಹಳ ವ್ಯಾಪಾರವುಂಟು.
ಮಾಂಚೆಸ್ಟರ್ (Manchester)	ಇಲ್ಲಿ ಅರಳೆಯಿಂದ ಮಾಡಲ್ಪಟ್ಟ ವಿಧವಿಧವಾದ ಒಳ್ಳೊಳ್ಳೆ ಬಟ್ಟೆಗಳನ್ನು ಬಹಳವಾಗಿ ನೇಯುವದುಂಟು.
ಲೀಡ್ಸ್ (Leeds)	ಇಲ್ಲಿ ಸಕಲಾತಿ ಬಹಳವಾಗಿ ನೇಯುತ್ತಾರೆ.
ಬರ್ಮಿಂಗ್ಹಾಮ್ (Birmingham) ಶೆಫೀಲ್ಡ್ (Sheffield)	ಇಲ್ಲಿ ಕಬ್ಬಿಣ ಉಕ್ಕು ಮೊದಲಾದ ಲೋಹಗಳಿಂದ ಮಾಡಲ್ಪಟ್ಟ ವಿಧವಿಧವಾದ ಸಾಮಾನುಗಳು ವುಂಟಾಗುತ್ತವೆ.
ಪೋರ್ಟ್ಸ್ಮಥ್ (Portsmouth) ಪ್ಲಿಮಥ್ (Plymouth)	ಈ ಪಟ್ಟಣಗಳು ಸಮುದ್ರದ ದಡದಮೇಲೆ ಅವೆ. ಇವುಗಳ ರೇವುಗಳಲ್ಲಿ ದೊಡ್ಡದಾಗಿರುವ ಅನೇಕ ಯುದ್ಧದ ಹಡಗಗಳುಂಟು.

ಒಕ್ಸ್ಫರ್ಡ್
(Oxford)
ಕೇಂಬ್ರಿಜ್
(Cambridge)
} ಈ ಪಟ್ಣಗಳಲ್ಲಿ ಬಹು ದೊಡ್ಡ ವಿದ್ಯಾಶಾಲೆಗಳುಂಟು.

ಇವುಗಳು ಅಲ್ಲದೆ ಕಾಂಟರ್ಬರಿ (Canterbury) ಯೋರ್ಕ್ (York) ಬಾಥ್ (Bath) ಚೆಲ್ತೆಂಹಾಮ್ (Cheltenham) ಸೌಥಾಂಪ್ಟನ್ (Southampton) ಬ್ರೈಟನ್ (Brighton) ಕಾರ್ಲೈಲ್ (Carlisle) ಬೆರ್ರಿಕ್ (Berwick) ಮೊದಲಾದ ಅನೇಕ ದೊಡ್ಡ ಪಟ್ಣಗಳುಂಟು. ಇವೆಲ್ಲವುಗಳ ಹೆಸರುಗಳನ್ನಾದರೂ ಇಲ್ಲಿ ಹೇಳುವದಕ್ಕಾಗದು.

11. Rail roads. ೧೧. ಕುದುರೆ ರಥಗಳಲ್ಲಿ ಅಲ್ಲದೆ, ಕುದುರೆಗಳು ಇಲ್ಲದೆ ಆವರಿಯ (Steam) ಬಲದಿಂದ ನಡಿಸಲ್ಪಟ್ಟ ರಥಗಳಲ್ಲಿ ಇಂಗ್ಲಾಂಡ್ ದೇಶದವರು ಸಂಚಾರ ಮಾಡುತ್ತಾರೆ. ಈ ರಥಗಳು ಬಹು ವೇಗದಿಂದ ಹೋಗುತ್ತವೆ. ಅವುಗಳಲ್ಲಿ ಒಂದೇ ಘಂಟೆಯಲ್ಲಿ ೬೦ ಮೈಲುಗಳು ಇಲ್ಲವೆ ೫ ಗಾವದ ಅಷ್ಟು ದೂರ ಪ್ರಯಾಣ ಮಾಡುವದಕ್ಕಾಗುತ್ತದೆ.

12. Electric Telegraph. ೧೨. ಮತ್ತು ಎಷ್ಟುದೂರ ಬೇಕಾದರು ಸರಿ, ಅಷ್ಟುದೂರ ಒಂದೇಕ್ಷಣದಲ್ಲಿ ಮಿಂಚು ಬಡಿಯುವಷ್ಟು ತೀವ್ರದಿಂದ ವರ್ತಮಾನ ತಿಳಿಸುವ ಉಪಾಯ ಆ ಜನರಿಗೆ ತಿಳಿಯುತ್ತದೆ.

13. Commerce and Shipping. ೧೩. ಇಂಗ್ಲೀಷ್ ಜನರು ಭೂಲೋಕದಲ್ಲಿರುವ ಎಲ್ಲಾ ದೇಶದವರ ಸಂಗಡ ವ್ಯಾಪಾರ ನಡಿಸುತ್ತಾರೆ. ಘಾಳಿಯಿಂದ ಬಡಿಯಲ್ಪಡುವ ಹಡಗಗಳಲ್ಲದೆ ಆವರಿಯ ಬಲದಿಂದ ಬಡಿಯಲ್ಪಡುವವುಗಳುಂಟು. ಲಂಡನ್ ಪಟ್ಣದ ರೇವಿನಲ್ಲಿ

ಯಾವಾಗಲು ಹೆಚ್ಚುಕಡಿಮೆ ೫೦೦೦ ಹಡಗಗಳು ಇರುವವು. ಇವಲ್ಲದೆ ಇಂಗ್ಲಾಂಡಿನಲ್ಲಿ ಹಡಗಗಳಿಗೋಸ್ಕರ ಇನ್ನು ಅನೇಕ ರೇವುಗಳುಂಟು. ಇವುಗಳಲ್ಲೆಲ್ಲಾ ಯಾವಾಗ್ಯೂ ಹಡಗಗಳು ಬಹಳವುಂಟು.

೧೪. ಇಂಗ್ಲೀಷ್ ಜನರಲ್ಲಿ ಅನೇಕರು ಬೇರೊಬ್ಬರ ಶರೀ 14. Benevolent Institutions.
ರಗಳಿಗೂ ಆತ್ಮಗಳಿಗೂ ಉಪಕಾರ ಮಾಡುವದರಲ್ಲಿ ಬಹಳ ಪ್ರಯಾಸ ಪಡುತ್ತಾರೆ. ಇದಕ್ಕಾಗಿ ಧರ್ಮ ಹಣಗಳನ್ನು ಕೊಟ್ಟು ಧರ್ಮ ಛತ್ರಗಳನ್ನೂ ಆಸಪತ್ರೆಗಳನ್ನೂ (Hospitals) ಮಠಗಳನ್ನೂ ಕಟ್ಟಿಸಿ ಬಡವರಿಗೂ ರೋಗಿಷ್ಟರಿಗೂ ದಿಕ್ಕಿಲ್ಲದವರಿಗೂ ಬಹಳ ಸಹಾಯ ಮಾಡುತ್ತಾರೆ. ಮತ್ತು ದೇವಭಕ್ತರು ತಮ್ಮ ದೇಶದಲ್ಲಿರುವ ದುರ್ಮಾರ್ಗರನ್ನು ಸನ್ಮಾರ್ಗಕ್ಕೆ ತಿರಿಗಿಸುವದಕ್ಕೆ ಮಾತ್ರವಲ್ಲದೆ ವಿಧವಿಧವಾದ ದೂರ ದೇಶಸ್ಥರಿಗೆ ನಿಜವಾದ ದೇವರ ಜ್ಞಾನವನ್ನೂ ಜಗದ್ರಕ್ಷಕನಾದ ಯೇಸು ಕ್ರಿಸ್ತನ ಸುವಾರ್ತೆಯನ್ನೂ ಮೋಕ್ಷಕ್ಕೆ ಹೋಗುವ ಮಾರ್ಗವನ್ನೂ ತಿಳಿಸುವದಕ್ಕೆ ಬಹು ಖರ್ಚು ಮಾಡಿ ಎಲ್ಲೆಲ್ಲಿಯೂ ಈ ಕೆಲಸ ನಡಿಸುವದಕ್ಕಾಗಿ ಸತ್ಯದ ಉಪದೇಶ ಮಾಡುವ ಬೋಧಕರನ್ನು ಕಳುಹಿಸುತ್ತಾರೆ.

—o—

2) *Wales.*

೨) ವೇಲ್ಸ್.

---

೧. ಗ್ರೇಟ್ ಬ್ರಿಟನ್ ದ್ವೀಪದಲ್ಲಿ ನೈರುತಿ (S. W.) 1. Situation

ದಿಕ್ಕಿನಲ್ಲಿರುವ ಭಾಗಕ್ಕೆ ವೇಲ್ಸ್ ಎಂದು ಹೇಳಲ್ಪಡುವದು.

2. Country. ೨. ಅದರಲ್ಲಿ ಅಲ್ಲಲ್ಲಿ ಬೆಟ್ಟಗಳೂ ಗುಟ್ಟಗಳೂ ಬಹಳವುಂಟು. ಇಂಗ್ಲಾಂಡಿನಲ್ಲಿರುವ ಹಾಗೆ ಅದರ ಭೂಮಿ ಚನ್ನಾಗಿ ಹಸನು ಮಾಡಲ್ಪಟ್ಟದೆ. ಹೊಲಗಳು ಯಾವಾಗಲು ಹುಲ್ಲಿನಿಂದ ಹಸುರಾಗಿರುತ್ತವೆ. ಪೈರುಗಳು ಬಹಳ ಚನ್ನಾಗುತ್ತವೆ. ಗಣಿಗಳಲ್ಲಿ ಕೋಲ್ (Coal) ಕಬ್ಬಿಣ ತಾಂಬ್ರಗಳು ಸಿಕ್ಕುತ್ತವೆ.

3. Counties and Towns. ೩. ವೇಲ್ಸ್ ಹನ್ನೆರಡು ತಾಲೂಕುಗಳಾಗಿ ವಿಭಾಗಿಸಲ್ಪಟ್ಟದೆ. ಒಂದೊಂದು ತಾಲೂಕಿನಲ್ಲಿ ದೊಡ್ಡ ಪಟ್ಣ ಊರು ಗ್ರಾಮಗಳು ಬಹಳವುಂಟು.

Chief Towns. ಇವುಗಳಲ್ಲಿ ಮುಖ್ಯವಾದವುಗಳು ಯಾವವಂದರೆ,

ಕರ್ನಾರ್ವನ್ (Carnarvon) ಸ್ವಾನ್ಸಿ (Swansea)	ಇಲ್ಲಿ ಹಡಗದವರು ಬಹಳ ವ್ಯಾಪಾರ ನಡಿಸುತ್ತಾರೆ.
ಮೆರ್ಥರ್ ಟಿಡ್ವಿಲ್ (Merthyr Tydvil)	ಇದರ ಹತ್ತಿರ ಕಬ್ಬಿಣದ ಗಣಿಗಳುಂಟು.
ಮಿಲ್ಫೋರ್ಡ್ ಹೇವೆನ್ (Milford Haven)	ಇಲ್ಲಿ ದೊಡ್ಡಹಡಗಗಳಿಗೆ ಒಳ್ಳೇ ರೇವುವುಂಟು.

ಕರ್ಮಾರ್ಥೆನ್ (Carmarthen) ಹೊಲ್ಲಿಹೆಡ್ (Holy-head.)

೪. ಜನಸಂಖ್ಯೆ ೧೧,೦೦,೦೦೦ ಇಂಗ್ಲೀಷ್ ದೇಶದವ 4. People.
ರೂ ವೇಲ್ಸ್ ದೇಶದವರೂ ಫ್ರೆಂಚೀ ಮೂಲ ಗೋತ್ರದವರಿಂದ ಹುಟ್ಟಲಿಲ್ಲ. ಅವರ ಮೂಲವು ಇವರ ಮೂಲವು ಬೇರೆ. ಆದದರಿಂದ ವೇಲ್ಸಿನವರು ವಾಡಿಕೆಯಾಗಿ ಇಂಗ್ಲೀಷ್ ಭಾಷೆಯನ್ನು ಆಡಿದಾಗ್ಯೂ ತಮ್ಮ ಸ್ವಂತ ಭಾಷೆ ಬೇರೆ. ಹೀಗಿದ್ದಾಗ್ಯೂ ಪದ್ಧತಿ ಚಮತ್ಕಾರ ವಿದ್ಯ ಸದ್ಗುಣಗಳಲ್ಲಿಯೂ ಬೇರೊಬ್ಬರಿಗೆ ಪ್ರಯೋಜನವಾದ ಕೆಲಸಗಳನ್ನು ನಡಿಸುವದರಲ್ಲಿಯೂ ಅವರಿಗೂ ಇಂಗ್ಲಾಂಡಿನವರಿಗೂ ಹೆಚ್ಚುಕಡಿಮೆಯಿಲ್ಲ.

—o—

3) *Scotland.*

3) ಸ್ಕೊತ್ಲಾಂಡ್.

---

೧. ಗ್ರೇಟ್ ಬ್ರಿಟನ್ ದ್ವೀಪದ ಉತ್ತರ ಭಾಗವು ಸ್ಕೊ 1. Situation
ಟ್ಲಾಂಡ್ ಎಂದು ಹೇಳಲ್ಪಡುವದು.

೨. ಸ್ಕೊಟ್ಲಾಂಡ್ ವಾಯುವ್ಯ (N. W.) ದಿಕ್ಕಿನಲ್ಲಿ 2. Country.
ಬೆಟ್ಟಗಳುಳ್ಳ ಸೀಮೆಯಾಗಿದೆ. ಮಿಕ್ಕಾದ ಕಡೆಗಳಲ್ಲಿ ಅಷ್ಟು ಬೆಟ್ಟಗಳು ಇಲ್ಲ. ಮೈದಾನುಗಳೆಲ್ಲಾ ಚನ್ನಾಗಿ ಹಸನು ಮಾಡಲ್ಪಟ್ಟವೆ. ಒಳ್ಳೆ ಪೈರುಗಳಾಗುತ್ತವೆ. ದಕ್ಷಿಣ ಕಡೆಯಲ್ಲಿ ಕೋಲ್ (Coal) ಕಬ್ಬಿಣಗಳು ಸಿಕ್ಕುತ್ತವೆ.

೩. ಸ್ಕೊಟ್ಲಾಂಡಿನ ಸಂಗಡ ಕೆಲವು ಚಿಕ್ಕ ದ್ವೀಪಗ 3. Counties.

ಳು ಶೇರುತ್ತವೆ. ಇವುಗಳು ಕೂಡ 33 ತಾಲೂಕುಗಳಾಗಿ ವಿಭಾಗಿಸಲ್ಪಟ್ಟದೆ.

4. Capital. ೪. ಎಡಿಂಬರ್ರ (Edinburgh) ಅದರ ಸಂಸ್ಥಾನವಾಗಿದೆ. ಇದು ಬಹಳ ದೊಡ್ಡ ಸೌಂದರ್ಯವಾದ ಪಟ್ಣ. ಅದರಲ್ಲಿ ೧,೫೦,೦೦೦ ಜನರಿದ್ದಾರೆ.

5. Chief Towns. ೫. ಇದಲ್ಲದೆ ಇನ್ನು ಅನೇಕ ದೊಡ್ಡ ಪಟ್ಣಗಳು ಆ ಶೀಮೆಯಲ್ಲಿ ಅವೆ. ಮುಖ್ಯವಾದವು ಯಾವವಂದರೆ,

ಗ್ಲಾಸ್ಗೋ (Glasgow), ಪೇಸ್ಲಿ (Paisley), ಪೆರ್ಥ್ (Perth) — ಬಹಳ ವ್ಯಾಪಾರ ನಡೆಯುವ ಪಟ್ಣಗಳು.

ಅಬ್ಬೆರ್ಡೀನ್ (Aberdeen) — ಬಹಳ ವ್ಯಾಪಾರ ನಡಿಯುವ ಪಟ್ಣ. ಮತ್ತು ಇದರಲ್ಲಿ ದೊಡ್ಡ ವಿದ್ಯಸಾಲೆ ವುಂಟು.

ಡಂಡೀ (Dundee), ಲೀಥ್ (Leith), ಗ್ರೀನೊಕ್ (Greenock) — ಇಲ್ಲಿ ಹಡಗದವರು ಬಹಳ ವ್ಯಾಪಾರ ನಡಿಸುತ್ತಾರೆ.

ದಂಫ್ರೀಸ್ (Dumfries) ಫಾಲ್ಕಿರ್ಕ್ (Falkirk) ಸ್ಟಿರ್ಲಿಂಗ್ (Stirling) ಮೊಂಟ್ರೋಸ್ (Montrose) ಇಂವೆರ್ನೆಸ್ (Inverness.)

೬. ಬೆಟ್ಟಗಳು. ಅದರ ಬೆಟ್ಟಗಳಲ್ಲಿ ಬೆನ್ ನೇವಿಸ್ (Ben Nevis) ಉದ್ದವಾದದ್ದು. ಅದು ೪೩೭೦ ಅಡಿಗಳಷ್ಟು ಎತ್ತರವಾಗಿದೆ. 6. Mountains.

೭. ನದಿಗಳು. ಟ್ವೀಡ್ (Tweed) ಫೋರ್ಥ್ (Forth) ಟೇ (Tay) ಡೀ (Dee) ಸ್ಪೇ (Spey) ನೆಸ್ (Ness) ಕ್ಲೈಡ್ (Clyde) ನಿಥ್ (Nith) ಇವು ಮುಖ್ಯ. 7. Rivers

೮. ದ್ವೀಪಗಳು. ಒರ್ಕ್ನೀಸ್ (Orkneys) ಶೆಟ್ಲಾಂಡ್ ದ್ವೀಪಗಳು (Shetland Isles) ಹೆಬ್ರಿಡೀಸ್ (Hebrides) 8. Isles.

೯. ಜನಸಂಖ್ಯೆ, ೨೫,೦೦,೦೦೦. ಜನರು ಬಹಳ ಬುದ್ಧಿವಂತರಾಗಿಯೂ ಸದ್ಗುಣವುಳ್ಳವರಾಗಿಯೂ ಇದ್ದಾರೆ. ಇಂಗ್ಲಾಂಡ್ ದೇಶದವರು ಸ್ಕಾಟ್ಲಾಂಡ್ ದೇಶದವರು ಬೇರೆ ಬೇರೆ ಮೂಲ ಗೋತ್ರದವರಿಂದ ಹುಟ್ಟಿದರು. ಆದದರಿಂದ ಸ್ಕಾಟ್ಲಾಂಡಿನವರ ಮೂಲಭಾಷೆ ಇಂಗ್ಲೀಷ್ ಅಲ್ಲ. ಬೇರೆ ಭಾಷೆಯಾಗಿದೆ. ಆದಾಗ್ಯೂ ಇಂಗ್ಲೀಷ್ ಭಾಷೆಯನ್ನು ವಾಡಿಕೆಯಾಗಿ ಆಡುತ್ತಾರೆ. ಇಂಗ್ಲೀಷ್ ಜನರಿಗೂ ಅವರಿಗೂ ಪದ್ಧತಿ ಚಮತ್ಕಾರ ಮೊದಲಾದವುಗಳಲ್ಲಿ ವ್ಯತ್ಯಾಸವಿಲ್ಲ. ಆದರೆ ಇಂಗ್ಲೀಷ್ ಜನರಲ್ಲಿ ಇರುವದಕ್ಕಿಂತ ವಿದ್ಯವು ಸ್ಕಾಟ್ಲಾಂಡಿನವರಲ್ಲಿ ಬಹು ಪ್ರಬಲವಾಗಿದೆ. 9. People.

೧೦. ಇಂಗ್ಲಾಂಡಿನಲ್ಲಿ ಇರುವ ಪ್ರಕಾರ ಸ್ಕಾಟ್ಲಾಂಡಿನಲ್ಲಿ ಕೂಡ ಆವರಿಯ ಬಲದಿಂದ ನಡಿಸಲ್ಪಡುವ ರಥಗಳೂ ಮಿಂಚಿನ ತೀವ್ರದಿಂದ ವರ್ತಮಾನ ತಿಳಿಸುವ ವುಪಾಯವೂ ಮೊದಲಾದ ಆಶ್ಚರ್ಯಗಳುಂಟು. ಸ್ಕಾಟ್ಲಾಂಡಿನವರು ಬಹು ವ್ಯಾಪಾರಸ್ತರಾಗಿದ್ಧಾರೆ. ಇಂಗ್ಲೀಷ್ ಜನರು ಹ್ಯಾಗೆ ಲೋಕ 10. Remarks.

ದಲ್ಲಿ ಇರುವವರೆಲ್ಲರಿಗೆ ಪ್ರಯೋಜಕರಾಗಿರುವದಕ್ಕೆ ಬಹಳ ಪ್ರಯಾಸ ಪಡುತ್ತಾರೋ ಹಾಗೆಯೇ ಸ್ಕೋತ್ಲಾಂಡಿನವರು ಮಾಡುತ್ತಾರೆ.

—o—

4) *Ireland.*

೪) ಐರ್ಲಾಂಡ್.

1. Situation. ೧. ಗ್ರೇಟ್ ಬ್ರಿಟನ್ ದ್ವೀಪಕ್ಕೆ ಸ್ವಲ್ಪ ದೂರವಾಗಿ ಪಶ್ಚಿಮ ದಿಕ್ಕಿಗೆ ಐರ್ಲಾಂಡ್ ದ್ವೀಪವದೆ.

2. Country. ೨. ಐರ್ಲಾಂಡಿನಲ್ಲಿ ಅಲ್ಲಲ್ಲಿ ಏನು ಬೆಳಸಲಾರದ ಬಹಳ ಕೆಸರಿನ ಭೂಮಿ ಅದೆ. ಕಡಿಮೆ ಸ್ಥಳಗಳಲ್ಲಿ ಪೈರು ಚೆನ್ನಾಗಾಗುವದು. ಆದರೆ ಒಕ್ಕಲಿಗರು ಭೂಮಿಯನ್ನು ಹಸನು ಮಾಡುವದರಲ್ಲಿ ಅಷ್ಟು ಪ್ರಯಾಸ ಪಡುವದಿಲ್ಲ.

3. Divisions ೩. ಐರ್ಲಾಂಡ್ ನಾಲ್ಕು ವಿಭಾಗಗಳಾಗಿಯೂ ೩೨ ತಾಲೂಕುಗಳಾಗಿಯೂ ವಿಭಾಗಿಸಲ್ಪಟ್ಟದೆ.

4. Capital. ೪. ಡಬ್ಲಿನ್ ಪಟ್ಟಣವು (Dublin) ಅದರ ಸಂಸ್ಥಾನವಾಗಿದೆ. ಇದು ಬಹಳ ದೊಡ್ಡ ಪಟ್ಟ. ಅದರಲ್ಲಿ ೨,೭೦,೦೦೦ ಜನಗಳು ಇದ್ದಾರೆ.

5. Chief Towns. ೫. ಮುಖ್ಯ ಪಟ್ಟಗಳು. ವಾಟರ್ಫೋರ್ಡ್ (Waterford) ಕೋರ್ಕ್ (Cork) ಲಿಮ್ಮೆರಿಕ್ (Limerick) ಗಾಲ್ವೇ (Galway) ಸ್ಲೈಗೊ (Sligo) ಲಂಡಂಡೆರ್ರಿ (Londonderry) ಬೆಲ್ಫಾಸ್ಟ್ (Belfast) ಕಿಲ್ಕೆನ್ನಿ (Kilkenny) ಕ್ಲೋಂಮೆಲ್ (Clonmel) ಆರ್ಮಾ (Armagh.)

೬. ಬೆಟ್ಟಗಳು. ಅಲ್ಲಲ್ಲಿ ಬೆಟ್ಟಗಳುಂಟು. ಅಂಥಾ ಸ್ಥಳಗಳಲ್ಲಿ ಸೀಮೆ ಬಹು ರಮ್ಯವಾಗಿದೆ. 6. Mountains.

೭. ನದಿಗಳು. ಶಾನೋನ್ (Shannon) ಲೀ (Lee) ಬ್ಲಾಕ್ವಾಟರ್ (Blackwater) ಸೂರ್ (Suir) ಲಿಫ್ಫಿ (Liffey) ಬೋಯಿನ್ (Boyne) ಬಾರ್ರೊ (Barrow) ಬಾನ್ (Ban) ಡೆರ್ಗ್ (Derg.) 7. Rivers.

೮. ಜನಸಂಖ್ಯೆ. ೮೦,೦೦,೦೦೦. ಜನರು ಯುಕ್ತಿವಂತರಾಗಿಯೂ ಧೈರ್ಯಸ್ಥರಾಗಿಯೂ ಇದ್ದಾರೆ. ಆದರೆ ಅವರಲ್ಲಿ ಅನೇಕರು ಬಹಳ ಬಡವರಾಗಿದ್ದಾರೆ. ಕ್ರೀಸ್ತನ ಮತಸ್ತರಾಗಿದ್ದಾರೆ. ಸ್ವಲ್ಪ ಕಡಿಮೆಯಾಗಿ ವೆಲ್ಲರು ರೋಮಾನ್ ಸಭೆಯವರೇ. 8. People.

ಐರ್ಲಾಂಡಿನವರೂ ಇಂಗ್ಲಾಂಡಿನವರೂ ಬೇರೆ ಮೂಲ ಗೋತ್ರಗಳಿಂದ ಹುಟ್ಟಿದರು. ಆದದರಿಂದ ಐರ್ಲಾಂಡಿನವರಿಗೆ ಇಂಗ್ಲೀಷ್ ಭಾಷೆ ವಾಡಿಕೆಯಾಗಿ ತಿಳಿದಿದ್ದಾಗ್ಯೂ ಅನೇಕರು ತಮ್ಮ ಮೂಲ ಭಾಷೆಯನ್ನು ಇನ್ನು ಆಡುತ್ತಾರೆ.

—o—

5) *Foreign Possessions.*

೫) ಬ್ರಿಟಿಷ್ ರಾಜ್ಯಕ್ಕೆ ಸೇರಿದ ಅನ್ಯ ದೇಶಗಳು.

೧. ಗ್ರೇಟ್ ಬ್ರಿಟನ್ ಐರ್ಲಾಂಡ್ ಅಲ್ಲದೆ, ಭೂಮಿ ಮೇಲೆಲ್ಲಿಯೂ ಚತುರ್ದಿಕ್ಕುಗಳಲ್ಲಿ ಬ್ರಿಟಿಷ್ ರಾಜ್ಯಕ್ಕೆ ಸೇರಿದ ಅನೇಕ ದೇಶಗಳೂ ದ್ವೀಪಗಳೂ ವುಂಟು. ಈ ದೇಶ ದ್ವೀಪಗಳಲ್ಲಿ ಕೆಲವನ್ನು ಇಂಗ್ಲೀಷ್ ಜನರು ಅಲ್ಲಿ ಹೋಗಿ 1. Numerous.

ಬಹಳವಾಗಿ ಒಕ್ಕಲುತನ ಮಾಡಿದ್ದರಿಂದ ತಮ್ಮ ವಶ ಮಾಡಿಕೊಂಡಿದ್ಧಾರೆ. ಕೆಲವನ್ನು ಯುದ್ಧಮಾಡಿ ಜಯಿಸಿದ್ದರಿಂದ ಸಂಪಾದಿಸಿಕೊಂಡಿದ್ಧಾರೆ.

2. Total population of the Empire.

೨. ಅದದರಿಂದ ಬ್ರಿಟಿಷ್ ರಾಜ್ಯ ಬಹಳ ದೊಡ್ಡದಾಗಿದೆ. ಅದರಲ್ಲಿ ಒಟ್ಟಾಗಿ ೧೨,೦೦,೦೦,೦೦೦ ಜನರು ಇದ್ಧಾರೆ.

—o—

2. *France.*

೨. ಫ್ರಾನ್ಸ್

---

1. Boundaries.

೧. ಮೇರೆಗಳು. ಪೂರ್ವದಲ್ಲಿ ಇಟಲಿ (Italy) ಸ್ವಿಜ್ಜಲಾರ್ಂಡ್ (Switzerland) ಜೆರ್ಮನಿ (Germany) ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಮುದ್ರ (Atlantic Ocean) ಉತ್ತರದಲ್ಲಿ ಬೆಲ್ಜಿಯಮ್ (Belgium) ಇಂಗ್ಲಾಂಡ್ ಗೊಂದಿ (English Channel) ದಕ್ಷಿಣದಲ್ಲಿ ಪಿರೆನ್ನೀಸ್ ಘಟ್ಟಗಳು (Pyrennees) ಮೆಡಿಟೆರ್ರೇನಿಯನ್ ಕಡಲು (Mediterranean Sea)

2. Population.

೨. ಜನಸಂಖ್ಯೆ. ೩,೩೦,೦೦,೦೦೦.

3. Divisions

೩. ವಿಭಾಗಗಳು. ಫ್ರಾನ್ಸ್ ದೇಶವು ೮೬ ತಾಲೂಕಗಳಾಗಿ ವಿಭಾಗಿಸಲ್ಪಟ್ಟಿದೆ.

4. Capital.

೪. ಸಂಸ್ಥಾನವು. ಪಾರಿಸ್ (Paris.) ಈ ಪಟ್ಟಣವು ಬಹಳ ದೊಡ್ಡದಾಗಿಯೂ ಸೌಂದರ್ಯವುಳ್ಳದ್ದಾಗಿಯೂ ಇದೆ. ಅದರಲ್ಲಿ ೧೦,೦೦,೦೦೦ ಜನರು ಇದ್ಧಾರೆ.

೫. ಮುಖ್ಯ ಪಟ್ಟಣಗಳು. 5. Chief Towns.

ಲೈಯೋನ್ಸ್ (Lyons.) ಇಲ್ಲಿ ಬಹಳ ರೇಶಿಮೆ ಮಾಡುತ್ತಾರೆ.

ವೆರ್ಸೇಲ್ಸ್ (Versailles.) ಇಲ್ಲಿ ದೊಡ್ಡ ಅರಮನೆ ಅದೆ.

ರೂಯನ್ (Rouen) ಲೈಲ್ (Lisle) ಸ್ಟ್ರಾಸ್ಬರ್ಗ್ (Strasbourg.) ಬಹಳ ವ್ಯಾಪಾರ ನಡಿಯುವ ಪಟ್ಟಣಗಳು.

ಮಾರ್ಸೇಲ್ಸ್ (Marseilles) ರೋಶೆಲ್ (Rochelle) ನಾಂಟ್ಸ್ (Nantes) ಹಾವರ್ (Havre) ಡಿಯೆಪ್ (Dieppe) ಬುಲೋನ್ಗ್ (Boulogne) ಕಾಲಿಸ್ (Calais.) ಹಡಗದವರು ವ್ಯಾಪಾರ ನಡಿಸುವ ಸ್ಥಳಗಳು.

ಬ್ರೆಸ್ತ್ (Brest.) ದೊಡ್ಡ ಯುದ್ಧದ ಹಡಗಗಳು ಇರುವ ಸ್ಥಳ.

ಬೋರ್ಡೋನ್ (Bourdeaux.) ಅಲ್ಲಲ್ಲಿ ಮಾಡಲ್ಪಟ್ಟಿರುವ ದ್ರಾಕ್ಷಿರಸ ಈ ಪಟ್ಟಣದಿಂದ ಹಡಗಗಳಲ್ಲಿ ಬೇರೆಬೇರೆ ದೇಶಗಳಿಗೆ ಸಾಗಿಸಲ್ಪಟ್ಟಿದೆ.

೬. ಬೆಟ್ಟಗಳು. ಅಲ್ಪ್ಸ್ (Alps) ಪಿರೆನ್ನೀಸ್ (Pyrennees.) 6. Mountains.

೭. ನದಿಗಳು. ಸೇನ್ (Seine) ಲೋಯಿರ್ (Loire) ಗರೋನ್ (Garonne) ರೋನ್ (Rhone) ರೈನ್ (Rhine) ಮೊದಲಾದವುಗಳು. 7. Rivers.

೮. ದ್ವೀಪಗಳು. ಮೆಡಿಟೆರ್ರೇನಿಯನ್ ಕಡಲಿನಲ್ಲಿರು 8. Islands.

ವ ಕೊರ್ಸಿಕ (Corsica) ದ್ವೀಪವು ಫ್ರಾಂಸ್ ರಾಜ್ಯಕ್ಕೆ ಶೇರುತ್ತದೆ.

9. Remarks. ೯. ವಿವರ. ಫ್ರಾಂಸ್ ರಾಜ್ಯವು ಬಹಳ ದೊಡ್ಡದಾಗಿದೆ. ದೇಶವು ಒಳ್ಳೇದು. ಜನರು ಬುದ್ಧಿವಂತರಾಗಿಯೂ ಚುರುಕುಳ್ಳವರಾಗಿಯೂ ಮರ್ಯಾದಸ್ತರಾಗಿಯೂ ಇದ್ದಾರೆ. ಸಕಲ ದೇಶಸ್ಥರ ಸಂಗಡ ವ್ಯಾಪಾರ ನಡಿಸುತ್ತಾರೆ. ದ್ರಾಕ್ಷಿ ರಸವನ್ನು ರೇಶಿಮೆಯನ್ನು ಬಹಳವಾಗಿ ಮಾಡುತ್ತಾರೆ. ಆ ದೇಶದಲ್ಲಿ ಕ್ರೀಸ್ತನ ಮತದ ಪ್ರೊಟೆಸ್ತಾಂಟ್ ಸಭೆಯವರು ಅನೇಕರಿದ್ದಾರೆ. ಆದರೆ ರೋಮಾನ್ ಸಭೆಯವರು ಮುಖ್ಯ.

—o—

3. *Spain.*

೩. ಸ್ಪೇನ್.

---

1. Boundaries. ೧. ಮೇರೆಗಳು. ಪೂರ್ವದಲ್ಲಿ ಮೆಡಿಟೆರ್ರೇನಿಯನ್ ಕಡಲು (Mediterranean Sea) ಪಶ್ಚಿಮದಲ್ಲಿ ಪೊರ್ತುಗಲ್ (Portugal) ಅತ್ಲಾಂಟಿಕ್ ಸಮುದ್ರ (Atlantic Ocean) ಉತ್ತರದಲ್ಲಿ ಬಿಸ್ಕೇ ಕೊಲ್ಲಿ (Bay of Biscay) ಪಿರೆನ್ನೀಸ್ ಬೆಟ್ಟಗಳು (Pyrennees.)

2. Population. ೨. ಜನಸಂಖ್ಯೆ. ೧,೩೦,೦೦,೦೦೦.

3. Capital. ೩. ಸಂಸ್ಥಾನವು. ಮಡ್ರಿಡ್ (Madrid.) ಇದು ದೊಡ್ಡ ಪಟ್ಟಣ. ಅದರಲ್ಲಿ ೨,೦೦,೦೦೦ ಜನರು ಇದ್ದಾರೆ.

4. Chief Towns. ೪. ಮುಖ್ಯ ಪಟ್ಟಣಗಳು. ಸಾರಗೊಸ್ಸ (Saragossa)

ಸಾಲಮಾಂಕ್ (Salamanca) ಟೊಲೀದೊ (Toledo) ಗ್ರಾನದ (Granada) ಸಿವೀಲ್ (Seville) ಬಾರ್ಸಿಲೋನ (Barcelona) ವೆಲೆಂಸಿಯ (Valencia) ಕೇಡಿಸ್ (Cadiz) ಕೊರನ್ನ (Corunna.)

೫. ನದಿಗಳು. ದೂರೊ (Douro) ಟೇಗಸ್ (Tagus) ಗ್ವಾದಿಯಾನ (Guadiana) ಗ್ವಾದಲ್ಕ್ವಿವರ್ (Guadalquivir) ಮೊದಲಾದವುಗಳು. 5. Rivers.

೬. ವಿವರ. ಸ್ಪೇನ್ ದೇಶ ಅಲ್ಲಲ್ಲಿ ಬೆಟ್ಟಗಳುಳ್ಳ ಶೀತಮಯವಾಗಿದೆ. ಅದರ ಭೂಮಿ ಫಲ್ಗೇದು. ಆದರೆ ಆರಂಭ ಮಾಡುವದರಲ್ಲಿ ಅದರ ಜನರು ಇನ್ನು ಪ್ರಯಾಸ ಪಟ್ಟರೆ, ಇನ್ನು ಪೈರು ಮೊದಲಾದವುಗಳು ಚನ್ನಾಗಿ ಬೆಳಿಯುವವು. ಅಲ್ಲಿ ದ್ರಾಕ್ಷೀರಸ ಬಹಳ ಮಾಡುತ್ತಾರೆ. ಜನರು ಬುದ್ಧಿವಂತರೇ, ಆದರೆ ಅವರಲ್ಲಿ ಸ್ವಲ್ಪ ಅಹಂಕಾರವೂ ಕ್ರೂರಗುಣವೂ ತೋರುತ್ತದೆ. ಕ್ರೀಸ್ತನ ಮತಕ್ಕೆ ಸೇರಿದ ರೋಮಾನ್ ನತೆಯವರಾಗಿದ್ದಾರೆ. 6. Remarks

———o———

4. *Portugal,*
೪. ಪೊರ್ತುಗಲ್.

೧. ಮೇರೆಗಳು. ಪೂರ್ವ ಉತ್ತರಗಳಲ್ಲಿ ಸ್ಪೇನ್ (Spain) ಪಶ್ಚಿಮ ದಕ್ಷಿಣಗಳಲ್ಲಿ ಅಟ್ಲಾಂಟಿಕ್ ಸಮುದ್ರ (Atlantic Ocean.) 1. Boundaries.

2. Population. ೨. ಜನಸಂಖ್ಯೆ. ೩೫,೫೦,೦೦೦.

3. Capital. ೩. ಸಂಸ್ಥಾನ. ಲಿಸ್ಬೋನ್ (Lisbon.)

4. Chief Town. ೪. ಮುಖ್ಯ ಪಟ್ಟಣ. ಒಪೋರ್ಟೋ (Oporto.) ಇಲ್ಲಿಂದ ದ್ರಾಕ್ಷೀ ರಸವನ್ನು ಬಹಳವಾಗಿ ಬೇರೆ ಸೀಮೆಗಳಿಗೆ ಹಡಗಗಳಲ್ಲಿ ಸಾಗಿಸುವರು.

5. Remarks ೫. ವಿವರ. ಈ ದೇಶದಲ್ಲಿ ಬಹಳ ದ್ರಾಕ್ಷೀರಸ ಮಾಡುತ್ತಾರೆ. ಜನರು ಬುದ್ಧಿವಂತರಾಗಿದ್ದರೂ ದೊರೆತನ ಮಾಡುವವರು ಅವರನ್ನು ಚನ್ನಾಗಿ ಆಳದೆ ಇರುವದರಿಂದ ಅವರು ಬಹಳ ಅಭಿವೃದ್ಧಿ ಹೊಂದುವದಿಲ್ಲ. ರೋಮಾನ್ ಸಭೆಯವರಾಗಿದ್ದಾರೆ. ಅವರಲ್ಲಿ ಅನೇಕರು ಬುದ್ಧಿವಂತರಾಗಿಯೂ ಜಾಗ್ರತಸ್ಥರಾಗಿಯೂ ಇದ್ದಾರೆ, ಆದರೆ ಅನೇಕರು ಸ್ವಲ್ಪ ಸೋಮಾರಿತನ ತೋರಿಸುತ್ತಾರೆ.

---

5. *Italy.*

೫. ಇಟಲಿ.

---

1. Boundaries. ೧. ಮೇರೆಗಳು. ಪೂರ್ವದಲ್ಲಿ; ಆಡ್ರಿಯಾಟಿಕ್ ಕಡಲು (Adriatic Sea) ಪಶ್ಚಿಮದಲ್ಲಿ; ಫ್ರಾಂಸ್, (France) ಮೆಡಿಟೆರ್ರೇನಿಯನ್ ಕಡಲು (Mediterranean Sea) ಉತ್ತರದಲ್ಲಿ; ಅಲ್ಪ್ಸ್ (Alps) ಬೆಟ್ಟಗಳು.

2. Population. ೨. ಜನಸಂಖ್ಯೆ. ೨,೨೭,೨೬,೦೦೦.

3. Chief Divisions and Towns. ೩. ಇಟಲಿ ದೇಶವೆಲ್ಲಾ ೧೨ ಚಿಕ್ಕ ರಾಜ್ಯಗಳಾಗಿ

ವಿಭಾಗಿಸಲ್ಪಟ್ಟದೆ. ಇವುಗಳಲ್ಲಿ ೫ ರಾಜ್ಯಗಳು ಮಿಕ್ಕಾದವುಗಳಿಗಿಂತ ದೊಡ್ಡವು. ಯಾವವೆಂದರೆ,

ರಾಜ್ಯಗಳು.	ಮುಖ್ಯ ಪಟ್ಟಣಗಳು.
೧) ಸಾರ್ಡಿನಿಯ (Sardinia)	ಟ್ಯೂರಿನ್ (Turin) ಜೆನೋವ (Genoa)
೨) ವೆನ್ನಿಸ್ (Venice)	ಮಿಲಾನ್ (Milan) ವೆನ್ನಿಸ್ (Venice)
೩) ಟಸ್ಕನಿ (Tuscany)	ಫ್ಲೋರೆನ್ಸ್ (Florence) ಲೆಗ್ಹೋರ್ನ್ (Leghorn)
೪) ಸಿಸಿಲಿ (Sicily)	ನೇಪಿಲ್ಸ್ (Naples) ಪಲೆರ್ಮೋನ್ (Palermo)
೫) ಸಭೆಯ ರಾಜ್ಯ (States of the Church)	ಈ ರಾಜ್ಯವನ್ನು ಕ್ರೀಸ್ತನ ಮತಕ್ಕೆ ಸೇರಿದ ರೋಮಾನ್ ಸಭೆಗೆ ಮಹಾಗುರುವಾದ ಪಾಪು (Pope) ಯೆಂಬವನು ಆಳುತ್ತಾನೆ. ಇದರ ಸಂಸ್ಥಾನವು ರೋಮ (Rome) ಪಟ್ಟಣವು.

ಪೂರ್ವದಲ್ಲಿ ರೋಮ್ ಪಟ್ಟಣ ಸರ್ವ ಸೀಮೆಗಳಲ್ಲಿ ದೊ ರೆತನ ಮಾಡಿದ ರೋಮಾಯರ (Romans) ಸಂಸ್ಥಾನವಾಗಿತ್ತು. ಆವಾಗ ಈಗಿರುವದಕ್ಕಿಂತ ಮಹಿಮೆಯುಳ್ಳ ಪಟ್ಟಣವಾಗಿತ್ತು. ಆಗ ಕಟ್ಟಲ್ಪಟ್ಟಿದ್ದವುಗಳಲ್ಲಿ ಕೆಲವು ಈವರಿಗೂ ನಿಂತವೆ. ಈಗಲು ರೋಮ ದೊಡ್ಡದಾಗಿದೆ. ಅದರಲ್ಲಿ ೧,೫೪,೦೦೦ ಜನವಿದ್ದಾರೆ. ರೋಮಾನ್ ಸಭೆಗೆ ಮಹಾಗುರುವಾದ ಪಾಪು (Pope) ಅಲ್ಲಿ ಬಹಳ ಮಹಿಮೆಯಾಗಿ ವಾಸ

Ancient Rome.

Modern Rome.

Pope. ಮಾಡುತ್ತಾ ಇದ್ದಾನೆ. ರೋಮಾನ್ ಸಭೆಯವರು ಆತನನ್ನು ಚಿಕ್ಕ ಸ್ವಾಮಿಯಾಗಿ ಎಣಿಸಿ ವಂದಿಸುತ್ತಾರೆ. ಅವರು ಹೀಗೆ ಮಾಡುವದು ಸರಿಯಿಲ್ಲ. ಯೇಸು ಕ್ರಿಸ್ತನು ತನ್ನ ಸಭೆಯಲ್ಲಿರುವ ಯಾವ ಮನುಷ್ಯನಿಗಾದರು ಅಂಥಾ ಅಧಿಕಾರ ಕೊಡಲಿಲ್ಲ. ರೋಮ್ ಪಟ್ಟಣದಲ್ಲಿ ರೋಮಾನ್ ಸಭೆಗೆ ಸೇರಿದ

St. Peter's. ಸಂತ್ ಪೇತ್ರನ (St. Peter's) ಎಂಬುವ ದೊಡ್ಡ ದೇವಾಲಯವುಂಟು. ಅದು ಬಹಳ ಮಹಿಮೆಯುಳ್ಳದ್ದು. ಅದರಲ್ಲಿ ಅಪೊಸ್ತಲನಾದ ಪೇತ್ರನ ಸಮಾಧಿ ವುಂಟೆಂದು ಹೇಳುತ್ತಾರೆ. ಆದರೆ ಇದು ನಿಜವಿಲ್ಲ. ರೊಮಾನ್ ಸಭೆಯವರು ಅಲ್ಲಿ ಬಹಳವಾಗಿ ಹೋಗಿ ಆರಾಧನೆ ಮಾಡುತ್ತಾರೆ. ಇದು ಪುಣ್ಯವೆಂದು ನೆನಸುತ್ತಾರೆ. ಆದರೆ ಇದು ವ್ಯರ್ಥವಾದ ಮಾತು. ಎಲ್ಲಿ ದೇವರನ್ನು ಆರಾಧಿಸಿದರೂ ಒಪ್ಪೈದೇ.

4. Mountains. ೪. ಬೆಟ್ಟಗಳು. ಅಲ್ಪ್ಸ್ (Alps) ಅಪ್ಪೆನ್ಯೆಂಸ್ (Appenines.)

5. Volcanoes. ೫. ಅಗ್ನಿ ಪರ್ವತಗಳು. ವಿಸೂವಿಯಸ್ (Vesuvius) ಎತ್ನ (Etna.)

೧ನೇ ನೂರಿನ ವರುಷಗಳಲ್ಲಿ ವಿಸೂವಿಯಸ್ ಅಗ್ನಿ ಪರ್ವತದಿಂದ ಹೊರಟ ಬೂದಿ ಕೆಂಡ ಮೊದಲಾದವುಗಳಿಂದ

Herculaneum and Pompeii. ಹರ್ಕುಲೇನಿಯಮ್ (Herculaneum) ಪೊಂಪೇಯಿ (Pompeii) ಎಂಬ ಎರಡು ಪಟ್ಟಣಗಳು ಮುಚ್ಚಲ್ಪಟ್ಟವು. ಈ ಪಟ್ಟಣಗಳು ಇರುವ ಸ್ಥಳ ಬಹಳ ಕಾಲದವರಿಗೂ ತಿಳಿಯದೆ ಇತ್ತು. ಈಗಿನ ಕಾಲಕ್ಕೆ ಕೆಲವು ವರುಷಗಳಿಗೆ ಮುಂಚೆ ಆ ಸ್ಥಳ ಸಿಕ್ಕಿದದರಿಂದ ಜನರು ಈಗ ಅಲ್ಲಿ ಅಗೆದು ಆ ಪಟ್ಟಣಗಳ

ಬೀದಿಗಳನ್ನೂ ಮನೆಗಳನ್ನೂ ಸಾಮಾನುಗಳನ್ನೂ ಕಂಡು ಕೊಂಡಿದ್ದಾರೆ.

೬. ನದಿಗಳು. ಪೋ (Po) ಟೈಬೆರ್ (Tiber) ಅಡಿಜಿ (Adige.) 6. Rivers.

೭. ದ್ವೀಪಗಳು. ಮುಖ್ಯವಾದವು ಯಾವವಂದರೆ, ಮಾಲ್ತ (Malta) ಇದು ಬ್ರಿಟಿಷ್ ರಾಜ್ಯಕ್ಕೆ ಸೇರುತ್ತದೆ. ಕೊರ್ಸಿಕ (Corsica) ಇದು ಫ್ರಾಂಸ್ ರಾಜ್ಯಕ್ಕೆ ಸೇರುತ್ತದೆ. ಸಾರ್ದಿನಿಯ (Sardinia) ಇದು ಸಾರ್ದಿನಿಯ ರಾಜ್ಯಕ್ಕೆ ಸೇರುತ್ತದೆ. ಸಿಸಿಲಿ (Sicily) ಇದು ಸಿಸಿಲಿ ರಾಜ್ಯಕ್ಕೆ ಸೇರುತ್ತದೆ. ಎಲ್ಬ (Elba) ಇದು ಟಸ್ಕನಿ ರಾಜ್ಯಕ್ಕೆ ಸೇರುತ್ತದೆ. 7. Islands.

೮. ವಿವರ. ಇಟಲಿ ದೇಶವು ಬಹಳ ಒಳ್ಳೇದು, ಆರೋಗ್ಯವಾದದ್ದು. ಅಲ್ಲಿ ಬಹಳ ಒಳ್ಳೇ ಹಣ್ಣು ಮೊದಲಾದ ಫಲಗಳು ಆಗುತ್ತವೆ. ಅದರಲ್ಲಿ ದೊಡ್ಡ ಸೌಂದರ್ಯವಾದ ಪಟ್ಟಣಗಳು ವುಂಟು. ಜನರು ಹಾಡುವದರಲ್ಲಿಯೂ ಗೀತ ವಾದ್ಯಗಳನ್ನು ಬಾರಿಸುವದರಲ್ಲಿಯೂ ಬಣ್ಣದಿಂದ ವಿಚಿತ್ರವಾದ ಪಟಗಳನ್ನು ಬರೆಯುವದರಲ್ಲಿಯೂ ಕಲ್ಲು ಮೊದಲಾದವುಗಳಿಂದ ಚನ್ನಾಗಿ ಕಟ್ಟುವದರಲ್ಲಿಯೂ ವಿಚಿತ್ರವಾದ ರೂಪಗಳನ್ನು ಮಾಡುವದರಲ್ಲಿಯೂ ಘಟ್ಟಿಗರಾಗಿದ್ದಾರೆ. ಆದೇಶದಲ್ಲಿ ದೊಡ್ಡ ವಿದ್ಯಾಶಾಲೆಗಳುಂಟು. ಇವುಗಳಲ್ಲಿ ಸ್ಥಿತಿವಂತರು ಕಲಿಯುವರು. ಆದರೆ ಕಡಿಮೆ ಜನರಲ್ಲಿ ವಿದ್ಯವು ಪ್ರಬಲವಿಲ್ಲ. 8. Remarks

6. *Switzerland.*

೬. ಸ್ವಿತ್ಸೆರ್ಲಾಂಡ್.

---

1. Boundaries. ೧. ಮೇರೆಗಳು. ಪೂರ್ವದಲ್ಲಿ; ಆಸ್ಟ್ರಿಯ (Austria,) ಪಶ್ಚಿಮದಲ್ಲಿ; ಫ್ರಾಂಸ್ (France,) ಉತ್ತರದಲ್ಲಿ; ಜೆರ್ಮನಿ (Germany,) ದಕ್ಷಿಣದಲ್ಲಿ; ಇಟಲಿ (Italy.)

2. Population. ೨. ಜನಸಂಖ್ಯೆ. ೨೧,೮೮,೦೦೦.

3. Divisions ೩. ವಿಭಾಗಗಳು. ಸ್ವಿಟ್ಸೆರ್ಲಾಂಡ್ ದೇಶವು, ೨೨ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ವೊಂದೊಂದು ವಿಭಾಗದ ಜನರು ತಾವು ನೇಮಿಸುವ ಅಧಿಕಾರಸ್ಥರಿಂದ ಆಳಲ್ಪಡುತ್ತಾರೆ. ದೇಶವನ್ನೆಲ್ಲಾ ಆಳುವ ವೊಬ್ಬನೇ ದೊಡ್ಡ ದೊರೆ ಯಿಲ್ಲ. ವೊಂದೊಂದು ವಿಭಾಗದಲ್ಲಿ ದೊರೆತನವು ಬೇರೆ ಬೇರೆಯಾಗಿ ನಡಿದಿದ್ದಾಗ್ಯೂ ಶತ್ರುಗಳ ಸಂಗಡ ಯುದ್ಧ ಹುಟ್ಟಿದರೆ, ಇಲ್ಲವೇ ಬೇರೆ ಯಾವ ನಿಮಿತ್ಯವಾದರು ವುಂಟಾದರೆ, ಯೆಲ್ಲಾ ವಿಭಾಗಗಳವರು ವೊಬ್ಬರಿಗೊಬ್ಬರು ಸಹಾಯ ಮಾಡುವದಕ್ಕೆ ವೊಡಂಬಡಿಕೆ ವುಂಟು.

4. Chief Towns. ೪. ಮುಖ್ಯ ಪಟ್ಟಣಗಳು. ಸ್ವಿಟ್ಸೆರ್ಲಾಂಡಿನಲ್ಲಿ ಅನೇಕ ವೂರುಗಳುಂಟು. ಆದರೆ ದೊಡ್ಡ ಪಟ್ಟಣಗಳು ಬಹಳ ಇಲ್ಲ. ಮುಖ್ಯ ಪಟ್ಟಣಗಳು ಯಾವವಂದರೆ, ಬರ್ನ್ (Berne) ಜೂರಿಕ್ (Zurich) ಲೂಸರ್ನ್ (Lucerne) ಬಾಸಿಲ್ (Basle) ಜೆನೀವ (Geneva.)

5. Mountains. ೫. ಬೆಟ್ಟಗಳು. ಅಲ್ಪ್ಸ್ (Alps.) ಈ ಬೆಟ್ಟಗಳು ದೇ

ಶದ ಪೂರ್ವ ದಕ್ಷಿಣಗಳ ಮೇರೆಗಳಲ್ಲಿಯೂ ದೇಶದ ಮಧ್ಯದಲ್ಲಿಯೂ ಅವೆ. ಬಹಳ ಉದ್ದವಾಗಿವೆ. ಕೆಲವಕ್ಕೆ ೧೫,೦೦೦ ಅಡಿಗಳಷ್ಟು ಎತ್ತರವುಂಟು. ಕೊನೆಗಳಲ್ಲಿ ಯಾವಾಗಲು ಹಿಮವದೆ. ಮೇಲೆ ಕೂಡಿಕೊಂಡಿರುವ ಹಿಮವು ಆಗಾಗ್ಯೆ ದೊಡ್ಡ ತುಂಡುಗಳಾಗಿ ಬಿದ್ದು ಕೆಳಗಿರುವ ಊರುಗಳಿಗೆ ಬಹಳ ನಷ್ಟಮಾಡುತ್ತದೆ.

೬. ನದಿಗಳು. ರೈನ್ (Rhine) ರೋನ್ (Rhone) ಆರ್ (Aar) ಇತ್ಯಾದಿ. 6. Rivers.

೭. ಸ್ವಿಟ್ಸರ್ಲಾಂಡಿನಲ್ಲಿ ಅನೇಕ ದೊಡ್ಡ ಕೆರೆಗಳುಂಟು. ಇವುಗಳ ಸುತ್ತಲಿರುವ ಸೀಮೆ ಬಹು ರಮ್ಯವಾಗಿದೆ. ಈ ಕೆರೆಗಳಲ್ಲಿ ಜೆನೀವ (Geneva) ಪಟ್ಟಣದ ಹತ್ತಿರವಿರುವಂಥಾದ್ದು ಮುಖ್ಯ. 7. Lakes.

೮. ವಿವರ. ಸ್ವಿಟ್ಸರ್ಲಾಂಡ್ ಜನರು ಸುಗುಣವೂ ಜಾಗ್ರತೆಯೂ ನಂಬಿಕೆಯೂ ಉಳ್ಳವರಾಗಿದ್ದಾರೆ. ಕೆಲವರು ಪ್ರೊಟೆಸ್ಟಾಂಟ್ ಸಭೆಗೂ ಕೆಲವರು ರೋಮಾನ್ ಸಭೆಗೂ ಸೇರುತ್ತಾರೆ. ಆದರೆ ಪ್ರೊಟೆಸ್ಟಾಂಟ್ ಸಭೆಗೆ ಸೇರಿದವರು ಹೆಚ್ಚು. ವಿಧವಿಧವಾದ ಬಟ್ಟೆಗಳನ್ನು ನೇಯುತ್ತಾರೆ. ಮತ್ತು ಘಡಿಯಾರಗಳನ್ನು ಬಹಳವಾಗಿ ಮಾಡಿ ಅವುಗಳಲ್ಲಿ ವ್ಯಾಪಾರ ನಡಿಸುತ್ತಾರೆ. 8. Remarks

—o—

7. *Belgium.*

೭. ಬೆಲ್ಜಿಯಮ್.

1. Boundaries. ೧. ಮೇರೆಗಳು. ಪೂರ್ವದಲ್ಲಿ; ಪ್ರಶ್ಯ (Prussia,) ಪಶ್ಚಿಮದಲ್ಲಿ; ಸಮುದ್ರವು (Ocean,) ಉತ್ತರದಲ್ಲಿ ಹೊಲ್ಲಾಂಡ್ (Holland,) ದಕ್ಷಿಣದಲ್ಲಿ; ಫ್ರಾಂಸ್ (France.)

2 Population. ೨. ಜನಸಂಖ್ಯೆ. ೪೦,೯೨,೦೦೦.

3. Capital. ೩. ಸಂಸ್ಥಾನವು. ಬ್ರಸ್ಸೆಲ್ಸ್ (Brussels.) ಇದು ದೊಡ್ಡ ಸೌಂದರ್ಯವಾದ ಪಟ್ಟಣ. ಅದರಲ್ಲಿ ೧,೦೬,೦೦೦ ಜನವಿದ್ದಾರೆ.

4. Chief Towns. ೪. ಮುಖ್ಯ ಪಟ್ಟಣಗಳು. ಅಂತ್ವರ್ಪ್ (Antwerp) ಜೆಂಟ್ (Ghent) ಓಸ್ತೆಂಡ್ (Ostend) ಮಲೀಂಸ್ (Malines) ಲೀಜ್ (Liege.)

5. Rivers. ೫. ನದಿಗಳು. ಸ್ಕೆಲ್ಡ್ (Scheldt) ಮೀಸ್ (Maese) ಇತ್ಯಾದಿ.

6. Remarks ೬. ವಿವರ. ಬೆಲ್ಜಿಯಮ್ ಸೀಮೆಯ ಭೂಮಿಯು ಸ್ವೈರು ಬೆಳಿಸುವದಕ್ಕೆ ಬಹಳ ಪ್ರೊಶ್ಯೇದು. ಅಲ್ಲಿ ವಿಧವಿಧವಾದ ಧಾನ್ಯಗಳೂ ಹಣ್ಣುಗಳೂ ಚನ್ನಾಗಿ ಆಗುತ್ತವೆ. ಅದರಲ್ಲಿ ಬೆಟ್ಟಗಳು ಇಲ್ಲ. ಅಲ್ಲಲ್ಲಿ ದಿನ್ನೆಗಳೂ ತಗ್ಗುಗಳೂ ವುಂಟು. ಆದರೆ ದೇಶಕ್ಕೆಲ್ಲಾ ಬೈಲ್ದೇಶವೆಂದು ಹೇಳಬಹುದು. ಜನರು ಸಕಲಾತಿ ಜಂಬುಖಾನೆ ಮೋಹದ ಸಾಮಾನುಗಳನ್ನು ಬೇರೆ ಕೈಕೆಲಸಗಳನ್ನು ಮಾಡುವದರಲ್ಲಿ ಚಮತ್ಕಾರಿಗಳಾಗಿದ್ದಾರೆ.

8. *Holland.*

೮. ಹೊಲ್ಲಾಂಡ್.

೧. ಮೇರೆಗಳು. ಪೂರ್ವದಲ್ಲಿ; ಪ್ರಶ್ಯ (Prussia) ಹಾನೊವೆರ್ (Hanover,) ಪಶ್ಚಿಮ ಉತ್ತರಗಳಲ್ಲಿ; ಸಮುದ್ರ (Ocean) ದಕ್ಷಿಣದಲ್ಲಿ; ಬೆಲ್ಜಿಯಮ್ (Belgium.) — 1. Boundaries.

೨. ಜನಸಂಖ್ಯೆ. ೩೦,೦೦,೦೦೦. — 2. Population.

೩. ಸಂಸ್ಥಾನ. ಅಂಸ್ಟೆರ್ಡಾಮ್ (Amsterdam.) ಇದು ದೊಡ್ಡ ಪಟ್ಟಣವು. ಬಹಳ ವ್ಯಾಪಾರ ನಡಿಯುವ ಸ್ಥಳ. ಅದರಲ್ಲಿ ೨,೨೦,೦೦೦ ಜನವಿದ್ದಾರೆ. — 3. Capital

೪. ಮುಖ್ಯ ಪಟ್ಟಣಗಳು. ಹೇಗ್ (Hague) ರೊಟ್ಟೆರ್ಡಾಮ್ (Rotterdam) ಲೇಡೆನ್ (Leyden) ಯೂಟ್ರೆಕ್ (Utrecht) ಡೆಲ್ಫ್ (Delft) ಡೋರ್ಟ್ (Dort.) — 4. Chief Towns.

೫. ನದಿಗಳು. ರೈನ್ (Rhine) ಮೇಸ್ (Maese) ಇತ್ಯಾದಿ. — 5. Rivers.

೬. ವಿವರ. ಹೊಲ್ಲಾಂಡ್ ಸೀಮೆ ಬೈಲ್ದೇಶವಾಗಿದೆ. ಅದರ ಭೂಮಿಯು ಸಮುದ್ರದ ಮಟ್ಟಕ್ಕೆ ಕಡಿಮೆಯಾಗಿರುವದರಿಂದ ಸಮುದ್ರದ ನೀರು ದೇಶದಮೇಲೆ ಬಂದು ಎಲ್ಲಾ ಮುಣಿಗಿಸುವದಕ್ಕೆ ಮೋಸವದೆ; ಹೀಗಾಗದಹಾಗೆ ಜನರು ಸಮುದ್ರದ ಧಡದ ಹತ್ತಿರ ದೊಡ್ಡ ಬಲವಾದ ಕಟ್ಟೆಗಳನ್ನು ಮಾಡಿದ್ದಾರೆ. ಹೊಲ್ಲಾಂಡ್ ದೇಶದ ಭೂಮಿ ಬಹು ಕ್ಷಾವ್ಯವಾದದ್ದು. ದನಗಳಿಗೆ ಒಳ್ಳೇ ಮೇವು ಉಂಟು. ಜನ — 6. Remarks

ರು ಬಹಳ ವ್ಯಾಪಾರ ನಡಿಸುವವರು. ಪ್ರೊಟೆಸ್ಟಾಂಟ್ ಸಭೆಯವರಾಗಿದ್ದಾರೆ.

---

9. *Austria.*

೯. ಆಸ್ಟ್ರಿಯ.

---

1. Boundaries. ೧. ಮೇರೆಗಳು. ಪೂರ್ವದಲ್ಲಿ; ರಸ್ಸಿಯ (Russia) ತುರುಕಿ (Turkey) ಪಶ್ಚಿಮದಲ್ಲಿ; ಜೆರ್ಮನಿ (Germany) ಸ್ವಿಟ್ಸರ್ಲಾಂಡ್ (Switzerland) ಉತ್ತರದಲ್ಲಿ; ಪ್ರಶ್ಯ (Prussia) ಪೋಲಾಂಡ್ (Poland) ದಕ್ಷಿಣದಲ್ಲಿ; ತುರುಕಿ (Turkey) ಇಟಲಿ (Italy.)

2. Population. ೨. ಜನಸಂಖ್ಯೆ ೩,೬೫,೨೦,೦೦೦.

3. Chief Divisions. ೩. ಆಸ್ಟ್ರಿಯ ರಾಜ್ಯವು ೧೧ ವಿಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಇವುಗಳಲ್ಲಿ ಹಂಗರಿ (Hungary) ಬೊಹೇಮಿಯ (Bohemia) ಟಿರೊಲ್ (Tyrol) ಮುಖ್ಯ.

4. Capital. ೪. ಸಂಸ್ಥಾನ. ವಿಯೆನ್ನ (Vienna.) ದೊಡ್ಡ ಸೌಂದರ್ಯವಾದ ಪಟ್ಣ. ಜನಸಂಖ್ಯೆ ೩,೩೦,೦೦೦.

5. Chief Towns. ೫. ಮುಖ್ಯ ಪಟ್ಣಗಳು, ಪ್ರೇಗ್ (Prague) ಟ್ರೀಯೆಸ್ಟ್ (Trieste) ಬ್ಯೂಡ (Buda.)

6. Mountains. ೬. ಬೆಟ್ಟಗಳು. ಕಾರ್ಪೇಥಿಯನ್ ಬೆಟ್ಟಗಳು (Carpathian Mountains) ಆಲಪ್ಸ್ (Alps.)

೭. ನದಿಗಳು. ಡಾನ್ಯೂಬ್ (Danube) ಡ್ರೇವ್ (Drave) ಥೈಸ್ (Theiss) ಇತ್ಯಾದಿ. 7. Rivers.

೮. ವಿವರ. ಆಸ್ಟ್ರಿಯ ರಾಜ್ಯವು ದೊಡ್ಡದಾಗಿದೆ. ಭೂಮಿ ಒಳ್ಳೇದು. ಜನರು ಬೇರೆ ದೇಶಸ್ಥರ ಸಂಗಡ ಬಹಳ ವಾಗಿ ವ್ಯಾಪಾರ ನಡಿಸುವದಿಲ್ಲ. ಅವರು ಬುದ್ಧಿವಂತರೇ. ಆದರೆ ಸ್ವಲ್ಪ ಅಹಂಕಾರ ತೋರಿಸುತ್ತಾರೆ. ಅವರಲ್ಲಿ ವಿದ್ಯವು ಬಹಳ ಪ್ರಬಲವಿಲ್ಲ. ರೋಮಾನ್ ಸಭೆಗೆ ಸೇರಿದವರಾಗಿದ್ದಾರೆ. 8. Remarks

—o—

10. *Prussia.*

೧೦. ಪ್ರಶ್ಯ.

೧. ಮೇರೆಗಳು. ಪೂರ್ವದಲ್ಲಿ; ರಸ್ಸಿಯ (Russia) ಪೋಲಂಡ್ (Poland) ಪಶ್ಚಿಮದಲ್ಲಿ; ಫ್ರಾನ್ಸ್ (France) ಬೆಲ್ಜಿಯಮ್ (Belgium) ಹೊಲ್ಲಾಂಡ್ (Holland) ಉತ್ತರದಲ್ಲಿ; ಜೆರ್ಮನಿ (Germany) ಬಾಲ್ಟಿಕ್ ಕಡಲು (Baltic Sea) ದಕ್ಷಿಣದಲ್ಲಿ; ಆಸ್ಟ್ರಿಯ (Austria) ಜೆರ್ಮನಿ (Germany) 1. Boundaries.

೨. ಜನಸಂಖ್ಯೆ. ೧,೮೯,೦೭,೦೦೦. 2. Population.

3. ಸಂಸ್ಥಾನ. ಬೆರ್ಲಿನ್ (Berlin.) ದೊಡ್ಡ ಸುಂದರವಾದ ಪಟ್ಟಣ. ಜನಸಂಖ್ಯೆ ೨,೫೦,೦೦೦. 3. Capital.

4. Chief Towns. ೪. ಮುಖ್ಯ ಪಟ್ಟಣಗಳು. ಡಾಂಜಿಗ್ (Dantzic) ಬ್ರೆಸ್ಲಾ (Breslau) ಕೊನಿಗ್ಸ್‌ಬರ್ಗ್ (Konigsberg) ಮಾಗಿಬರ್ಗ್ (Magdeburg) ಕೊಲೋನ್ (Cologne.)

5. Rivers. ೫. ನದಿಗಳು. ರೈನ್ (Rhine) ವಿಸ್ತುಲ (Vistula) ಎಲ್ಬ (Elbe) ಓಡರ್ (Oder) ಇತ್ಯಾದಿ.

6. Remarks ೬. ವಿವರ. ಪ್ರಶ್ಯ ದೇಶದಲ್ಲಿ ವಿದ್ಯವು ಬಹಳ ಪ್ರಬಲವಾಗಿದೆ. ಜನರು ಪ್ರೊಟೆಸ್ಟಾಂಟ್ ಸಭೆಯವರಾಗಿದ್ದಾರೆ.

—o—

11. *Germany.*

೧೧. ಜೆರ್ಮನಿ.

1. Boundaries. ೧. ಮೇರೆಗಳು. ಪೂರ್ವದಲ್ಲಿ; ಪ್ರಶ್ಯ (Prussia) ಆಸ್ಟ್ರಿಯ (Austria) ಪಶ್ಚಿಮದಲ್ಲಿ; ಪ್ರಶ್ಯ (Prussia) ಫ್ರಾಂಸ್ (France) ಉತ್ತರದಲ್ಲಿ; ಡಿನ್ಮಾರ್ಕ್ (Denmark) ಬಾಲ್ಟಿಕ್ ಕಡಲು (Baltic Sea) ದಕ್ಷಿಣದಲ್ಲಿ; ಸ್ವಿಟ್ಸರ್ಲಾಂಡ್ (Switzerland) ಇಟಲಿ (Italy.)

2. Population. ೨. ಜನಸಂಖ್ಯೆ. ೩,೪೦,೦೦,೦೦೦.

3. Divisions ೩. ವಿಭಾಗಗಳು. ಜೆರ್ಮನಿ ರಾಜ್ಯವು ೩೮ ವಿಭಾಗಗಳಾಗಿ ವಿಂಗಡಿಸಲ್ಪಟ್ಟದೆ. ಇವುಗಳಲ್ಲಿ ಹಾನೊವೆರ್ (Hanover) ಸಾಕ್ಸೊನಿ (Saxony) ವರ್ಟೆಂಬರ್ಗ್ (Wurtemberg) ಬವೇರಿಯ (Bavaria) ಮುಖ್ಯ. ಈ ವಿಭಾಗಗಳೆಲ್ಲಾ ಚಿಕ್ಕ ರಾಜ್ಯಗಳಾಗಿವೆ. ಒಂದೊಂದು ವಿಭಾಗಕ್ಕೆ

ಒಬ್ಬೊಬ್ಬ ದೊರೆ ಯಿದ್ದಾನೆ. ಒಂದೊಂದು ವಿಭಾಗದವರು ಬೇರೆಬೇರೆಯಾಗಿ ತಮ್ಮ ಸ್ವಂತ ದೊರೆಯಿಂದ ಆಳಲ್ಪಟ್ಟಿದ್ದಾಗ್ಯೂ ಎಲ್ಲರು ಸ್ನೇಹವಾಗಿರುವದಕ್ಕೂ ಒಬ್ಬರಿಗೊಬ್ಬರು ಸಹಾಯ ಮಾಡುವದಕ್ಕೂ ಒಡಂಬಟ್ಟಿದ್ದಾರೆ.

೪. ಮುಖ್ಯ ಪಟ್ಟಣಗಳು. ಹಾನೊವೆರ್ (Hanover) ಡ್ರೆಸ್ಡೆನ್ (Dresden) ಸ್ಟುಟ್ಗಾರ್ಡ್ (Stuttgard) ಮ್ಯೂನಿಕ್ (Munich) ಲೂಬೆಕ್ (Lubeck) ಹಾಂಬರ್ಗ್ (Hamburg) ಬ್ರಿಮೆನ್ (Bremen) ಫ್ರಾಂಕ್ಫೋರ್ಟ್ (Frankfort) ಲೈಪ್ಸಿಕ್ (Leipsic.) 4. Chief Towns.

ಲೈಪ್ಸಿಕ್ ಫ್ರಾಂಕ್ಫೋರ್ಟ್ ಪಟ್ಟಣಗಳಲ್ಲಿ ವರುಷಕ್ಕೆ ಒಂದುಸಾರಿ ಬಹಳ ದೊಡ್ಡ ಸಂತೆಗಳು ಆಗುತ್ತವೆ. ಈ ಸಂತೆಗಳಲ್ಲಿ ಬಹಳ ವ್ಯಾಪಾರ ನಡೆಯುತ್ತದೆ. Annual Fairs.

೫. ನದಿಗಳು. ಡಾನ್ಯೂಬ್ (Danube) ರೈನ್ (Rhine) ಎಲ್ಬ್ (Elbe) ಇತ್ಯಾದಿ. 5. Rivers.

೬. ವಿವರ. ಜೆರ್ಮನಿ ದೇಶದವರು ಬಹಳ ಒಳ್ಳೇಯವರು. ಚಮತ್ಕಾರಿಗಳು. ಅವರಲ್ಲಿ ವಿದ್ಯವು ಪ್ರಬಲ. ಗಾಯನ ವಿದ್ಯದಲ್ಲಿ ಘಟ್ಟಿಗರು. ಮುಖ್ಯವಾಗಿ ಪ್ರೊಟೆಸ್ತಾಂಟ್ ಸಭೆಗೆ ಸೇರಿದವರು. ಅವರಲ್ಲಿ ಅನೇಕರು ಬಹಳ ದೇವಭಕ್ತಿಯುಳ್ಳವರಾಗಿದ್ದಾರೆ. ಇಂಗ್ಲೀಷ್ ಜನರಹಾಗೆ ಬೇರೊಬ್ಬರ ಶರೀರಗಳಿಗೂ ಆತ್ಮಗಳಿಗೂ ಪ್ರಯೋಜನವಾದ ಕೆಲಸಗಳನ್ನು ನಡಿಸುವದರಲ್ಲಿ ಪ್ರಯಾಸ ಪಡುತ್ತಾರೆ. ಆದೇಶದಿಂದ ಅನೇಕ ಕ್ರಿಸ್ತಮಾರ್ಗ ಬೋಧಕರು ಬೇರೆಬೇರೆ ಸೀಮೆಗಳಿಗೆ ಹೋಗಿ ದೇವವಾಕ್ಯವನ್ನು ರಕ್ಷಣೆ ಮಾರ್ಗವನ್ನು ಅ 6. Remarks

ಜ್ಞಾನಿಗಳಲ್ಲಿ ಪ್ರಸಿದ್ಧ ಮಾಡುತ್ತಾ ಇದ್ದಾರೆ. ಪಡಿಯಚ್ಚಿನಿಂದ ಪುಸ್ತಕಗಳನ್ನು ಅಚ್ಚುಹಾಕುವ ವುಪಾಯ ಜೆರ್ಮನಿ ದೇಶದವರಲ್ಲಿ ಮೊದಲು ಹುಟ್ಟಿತು.

---

12. *Denmark.*

೧೨. ಡೆನ್ಮಾರ್ಕ್.

---

1. Boundaries. ೧. ಮೇರೆಗಳು. ಪೂರ್ವದಲ್ಲಿ; ಬಾಲ್ಟಿಕ್ ಕಡಲು (Baltic Sea) ಪಶ್ಚಿಮ ಉತ್ತರಗಳಲ್ಲಿ; ಸಮುದ್ರ (Ocean) ದಕ್ಷಿಣದಲ್ಲಿ; ಜೆರ್ಮನಿ (Germany.)

2. Population. ೨. ಜನಸಂಖ್ಯೆ. ೨೧,೩೨,೦೦೦.

3. Capital. ೩. ಸಂಸ್ಥಾನ. ಕೋಪೆಂಹೇಗೆನ್ (Copenhagen.) ಇದರಲ್ಲಿ ೧,೨೦,೮೧೦ ಜನವಿದ್ದಾರೆ.

4. Islands belonging to Denmark ೪. ಐಸ್ಲಾಂಡ್ (Iceland) ದ್ವೀಪವೂ ಫರೋ ದ್ವೀಪಗಳೂ (Faroe Isles) ಡೆನ್ಮಾರ್ಕ್ ರಾಜ್ಯಕ್ಕೆ ಸೇರುತ್ತವೆ.

5. Remarks ೫. ವಿವರ. ಡೆನ್ಮಾರ್ಕಿನವರು ಬಹಳ ವ್ಯಾಪಾರಸ್ಥರು. ಒಳ್ಳೇ ಗುಣವುಳ್ಳವರಾಗಿಯೂ ಧೈರ್ಯವಂತರಾಗಿಯೂ ಇದ್ದಾರೆ. ಪ್ರೊಟೆಸ್ಟಂಟ್ ಪಕ್ಷಕ್ಕೆ ಸೇರಿದವರು. ಕ್ರಿಸ್ತ ಮಾರ್ಗವನ್ನು ಬೇರೆ ಸೀಮೆಯವರಲ್ಲಿ ಪ್ರಬಲಿಸುವದಕ್ಕೆ ಪ್ರಯಾಸ ಪಡುತ್ತಾರೆ.

---

13. *Sweden.*

೧೩. ಸ್ವೀಡೆನ್.

೧. ಮೇರೆಗಳು. ಪೂರ್ವದಲ್ಲಿ; ಬಾಲ್ಟಿಕ್ ಕಡಲು (Baltic Sea) ಬೋತ್ನಿಯ ಕೊಲ್ಲಿ; (Gulf of Bothnia) ರಸ್ಸಿಯ (Russia) ಪಶ್ಚಿಮ ಉತ್ತರಗಳಲ್ಲಿ; ನೊರ್ವೆ (Norway) ದಕ್ಷಿಣದಲ್ಲಿ; ಬಾಲ್ಟಿಕ್ ಕಡಲು (Baltic Sea.) 1. Boundaries.

೨. ಜನಸಂಖ್ಯೆ. ೩೧,೧೦,೦೦೦. 2. Population.

೩. ಸಂಸ್ಥಾನ. ಸ್ಟೊಕ್ಹೋಲ್ಮ್ (Stockholm.) ಇದರ ಜನಸಂಖ್ಯೆ ೮೫,೦೦೦. 3. Capital.

—o—

14. *Norway.*

೧೪, ನೊರ್ವೆ.

೧. ಮೇರೆಗಳು. ಪೂರ್ವದಲ್ಲಿ; ಸ್ವೀಡೆನ್ (Sweden) ಪಶ್ಚಿಮ ಉತ್ತರಗಳಲ್ಲಿ; ಉತ್ತರ ಸಮುದ್ರ (Northern Ocean) ದಕ್ಷಿಣದಲ್ಲಿ; ಸಮುದ್ರ (Ocean.) 1. Boundaries.

೨. ಜನಸಂಖ್ಯೆ. ೧೨,೪೩,೦೦೦. 2. Population.

೩. ಸಂಸ್ಥಾನ. ಕ್ರಿಸ್ತಿಯಾನ (Christiana.) ಇದರ ಜನಸಂಖ್ಯೆ ೨೫,೧೦೦. 3. Capital.

೪. ವಿವರ. ಸ್ವೀಡೆನ್ ನೊರ್ವೆ ದೇಶಗಳು ಪೂರ್ವ 4. Remarks

ದಲ್ಲಿ ಬೇರೆಬೇರೆ ರಾಜ್ಯಗಳಾಗಿದ್ದವು. ಈಗ ಒಂದೇ ರಾಜ್ಯಕ್ಕೆ ಸೇರಿವೆ. ಸ್ವೀಡೆನ್ ದೇಶಕ್ಕೂ ನೊರ್ವೆ ದೇಶಕ್ಕೂ ಮಧ್ಯದಲ್ಲಿ ಉದ್ದವಾದ ಬೆಟ್ಟಗಳು ಒಂದೇ ಸಾಲಾಗಿ ಬರುತ್ತವೆ. ಈ ಬೆಟ್ಟಗಳಿಗೆ ದೊಫ್ರಿಫೆಲ್ಡ್ (Dofre-feld) ಬೆಟ್ಟಗಳೆಂಬುವ ಹೆಸರು. ಎರಡು ದೇಶಗಳಲ್ಲಿ ವಿಸ್ತಾರವಾದ ಕಾಡುಗಳುಂಟು. ಕಬ್ಬಿಣ ತಾಂಬ್ರಗಳ ಗಣಿಗಳು ಅಲ್ಲಲ್ಲಿ ಅವೆ. ನೊರ್ವೆ ಸೀಮೆಯವರು ಬಹಳ ಮರವನ್ನು ಬೇರೆ ದೇಶಗಳಿಗೆ ಹಡಗಗಳಲ್ಲಿ ಕಳುಹಿಸುತ್ತಾರೆ ಪ್ರೊಟೆಸ್ಟಾಂಟ್ ಸಭೆಗೆ ಸೇರಿದವರಾಗಿದ್ದಾರೆ.

Lapland. ನೊರ್ವೆ ಸ್ವೀಡೆನ್ ದೇಶಗಳಿಗೆ ಉತ್ತರದಿಕ್ಕಿನಲ್ಲಿ ಲಾಪ್ಲಾಂಡ್ ದೇಶವಿದೆ (Lapland.) ಇದರಲ್ಲಿ ಒಂದು ಭಾಗವು ನೊರ್ವೆಗೂ ಒಂದು ಭಾಗವು ಸ್ವೀಡೆನಿಗೂ ಒಂದು ಭಾಗವು ರಸ್ಸಿಯಕ್ಕೂ ಸೇರುತ್ತದೆ. ಲಾಪ್ಲಾಂಡೂ ನೊರ್ವೆ ಸ್ವೀಡೆನ್ ದೇಶಗಳ ಉತ್ತರಕಡೆಗಳೂ ಬಹು ಶೀತಸ್ಥಳಗಳು. ಆ ಪ್ರಾಂತ್ಯಗಳಲ್ಲಿ ಶೀತಕಾಲವಾಗಲು ಹೆಚ್ಚುಕಡಿಮೆ ಮೂರು ತಿಂಗಳಿನವರೆಗೂ ಸೂರ್ಯನು ಕಾಣಿಸುವದಿಲ್ಲ. ಆಗ ಯಾವಾಗ್ಯೂ ರಾತ್ರಿ ಇದೆ. ಚಂದ್ರನಿಂದಲೂ ನಕ್ಷತ್ರಗಳಿಂದ ಮಾತ್ರ ಚನ್ನಾಗಿ ಬೆಳಕಾಗುವದು. ಮತ್ತು ಆ ಸ್ಥಳಗಳಲ್ಲಿ ಸೆಕೆಕಾಲವಾಗಲು ಸೂರ್ಯನು ಮೂರು ತಿಂಗಳಿನವರೆಗೂ ಕೆಳಗೆ ಹೋಗುವದಿಲ್ಲ. ಯಾವಾಗ್ಯೂ ಪ್ರಕಾಶ ಕೊಡುತ್ತಾನೆ. ಆದದರಿಂದ ಆ ಕಾಲದಲ್ಲಿ ಯಾವಾಗಲು ಹಗಲು ಇರುವದು. ಲಾಪ್ಲಾಂಡಿನವರು ಒಂದು ಜಾತಿ ಜಿಂಕೆಗಳನ್ನು ಬಹಳವಾ

ಗಿ ಸಾಕುತ್ತಾರೆ. ಹಿಂದೂ ಜನಕ್ಕೆ ಎತ್ತುಗಳೂ ಹಸಗಳೂ ಹ್ಯಾಗೆ ಪ್ರಯೋಜನವಾಗಿವೆಯೋ ಹಾಗೆಯೇ ಲಾಪ್ಲಾಂಡಿನವರಿಗೆ ಆಜಾತಿ ಜಿಂಕೆಗಳು ಪ್ರಯೋಜನವಾಗಿವೆ. ಅವುಗಳ ಹಾಲನ್ನೂ ಮಾಂಸವನ್ನೂ ತಿನ್ನುವರು. ಅವುಗಳನ್ನು ಬಂಡಿಗಳಿಗೆ ಕಟ್ಟಿಸಿ ಸವಾರಿ ಮಾಡುವರು. ಅವರ ಬಂಡಿಗಳಿಗೆ ಚಕ್ರಗಳು ಇಲ್ಲ. ಎಲ್ಲಿ ಹಿಮದಿಂದ ಮುಚ್ಚಿರುವ ಭೂಮಿಯ ಮೇಲೆ ಚಕ್ರಗಳಿಲ್ಲದೆ ಜಾರಿಹೋಗುತ್ತವೆ. ಈ ಮೇರಿಗೆ ಜಿಂಕೆಗಳು ಕಟ್ಟಿರುವ ಬಂಡಿಗಳಲ್ಲಿ ಲಾಪ್ಲಾಂಡಿನವರು ಬಹು ತ್ವರೆಯಾಗಿ ಪ್ರಯಾಣ ಮಾಡುವರು.

—o—

15. *European Russia.*

೧೫. ಯೂರೋಪಿನ ರಸ್ಸಿಯ.

೧. ಮೇರೆಗಳು. ಪೂರ್ವದಲ್ಲಿ; ಕಾಸ್ಪಿಯನ್ ಕಡಲು (Caspian Sea) ಉರಾಲ್ ನದಿಯು (River Ural) ಊರಾಲ್ ಬೆಟ್ಟಗಳು (Ural Mountains) ಪಶ್ಚಿಮದಲ್ಲಿ; ಬಾಲ್ಟಿಕ್ ಕಡಲು (Baltic Sea) ಪ್ರಶ್ಯ (Prussia) ಆಸ್ಟ್ರಿಯ (Austria) ಉತ್ತರದಲ್ಲಿ; ಉತ್ತರ ಸಮುದ್ರ (Northern Ocean) ಬಿಳಿ ಕಡಲು (White Sea) ದಕ್ಷಿಣದಲ್ಲಿ; ಯೂರೋಪಿನ ತುರುಕಿ (European Turkey) ಕಪ್ಪು ಕಡಲು (Black Sea.) 1. Boundaries.

೨. ಜನಸಂಖ್ಯೆ. ೫,೬೦,೦೦,೦೦೦. 2. Population.

3. Capital. — ೩. ಸಂಸ್ಥಾನ. ಪೀಟರ್ಸಬರ್ಗ್ (Petersburg.) ಇದು ದೊಡ್ಡ ಪಟ್ಟಣ. ಅದರಲ್ಲಿ ೪,೭೫,೦೦೦ ಜನವಿದ್ದಾರೆ.

4. Chief Towns. — ೪. ಮುಖ್ಯ ಪಟ್ಟಣಗಳು. ಮೊಸ್ಕೋ (Moscow) ರೈಗ (Riga) ಆರ್ಕೇಂಜೆಲ್ (Archangel) ಒಡೆಸ್ಸ (Odessa) ಕೀವ್ (Kiev) ನೊವೊಗೊರೊಡ್ (Novogorod) ಸ್ಮೊಲೆಂಸ್ಕೊ (Smolensco) ಅಸ್ತ್ರಕಾನ್ (Astrachan.)

5. Mountains. — ೫. ಬೆಟ್ಟಗಳು. ಊರಾಲ್ ಬೆಟ್ಟಗಳು (Ural Mountains.)

6. Rivers. — ೬. ನದಿಗಳು. ನೀಸ್ಟರ್ (Dniester) ನೀಪರ್ (Dnieper) ಡೋನ್ (Don) ಊರಾಲ್ (Ural) ವೊಲ್ಗ (Volga) ಡ್ವೀನ (Dwina) ನೀವ (Neva) ಇತ್ಯಾದಿ.

7. Islands belonging to Russia. — ೭. ರಸ್ಸಿಯಕ್ಕೆ ಸೇರಿದ ದ್ವೀಪಗಳು. ಉತ್ತರ ಸಮುದ್ರದಲ್ಲಿರುವ ನೋವ ಜೆಂಬ್ಲ (Nova Zembla) ಸ್ಪಿಟ್ಸ್ಬೆರ್ಗೆನ್ (Spitzbergen) ಇವು ಮುಖ್ಯ. ಇವೆರಡು ದ್ವೀಪಗಳು ಬಹು ಶೀತಸ್ಥಳಗಳು.

8. Poland. — ೮. ಪೋಲಾಂಡ್ ದೇಶ. ಇದು ಪೂರ್ವದಲ್ಲಿ ಬೇರೆ ರಾಜ್ಯವಾಗಿತ್ತು. ಈಗ ರಸ್ಸಿಯ ರಾಜ್ಯಕ್ಕೆ ಸೇರಿದೆ. ಅದರ ಸಂಸ್ಥಾನವು, ವಾರ್ಸಾ (Warsaw.) ಇದರ ಜನಸಂಖ್ಯೆ ೧,೫೦,೦೦೦.

9. Finland. — ೯. ಫಿಂಲಾಂಡ್ ದೇಶ. ಇದು ರಸ್ಸಿಯ ರಾಜ್ಯಕ್ಕೆ ಸೇರುತ್ತದೆ. ಜನಸಂಖ್ಯೆ ೧೪,೦೦,೦೦೦.

೧೦. ಸರ್ಕಾಸಿಯ (Circassia.) ಇದು ಬೆಟ್ಟಗಳುಳ್ಳ ಸೀಮೆ. ಕಾಕಸಸ್ ಬೆಟ್ಟಗಳು (Caucasus) ಅದರ ಮೇರೆಯಾಗಿವೆ. ಸರ್ಕಾಸಿಯ ದೇಶದ ಉತ್ತರ ಭಾಗ ರಸ್ಸಿಯಕ್ಕೆ ಸೇರುತ್ತದೆ. ಆದರೆ ದಕ್ಷಿಣ ಭಾಗದಲ್ಲಿರುವ ಜನರು ರಸ್ಸಿಯದ ದೊರೆಗೆ ಒಳಬೀಳುವದಿಲ್ಲ. ಜನಸಂಖ್ಯೆ ೧೦,೦೦,೦೦೦. 10. Circassia.

೧೧. ವಿವರ. ರಸ್ಸಿಯ ಬಹಳ ದೊಡ್ಡ ದೇಶವಾಗಿದೆ. ಅಲ್ಲಲ್ಲಿ ಸೌಖ್ಯವಾದದ್ದು. ಅಲ್ಲಲ್ಲಿ ಸೌಖ್ಯವಾದದ್ದಲ್ಲ. ಬಹು ಶೀತವಾಗುವ ಸೀಮೆ. ಉತ್ತರ ಕಡೆಗಳಲ್ಲಿ ಶೀತವು ಹೆಚ್ಚಾಗಿದೆ. ಕೆಲವು ಸ್ಥಳಗಳಲ್ಲಿ ವಿಸ್ತಾರವಾದ ಬೀಡು ಭೂಮಿಗಳುಂಟು. ಜನರಲ್ಲಿ ವಿದ್ಯೆಯು ಪ್ರಬಲವಿಲ್ಲ. ಅವರು ಗ್ರೀಕ್ ಸಭೆಗೆ ಸೇರಿದವರು. ಗ್ರೀಕ್ ಸಭೆಯ ಬೋಧನೆ ಆಚಾರಗಳೂ ರೋಮಾನ್ ಸಭೆಯ ಬೋಧನೆ ಆಚಾರಗಳೂ ಸ್ವಲ್ಪ ಹೆಚ್ಚುಕಡಿಮೆಯಾಗಿ ಒಂದೇ. 11. Remarks.

—o—

16. *European Turkey.*

೧೬. ಯುರೋಪಿನ ತುರುಕಿ.

---

೧. ಮೇರೆಗಳು. ಪೂರ್ವದಲ್ಲಿ; ಕಪ್ಪುಕಡಲು (Black Sea) ಪಶ್ಚಿಮದಲ್ಲಿ; ಆದ್ರಿಯಾಟಿಕ್ ಕಡಲು (Adriatic Sea) ಆಸ್ತ್ರಿಯ (Austria) ಉತ್ತರದಲ್ಲಿ; ಆಸ್ತ್ರಿಯ (Austria) ರಸ್ಸಿಯ (Russia) ದಕ್ಷಿಣದಲ್ಲಿ; ಗ್ರೀಸ್ (Greece.) 1. Boundaries.

2. Population. ೨. ಜನಸಂಖ್ಯೆ. ೧,೦೦,೦೦,೦೦೦.

3. Capital. ೩. ಸಂಸ್ಥಾನ. ಕೊಂಸ್ತಾಂಟಿನೋಪಿಲ್ (Constantinople.) ಇದು ದೊಡ್ಡ ಪಟ್ಣ. ಅದರ ಜನಸಂಖ್ಯೆ ೫,೦೦,೦೦೦.

4. Chief Towns. ೪. ಮುಖ್ಯ ಪಟ್ಣಗಳು. ಬೆಲ್‌ಗ್ರೇಡ್ (Belgrade) ಸಲೊನಿಕ (Salonica) ಬ್ಯೂಕರೆಸ್ತ್ (Bucharest) ಅಡ್ರಿಯನೋಪಿಲ್ (Adrianople.)

5. Mountains. ೫. ಬೆಟ್ಟಗಳು. ಬಾಲ್ಕನ್ (Balkan) ಇತ್ಯಾದಿ.

6. Rivers. ೬. ನದಿಗಳು. ಡಾನ್ಯೂಬ್ (Danube) ಇತ್ಯಾದಿ.

7. Islands. ೭. ದ್ವೀಪಗಳು. ಕಾಂದಿಯ (Candia) ರೋಡ್ಸ್ (Rhodes) ಲೆಮ್ನೊಸ್ (Lemnos) ಕೊರ್ಫು (Corfu.) ಇತ್ಯಾದಿ.

8. Remarks ೮. ವಿವರ. ತುರುಕಿ ದೇಶದ ಭೂಮಿಯು ಫೊಳ್ಳೇದಾಗಿದೆ. ಪೈರು ಚನ್ನಾಗಾಗುವದು. ಆದರೆ ವಕ್ಕಲಿಗರು ಆರಂಭ ಮಾಡುವದರಲ್ಲಿ ಬಹಳ ಜಾಗ್ರತೆ ಪಡುವದಿಲ್ಲ. ಯಾತಕ್ಕಂದರೆ ಅಲ್ಲಿ ನಡಿಯುವ ಧೊರೆತನದಲ್ಲಿ ಅವರಿಗೆ ಕಷ್ಟವುಂಟು. ಜನರು ಮಹಮ್ಮದಿನ ಮತಸ್ಥರಾಗಿದ್ಧಾರೆ. ಮತ್ತು ತುರುಕಿಯಲ್ಲಿ ಅನೇಕ ಕ್ರಿಸ್ತಿಯರೂ ಯೆಹೂದ್ಯರು ಇದ್ಧಾರೆ.

—o—

17. *Greece.*

೧೭. ಗ್ರೀಸ್.

---

೧. ಮೇರೆಗಳು. ಪೂರ್ವದಲ್ಲಿ; ಆರ್ಕಿಪೆಲಗೊ ಕಡಲು (Archipelago Sea) ಪಶ್ಚಿಮ ದಕ್ಷಿಣಗಳಲ್ಲಿ; ಮೆಡಿಟೆರ್ರೇನಿಯನ್ ಕಡಲು (Mediterranean Sea) ಉತ್ತರದಲ್ಲಿ; ತುರುಕಿ (Turkey.) **1. Boundaries.**

೨. ಜನಸಂಖ್ಯೆ. ೮,೧೦,೦೦೦. **2. Population.**

೩. ಸಂಸ್ಥಾನ. ಅಥೆನ್ಸ್ (Athens.) ಪೂರ್ವದಲ್ಲಿ ಇದು ಬಹು ದೊಡ್ಡ ಸೌಂದರ್ಯವಾದ ಪಟ್ಟಣವಾಗಿತ್ತು. ಅಲ್ಲಿ ವಿದ್ವಾಂಸರು ಅನೇಕರಿದ್ದರು. ಅದರಲ್ಲಿದ್ದ ದೇವಸ್ಥಾನ ಮೊದಲಾದ ಕಟ್ಟುವಿಕೆಗಳು ಮಹಿಮೆಯುಳ್ಳವುಗಳಾಗಿದ್ದವು. ಇವುಗಳಲ್ಲಿ ಉಳಿದವುಗಳು ಈವರೆಗೂ ಅವೆ. ಆದರೆ ಪೂರ್ವದ ಮಹಿಮೆ ಈಗಲು ಆ ಪಟ್ಟಣಕ್ಕಿಲ್ಲ. ಅದರಲ್ಲಿ ಈಗ ೧೭,೦೦೦ ಜನವಿದ್ಧಾರೆ. **3. Capital.**

ಪೂರ್ವದಲ್ಲಿ ಅಪೊಸ್ತಲನಾದ ಪೌಲನು ಅಥೆನ್ಸ್ ಪಟ್ಟಣದಲ್ಲಿ ಕ್ರಿಸ್ತ ಮಾರ್ಗವನ್ನು ಕುರಿತು ಬೋಧಿಸಿ ಅಲ್ಲಿದ್ದ ವಿದ್ವಾಂಸರ ಸಂಗಡ ತರ್ಕಮಾಡಿದನು (ಅಪೊಸ್ತಲರ ಚರ್ಯಗಳು ೧೭ ಸಂಧಿ. ೧೫—೩೪ ವಚನಗಳು.)

೪. ಮುಖ್ಯ ಪಟ್ಟಣಗಳು. ಪೇತ್ರಾಸ್ (Patras) ತ್ರಿಪೊಲಿತ್ಸ (Tripolitza) ಥೀಬ್ಸ್ (Thebes) ಕೊರಿಂತ್ (Corinth) **4. Chief Towns.**

ಕೊರಿಂಕ್ ಪಟ್ಟಣವು ಪೂರ್ವದಲ್ಲಿ ಬಹಳ ದೊಡ್ಡದಾಗಿಯೂ ಮಹಿಮೆಯುಳ್ಳದ್ದಾಗಿಯೂ ಇತ್ತು. ಈಗ ಚಿಕ್ಕ ಗಾಮವಾಗಿದೆ ಅಷ್ಟೇ. ಅದರಲ್ಲಿ ಈಗ ೨೦೦೦ ಜನರು ಮಾತ್ರ ಇದ್ದಾರೆ. ಪೂರ್ವದಲ್ಲಿ ಅಪೊಸ್ತಲನಾದ ಪೌಲನು ಅಲ್ಲಿ ದೇವರ ವಾಕ್ಯವನ್ನು ಪ್ರಸಂಗಿಸಿ ಅನೇಕರನ್ನು ಕ್ರಿಸ್ತನ ಸಭೆಯಲ್ಲಿ ಸೇರಿಸಿದನು.

5. Remarks

೫. ವಿವರ. ಗ್ರೀಸ್ ರಾಜ್ಯವು ಪೂರ್ವದಲ್ಲಿ ದೊಡ್ಡದಾಗಿತ್ತು. ಅದರಲ್ಲಿ ವಿದ್ಯವೂ ಚಮತ್ಕಾರವೂ ಬಹಳ ಪ್ರಬಲವಾಗಿದ್ದವು. ಈಗಲು ಅದರ ಮಹಿಮೆ ಹೋಗಿದೆ. ಈಗಿರುವ ರಾಜ್ಯವು ದೊಡ್ಡದಲ್ಲ. ಜನಕ್ಕೆ ಬಹಳ ಸೌಖ್ಯವಿಲ್ಲ. ಪೂರ್ವದ ವಿದ್ಯವೂ ಐಶ್ವರ್ಯವೂ ಇಲ್ಲ. ಜನಗಳು ಕ್ರಿಸ್ತನ ಸಭೆಗೆ ಸೇರಿದವರಾಗಿದ್ದರು ಕ್ರಿಸ್ತನ ಮಾರ್ಗಕ್ಕೆ ಸರಿಯಾಗಿ ನಡಿಯುವವರಲ್ಲ.

—o—

III. AFRICA.

3. ಆಫ್ರಿಕ.

1. Boundaries.

೧. ಮೇರೆಗಳು. ಪೂರ್ವ; ಕೆಂಪು ಕಡಲು (Red Sea) ಹಿಂದೂ ಸಮುದ್ರ (Indian Ocean) ಪಶ್ಚಿಮ; ಅಟ್ಲಾಂಟಿಕ್ ಸಮುದ್ರ (Atlantic Ocean) ಉತ್ತರ; ಮೆಡಿಟೆರ್ರೇನಿಯನ್ ಕಡಲು (Mediterranean Sea) ದಕ್ಷಿಣ; ದಕ್ಷಿಣ ಸಮುದ್ರ (Southern Ocean)

೨. ಜನಸಂಖ್ಯೆ. ೭,೦೦,೦೦,೦೦೦. 2. Population.

೩. ವಿಭಾಗಗಳು. 3. Divisions

೧) ಈಜಿಪ್ಟ್ (Egypt.)

೨) ನ್ಯೂಬಿಯ (Nubia)

೩) ಅಬಿಸಿನಿಯ (Abyssinia)

೪) ಬಾರ್ಬರಿ (Barbary)

೫) ಪಶ್ಚಿಮ ಆಫ್ರಿಕ (Western Africa.)

೬) ಮಧ್ಯ ಆಫ್ರಿಕ (Central Africa)

೭) ದಕ್ಷಿಣ ಆಫ್ರಿಕ (Southern Africa.)

೮) ಪೂರ್ವ ಆಫ್ರಿಕ (Eastern Africa)

೯) ಆಫ್ರಿಕಕ್ಕೆ ಸೇರಿದ ದ್ವೀಪಗಳು (Islands connected with Africa.)

೪. ವಿವರ. ಸಮುದ್ರ ಧಡದ ಹತ್ತಿರವಿರುವ ಸೀಮೆಗಳನ್ನು ಕುರಿತು ಅಲ್ಲದೆ ಆಫ್ರಿಕ ಖಂಡದಲ್ಲಿರುವ ಕಡಿಮೆ ದೇಶಗಳನ್ನು ಕುರಿತು ಬಹಳ ವರ್ತಮಾನವಿಲ್ಲ. ಯಾಕಂದರೆ ಅದರಲ್ಲಿ ವಿಸ್ತಾರವಾದ ಮರಳಿನ ಭೂಮಿಗಳೂ ಅನೇಕ ಅಮರ್ಯಾದೆಯಾದ ಜನರೂ ಇರುವದರಿಂದ ಅಲ್ಲಿ ಪ್ರಯಾಣ ಮಾಡುವದು ಕಷ್ಟವಾಗಿರುತ್ತದೆ. ಆ ವಿಸ್ತಾರವಾದ ಮರಳಿನ ಭೂಮಿಗಳಲ್ಲಿ ಅಲ್ಲಲ್ಲಿ ನೀರಿರುವ ಸ್ಥಳಗಳುಂಟು. ಆದರೆ ಇವು ಒಂದಕ್ಕೊಂದು ದೂರವಾಗಿವೆ. ಆ ಮರಳಿನ ಭೂಮಿಗಳಲ್ಲಿ ಪ್ರಯಾಣ ಮಾಡುವವರಿಗೆ ಒಂಟೆಗಳು ಬಹಳ ಪ್ರಯೋಜನವಾಗಿವೆ. ಯಾಕಂದರೆ ಅವುಗಳ 4. Remarks

ಪಾದಗಳು ಸೆಕೆಯಿಂದ ಬಿಸಿಯಾಗಿರುವ ಆ ಮರಳನ್ನು ನಷ್ಟವಿಲ್ಲದೆ ತುಳಿಯಶಕ್ಕವು. ಮತ್ತು ಬಹಳ ಕಾಲ ನೀರಿಲ್ಲದೆ ಸಂಚಾರ ಮಾಡುವವು. ಆಫ್ರಿಕ ಖಂಡದಲ್ಲಿ ಸಿಂಹ ಮೊದಲಾದ ದುಷ್ಟ ಮೃಗಗಳು ಬಹಳವುಂಟು. ಜನರು ವಿಧವಿಧವಾದ ಗೋತ್ರಗಳವರು. ಕೆಲವರು ಸ್ವಲ್ಪ ಮರ್ಯಾದೆಯಾದ ಜನರು. ಆದರೆ ಅನೇಕರು ಮರ್ಯಾದೆಯೂ ವಿದ್ಯೆಯೂ ಜ್ಞಾನವೂ ಇಲ್ಲದ ಜನರಾಗಿದ್ದಾರೆ.

—o—

1. *Egypt.*

೧. ಈಜಿಪ್ತ್.

1. Population. ೧. ಜನಸಂಖ್ಯೆ. ೨೦,೦೦,೦೦೦.

2. Chief Towns. ೨. ಮುಖ್ಯ ಪಟ್ಣಗಳು. ಕಾಯಿರೊ (Cairo) ಅಲೆಕ್ಸಾಂಡ್ರಿಯ (Alexandria) ರೋಸೆತ್ತ (Rosetta) ಸೂಯೆಸ್ (Suez.)

Steamers between Great Britain and India. ಗ್ರೇಟ್ ಬ್ರಿಟನಿಗೂ (Great Britain) ಹಿಂದೂಸ್ಥಾನಕ್ಕೂ ಹೊಗೆ ಹಡಗಗಳನ್ನು ನಡಿಸುವವರು ತಮ್ಮ ಹಡಗಗಳಲ್ಲಿ ಪ್ರಯಾಣ ಮಾಡುವ ಜನರನ್ನೂ ಅವರ ಸಾಮಾನುಗಳನ್ನೂ ಸೂಯಸ್ ಪಟ್ಣದ ಹತ್ತಿರ ಇಳಿಸಿ ಅಲೆಕ್ಸಾಂಡ್ರಿಯ ಪಟ್ಣಕ್ಕೆ ಸಾಗಿಸಿ ಅಲ್ಲಿಂದ ಬೇರೆ ಹೊಗೆ ಹಡಗದಲ್ಲಿ ಗ್ರೇಟ್ ಬ್ರಿಟನಿಗೆ ಸೇರಿಸುತ್ತಾರೆ.

3. Nile. ೩. ನದಿ. ನೈಲ್ (Nile.) ಇದು ವರುಷಕ್ಕೆ ಒಂ

ದುಸಾರಿ ಮಳೆಕಾಲದಲ್ಲಿ ಉಬ್ಬಿಕೊಂಡು ತನ್ನ ದಡಗಳನ್ನು ಮೀರಿ ದೇಶದಮೇಲೆ ಬರುವದು. ಆಗಲು ಜನರು ಕಾಲು ನಡಿಯಾಗಿ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಲಾರರು. ಚಿಕ್ಕ ದೋಣಿಗಳಲ್ಲಿ ಹೋಗಬೇಕಾಗಿದೆ. ನೀರು ತಗ್ಗಾದಮೇಲೆ ಅದರಿಂದ ಬೊಡುಕೊಳ್ಳಲ್ಪಟ್ಟ ಒಳ್ಳೆ ಮಣ್ಣು, ಹೊಲಗಳಲ್ಲಿ ಬಿಡಲ್ಪಟ್ಟಿರುವದರಿಂದ ವಕ್ಕಲಿಗರು ಗೊಬ್ಬರ ಹಾಕ ಕೆಲಸವಿಲ್ಲ. ಆ ಒಳ್ಳೆ ಮಣ್ಣೇ ಗೊಬ್ಬರವಾಗಿರುತ್ತದೆ. ಅದರಿಂದ ಪೈರು ಬಹು ಚನ್ನಾಗುವದು. ಒಂದೊಂದು ವೇಳೆಯಲ್ಲಿ ನೈಲ್ ನದಿ ಹುಟ್ಟುವ ಮೇಲ್ದೇಶದಲ್ಲಿ ಮಳೆ ಕಡಿಮೆಯಾಗುವದರಿಂದ ಅದು ಬಹಳವಾಗಿ ಉಬ್ಬಿಕೊಳ್ಳದೆ ದೇಶದಮೇಲೆ ಬರುವದಿಲ್ಲ. ಹೀಗಾದರೆ ಆ ವರುಷದಲ್ಲಿ ಬರ ಉಂಟಾಗುವದು. ಯಾತಕ್ಕೆಂದರೆ ಈಜಿಪ್ತ ದೇಶದಲ್ಲಿ ಮಳೆ ಸುರಿಯುವದು ಅಪರೂಪ. ಆ ನೈಲ್ ನದಿ ಉಬ್ಬಿಕೊಂಡು ದೇಶದಮೇಲೆ ಬರುವದರಿಂದಲೇ ಪೈರಾಗುವದು.

Periodical overflow.

Fertility of the Land.

೪. ವಿವರ. ಹೆಚ್ಚುಕಡಿಮೆ ೪೦೦೦ ವರುಷಕ್ಕೆ ಮುಂಚೆ ಈಜಿಪ್ತ ದೇಶದಲ್ಲಿ ದೊಡ್ಡ ರಾಜ್ಯವಿತ್ತು. ಜನರಲ್ಲಿ ವಿದ್ಯವೂ ಚಮತ್ಕಾರವೂ ಪ್ರಬಲವಾಗಿದ್ದವು. ಅದರ ಪಟ್ಣಗಳು ದೊಡ್ಡವು. ದೇವಸ್ಥಾನಗಳು ಸೌಂದರ್ಯವುಳ್ಳವು.

4. Remarks.

Ancient Egypt.

ಈಜಿಪ್ತ ದೇಶದಲ್ಲಿ ಈಗಲು ದೊಡ್ಡ ಊರುಗಳುಂಟು. ಜನರು ಬಹಳ ವ್ಯಾಪಾರ ನಡಿಸುತ್ತಾರೆ. ಆದರೆ ಪೂರ್ವದ ಮಹಿಮೆ ಹೋಯಿತು. ದೊರೆತನ ಮಾಡುವ ರಾಯನು ಘಟ್ಟಿಗನಾಗಿದ್ದಾನೆ. ಆದರೆ ಜನರನ್ನು ಕಠಿನವಾಗಿ ಆಳು

Modern Egypt.

ವದರಿಂದ ಅವರಿಗೆ ಪೂರ್ಣ ಸೌಖ್ಯವಿಲ್ಲ. ಮಹಮ್ಮದಿನ ಮತಸ್ಥರಾಗಿದ್ಧಾರೆ. ಮತ್ತು ಪೂರ್ವದಲ್ಲಿ ಅಲ್ಲಿ ಇದ್ದ ಕ್ರಿಸ್ತಿಯರ ವಂಶದಲ್ಲಿ ಹುಟ್ಟಿದವರು ಇದ್ಧಾರೆ. ಆದರೆ ಇವರಲ್ಲಿ ಕ್ರಿಸ್ತನ ಮಾರ್ಗವನ್ನು ಕುರಿತು ಬಹಳ ತಿಳಿವಿಕೆಯಿಲ್ಲ. ಮತ್ತು ಅದಕ್ಕೆ ವಿರೋಧವಾದ ನಡತೆಗಳು ವುಂಟು.

Antiquities

ಈಜಿಪ್ತಿನ ರಾಜ್ಯವು ಶ್ರೇಷ್ಠವಾಗಿದ್ದ ಕಾಲದಲ್ಲಿ ಕಟ್ಟಲ್ಪಟ್ಟಿದ್ದ ದೇವಸ್ಥಾನ ಸಮಾಧಿ ಮೊದಲಾದವುಗಳಲ್ಲಿ ಅನೇಕವು ಈಪರಿಯಂತರ ನಿಂತವೆ. ಅವುಗಳನ್ನು ನೋಡಿರುವವರು ಅವು ವಿಸ್ತಾರವೂ ಚಮತ್ಕಾರವೂ ವುಳ್ಳವೆಂದು ಅನ್ನುತ್ತಾರೆ.

The Israelites slaves in Egypt.

ಪೂರ್ವಕಾಲದಲ್ಲಿ ದೇವರ ಜನರಾದ ಇಸ್ರಯೇಲ್ಯರು ಈಜಿಪ್ತ್ ದೇಶದಲ್ಲಿ ಗುಲಾಮರಾಗಿದ್ದರು. ದೇವರು ಈಜಿಪ್ತಿನವರಮೇಲೆ ಅನೇಕ ಬಾಧೆಗಳನ್ನು ಬರಮಾಡಿ ತನ್ನ ಜನರನ್ನು ಬಿಡಿಸಿದಮೇಲೆ ಅರಸನಾದ ಫರೋನು ಅವರನ್ನು ತಿರಿಗಿ ಹಿಡಿಯುವದಕ್ಕೆ ಬರುವಾಗ ದೇವರು ತನ್ನ ಜನರಿಗೋಸ್ಕರ ಕೆಂಪು ಕಡಲಿನಲ್ಲಿ ಆಶ್ಚರ್ಯವಿಧವಾಗಿ ದಾರಿ ಮಾಡಿ ಅವರನ್ನು ಹಿಂದಟ್ಟಿದ ಫರೋನನ್ನು ಅವನ ದಂಡನ್ನು ಅದರಲ್ಲಿ ಮುಣಿಗಿಸಿಬಿಟ್ಟನು.

Plagues.

Events at the Red Sea.

—o—

2. *Nubia.*

೨. ನ್ಯೂಬಿಯ.

೧. ಜನಸಂಖ್ಯೆ. ೨,೫೦,೦೦೦. 1. Population.

೨. ಮುಖ್ಯ ಪಟ್ಟಣಗಳು. ಡೊಂಗೋಲ (Dongola) ಸೆನ್ನಾರ್ (Sennar.) 2. Chief Towns.

3. ನದಿ. ನೈಲ್ (Nile.) 3. River.

೪. ನ್ಯೂಬಿಯದಲ್ಲಿ ಬಹಳ ಮರಳಿನ ಭೂಮಿ ಅದೆ. ನೈಲ್ ನದಿಯ ಪ್ರಾಂತ್ಯದಲ್ಲಿ ಮಾತ್ರ ಭೂಮಿ ಚೆನ್ನಾಗಿದೆ. ಜನರು ಮರ್ಯಾದಸ್ತರಲ್ಲ. ಅವರಲ್ಲಿ ಕ್ರೂರಗುಣವೂ ಮೋಸವೂ ಸ್ವಲ್ಪ ವುಂಟು. ಪೂರ್ವಕಾಲದಲ್ಲಿ ಈದೇಶಕ್ಕೆ ಈಥಿಯೋಪಿಯ (Ethiopia) ಯೆಂಬುವ ಹೆಸರಿತ್ತು. 4. Remarks

—o—

3. *Abyssinia.*

3, ಅಬಿಸಿನಿಯ.

೧. ಮುಖ್ಯ ಪಟ್ಟಣಗಳು. ಗೊಂಡಾರ್ (Gondar) ಅಕ್ಸುಮ್ (Axum.) 1. Chief Towns.

೨. ವಿವರ. ಪೂರ್ವದಲ್ಲಿ ಅಬಿಸಿನಿಯ ದೊಡ್ಡ ರಾಜ್ಯವಾಗಿತ್ತು. ಈಗಲು ಹಾಗಲ್ಲ. ಅದರ ಜನರು ನ್ಯೂಬಿಯ ದೇಶದವರ ಹಾಗೆಯೇ. ಅಬಿಸಿನಿಯದವರು ಕ್ರಿಸ್ತಿಯರ ವಂ 2. Remarks

ಶದಲ್ಲಿ ಹುಟ್ಟಿದವರಾಗಿದ್ದಾರೆ. ಆದಕಾರಣ ಕ್ರಿಸ್ತಿಯರೆಂಬುವ ಹೆಸರು ಅವರಿಗೆ ಇದೆ. ಆದರೆ ಕ್ರಿಸ್ತನ ಮಾರ್ಗಕ್ಕೆ ಯೋಗ್ಯವಾಗಿ ನಡಿಯುವವರಲ್ಲ.

———o———

4. *Barbary.*

೪. ಬಾರ್ಬರಿ.

1. Chief States and Towns.

ಮುಖ್ಯ ವಿಭಾಗಗಳು.	ಮುಖ್ಯ ಪಟ್ಟಣಗಳು.
ಮೊರೊಕ್ಕೊ (Morocco)	ಮೊರೊಕ್ಕೊ (Morocco)
ಅಲ್ಜೀರ್ಸ್ (Algiers)	ಅಲ್ಜೀರ್ಸ್ (Algiers)
ಟ್ಯೂನಿಸ್ (Tunis)	ಟ್ಯೂನಿಸ್ (Tunis)
ಟ್ರಿಪೊಲಿ (Tripoli)	ಟ್ರಿಪೊಲಿ (Tripoli)
ಬಾರ್ಕ (Barca)	ಡೆರ್ನ (Derna)

2. Mountains. ೨. ಬೆಟ್ಟಗಳು. ಅಟ್ಲಾಸ್ (Atlas.)

3. Remarks. ೩. ವಿವರ. ಬಾರ್ಬರಿ ದೇಶದ ಭೂಮಿಯು ಒಳ್ಳೇದು. ಅಲ್ಲಿ ವಿಧವಿಧವಾದ ಧಾನ್ಯಗಳೂ ಹಣ್ಣುಗಳೂ ಚನ್ನಾಗಿ ಬೆಳಿಯುವವು. ಸಮುದ್ರದ ಧಡದಮೇಲಿರುವದರಿಂದ ಅಲ್ಲಿ ಬಹಳ ವ್ಯಾಪಾರ ನಡಿಯಬಹುದು. ಆದರೆ ದೊರೆತನ ಮಾಡುವವರು ಪ್ರಜೆಗಳನ್ನು ಕಷ್ಟಪಡಿಸುವಕಾರಣ ದೇಶವು ಹೆಚ್ಚುವದಿಲ್ಲ. ಜನಗಳು ಮಹಮ್ಮದಿನ ಮತಸ್ಥರಾಗಿದ್ದಾರೆ.

———o———

5. *Western Africa.*

೫. ಪಶ್ಚಿಮ ಆಫ್ರಿಕ.

---

೧. ಮುಖ್ಯ ವಿಭಾಗಗಳು. ಸಹಾರ (Sahara) ಸೆನಿ 1. Chief Divisions.
ಗಾಂಬಿಯ (Senegambia) ಸಿಯೆರ್ರ ಲಿಯೋನ್ (Sierr Leone) ಲೈಬೀರಿಯ (Liberia) ದಂತದ ಧಡ (Ivory Coast) ಚಿನ್ನದ ಧಡ (Gold Coast) ಅಶಂಟೀ (Ashantee) ಲೋಯಾಂಗೊ (Loango) ಕೊಂಗೊ (Congo) ಅಂಗೋಲ (Angola) ಬೆಂಗ್ಯುಯಾಲ (Benguela.)

೨. ನದಿಗಳು. ಸೆನಿಗಾಲ್ (Senegal) ಗಾಂಬಿಯ 2. Rivers.
(Gambia) ನೈಗೆರ್ (Niger.)

೩. ಬೆಟ್ಟಗಳು. ಕೊಂಗ್ (Kong.) 3. Mountains.

೪. ವಿವರ. ಪಶ್ಚಿಮ ಆಫ್ರಿಕದಲ್ಲಿ ವಿಧವಿಧವಾದ ಅಮ 4. Remarks
ರ್ಯಾದೆಯಾದ ಜನಗಳು ಇದ್ದಾರೆ. ಯೂರೋಪಿನವರು ಚಿನ್ನವನ್ನೂ ದಂತವನ್ನೂ ಸಂಪಾದಿಸುವದಕ್ಕೆ ಆದೇಶಕ್ಕೆ ಹೋಗುತ್ತಾರೆ. ಮತ್ತು ಅವರಲ್ಲಿ ಕೆಲವರು ಅಲ್ಲಿ ವಾಸ ಮಾಡುತ್ತಾರೆ. ಯೂರೋಪಿನವರು ಮುಖ್ಯವಾಗಿ ಇರುವ ಸ್ಥಳಗಳು ಯಾವವಂದರೆ, ಸಿಯೆರ್ರ ಲಿಯೋನ್ (Sierra Leone,) ಲೈಬೀರಿಯ (Liberia.) ಈ ಪ್ರಾಂತ್ಯಗಳಲ್ಲಿ ಕ್ರಿಸ್ತ ಮಾರ್ಗವನ್ನು ಪ್ರಬಲಿಸುವದಕ್ಕೆ ಪ್ರಯತ್ನ ಮಾಡುತ್ತಾರೆ. ಅಜ್ಞಾನಿಯಾದ ಜನರಲ್ಲಿ ಕೆಲವರು ಜ್ಞಾನಮಾರ್ಗಕ್ಕೆ ತಿರಿಗಿದ್ದಾರೆ.

ಸಹಾರ (Sahara) ವೆಂಬುವ ಭಾಗವು ವಿಸ್ತಾರವಾದ ಮರಳಿನ ಭೂಮಿಯಾಗಿದೆ. ಈ ಮರಳಿನ ಭೂಮಿ ೩೦೦೦ ಮೈಲುಗಳ ಉದ್ದವಾಗಿಯೂ ೧೦೦೦ ಮೈಲುಗಳ ಅಗಲವಾಗಿಯೂ ಇದೆ. ಅಲ್ಲಿ ಪ್ರಯಾಣ ಮಾಡುವವರಿಗೆ ಬಹಳ ಕಷ್ಟವಾಗುತ್ತದೆ. ಅಲ್ಲಲ್ಲಿ ನೀರು ಸಿಕ್ಕುವ ಸ್ಥಳಗಳುಂಟು. ಆದರೆ ಇವು ಒಂದಕ್ಕೊಂದು ಬಹು ದೂರವಾಗಿವೆ.

—o—

6. *Central Africa.*

೬. ಮಧ್ಯ ಆಫ್ರಿಕ.

1. Chief Countries. ೧. ಮುಖ್ಯ ದೇಶಗಳು. ಟಿಂಬಕ್ಟೂ (Timbuctoo) ಹೂಸ್ಸ (Houssa) ಬೊರ್ನೂ (Bornou) ಬೆರ್ಗೂ (Bergoo) ಡಾರ್ಫರ್ (Darfur) ಕೊರ್ಡೋಫಾನ್ (Kordofan.)

2. Mountains. ೨. ಬೆಟ್ಟಗಳು. ಚಂದ್ರ ಬೆಟ್ಟಗಳು (Mountains of the Moon.)

3. Remarks ೩. ವಿವರ. ಮಧ್ಯ ಆಫ್ರಿಕವನ್ನು ಕುರಿತು ಬಹಳ ವರ್ತಮಾನವಿಲ್ಲ. ಅದರಲ್ಲಿ ವಿಸ್ತಾರವಾದ ಮರಳಿನ ಭೂಮಿಗಳುಂಟು. ಆದರೆ ಕೆಲವು ಸ್ಥಳಗಳಲ್ಲಿ ಪೈರು ಚೆನ್ನಾಗಾಗುವ ಭೂಮಿ ಅದೆ. ಜನಗಳು ಅಮರ್ಯಾದಸ್ತರು. ಅವರಲ್ಲಿ ಕೆಲವರು ಕ್ರೂರಗುಣವುಳ್ಳವರು.

—o—

7. *Southern Africa.*

೭. ದಕ್ಷಿಣ ಆಫ್ರಿಕ.

೧. ದಕ್ಷಿಣ ಆಫ್ರಿಕದಲ್ಲಿ ಬೇರೆಬೇರೆ ಜಾತಿ ಜನರು ಇದ್ದಾರೆ. ಇವರಲ್ಲಿ ಹೊಟ್ಟೆಂಟೋಟ್ (Hottentots) ಜನರೂ, ಬೆಚುಯಾನ (Bechuanas) ಜನರೂ, ಕಾಫ್ಫರ್ (Caffers) ಜನರೂ ಮುಖ್ಯಸ್ತರು. ಇವರೆಲ್ಲರು ಪೂರ್ವದಲ್ಲಿ ಅಮರ್ಯಾದಸ್ತರಾಗಿಯೂ ಜ್ಞಾನವೂ ವಿದ್ಯವೂ ಇಲ್ಲದವರಾಗಿಯೂ ಇದ್ದರು. ಆದರೆ ಈಗಿನ ಕಾಲಕ್ಕೆ ಕೆಲವು ವರುಷಗಳಿಗೆ ಮುಂಚೆ ಇಂಗ್ಲಾಂಡ್ ದೇಶದಿಂದ ಕ್ರಿಸ್ತಮಾರ್ಗಬೋಧಕರು ಅಲ್ಲಿಗೆ ಹೋಗಿ ಸತ್ಯವೇದ ವಾಕ್ಯಗಳನ್ನು ಯೇಸು ಕ್ರಿಸ್ತನಿಂದ ರಕ್ಷಣೆಯ ಮಾರ್ಗವನ್ನು ಅವರಿಗೆ ತಿಳಿಯ ಮಾಡಿದರು. ದೇವರ ದಯದಿಂದ ಅನೇಕರು ಗುಣಪಟ್ಟು ಕ್ರಿಸ್ತನ ಸಭೆಯಲ್ಲಿ ಸೇರಿದ್ದಾರೆ. ಆದದರಿಂದ ಜ್ಞಾನವೂ ಶಕ್ತಿಯೂ ಉಳ್ಳವರಾದರು. ಮತ್ತು ಅವರಲ್ಲಿ ವಿದ್ಯಗಳೂ ಚಮತ್ಕಾರವೂ ಒಳ್ಳೆ ಮರ್ಯಾದೆಗಳು ಹೆಚ್ಚುತ್ತಾ ಬರುತ್ತವೆ. 1. Various tribes, and their condition.

೨. ಮುಖ್ಯ ಊರುಗಳು. ಕೇಪ್ ಊರು (Cape Town.) ಇದು ದೊಡ್ಡದು. ಅದರ ಜನಸಂಖ್ಯೆ ೨೦,೦೦೦. ಯೂರೋಪಿನವರು ಅಲ್ಲಿ ವಾಸ ಮಾಡುತ್ತಾರೆ. ಆ ಊರೂ ಅದರ ಪ್ರಾಂತ್ಯಗಳೆಲ್ಲವೂ ಗ್ರೇಟ್ ಬ್ರಿಟನ್ ರಾಜ್ಯಕ್ಕೆ (Great Britain) ಸೇರುತ್ತವೆ. ಗ್ರೇಟ್ ಬ್ರಿಟನಿಗೂ ೬೦ 2. Chief Towns.

ದೂಸ್ಥಾನಕ್ಕೆ ಹಡಗಗಳನ್ನು ನಡಿಸುವವರು ಬೇಕಾದ ನೀರು ಮೊದಲಾದವುಗಳನ್ನು ಸಂಪಾದಿಸುವದಕ್ಕೆ ಕೇಪ್ ಪೂರಿಗೆ ಹೋಗುವರು.

ಗ್ರೇಹಾಮ್ಸ್ ಪೂರು (Graham's Town) ಪೋರ್ಟ್ ನೇಟಲ್ (Port Natal) ಲತ್ತಕ್ಕೂ (Lattakoo.)

3. Rivers. ೩. ನದಿಗಳು. ಕಿತ್ತಳೆ ನದಿ (Orange River) ಮೀನಿನ ನದಿ (Fish River.)

4. Cape. ೪. ಮೂಲೆ. ಒಳ್ಳೇ ನಂಬಿಕೆಯ ಮೂಲೆ (Cape of Good Hope.)

---

8. *Eastern Africa.*

೮. ಪೂರ್ವ ಆಫ್ರಿಕ.

---

1. People. ೧. ಪೂರ್ವ ಆಫ್ರಿಕದಲ್ಲಿ ಬೇರೆಬೇರೆ ಜಾತಿ ಜನರು ಇದ್ದಾರೆ. ಇವರೆಲ್ಲರು ಅಮರ್ಯಾದಸ್ತರು. ಜ್ಞಾನವೂ ವಿದ್ಯೆಯೂ ಇಲ್ಲದವರು. ಪೋರ್ತುಗಲ್ (Portugal) ಜನರು ಅಲ್ಲಿಗೆ ಹಡಗಗಳಲ್ಲಿ ವ್ಯಾಪಾರಕ್ಕೋಸ್ಕರ ಹೋಗುವರು. ಮತ್ತು ಅನೇಕರು ಅಲ್ಲಿ ವಾಸ ಮಾಡುತ್ತಾರೆ.

2. Countries. ೨. ಮುಖ್ಯ ಶೀಮೆಗಳು. ಮೊಸಂಬೀಕ್ (Mozambique) ಸಾಂಗ್ವೆಬಾರ್ (Zanguebar.) ಇತ್ಯಾದಿ.

---

9. *Islands connected with Africa.*

೯. ಆಫ್ರಿಕಕ್ಕೆ ಸೇರಿದ ದ್ವೀಪಗಳು.

---

೧. ಮದಗಾಸ್ಕರ್ (Madagascar.) ಇದು ದೊಡ್ಡ ದ್ವೀಪ. ಅದರಲ್ಲಿ ೪೦,೦೦,೦೦೦ ಜನವಿದ್ದಾರೆ. ಭೂಮಿ ವೊಳ್ಳೇದು. ಬೇರೆಬೇರೆ ಲೋಹಗಳು ಅಲ್ಲಿ ಬಹಳವಾಗಿ ಸಿಕ್ಕುತ್ತವೆ. ಜನರು ಅಮರ್ಯಾದಸ್ತರು. ವಿಗ್ರಹಾರಾಧಕರಾಗಿದ್ದಾರೆ. ಅವರಲ್ಲಿ ವಿದ್ಯವು ಪ್ರಬಲವಿಲ್ಲ. ಈಗಿನ ಕಾಲಕ್ಕೆ ಕೆಲವು ವರುಷಗಳಿಗೆ ಮುಂಚೆ ಇಂಗ್ಲಾಂಡ್ ದೇಶದಿಂದ ಕ್ರಿಸ್ತಮಾರ್ಗ ಬೋಧಕರು ಅಲ್ಲಿಗೆ ಹೋಗಿ ದೇವರ ವಾಕ್ಯವನ್ನೂ ರಕ್ಷಣೆಯ ಮಾರ್ಗವನ್ನೂ ಪ್ರಸಿದ್ಧ ಮಾಡಿದರು. ಅನೇಕ ಧರ್ಮ ಮಠಗಳನ್ನು ಸ್ಥಾಪಿಸಿದರು. ಜನರಲ್ಲಿ ವಿದ್ಯವನ್ನು ಪ್ರಬಲಿಸುವದಕ್ಕೆ ಪ್ರಯಾಸ ಪಟ್ಟರು. ಅವರ ಪ್ರಯಾಸದಿಂದ ವೊಳ್ಳೇ ಫಲ ಬಂತು. ಬಹಳ ಜನರು ಗುಣಪಟ್ಟು ಕ್ರಿಸ್ತನ ಸಭೆಯಲ್ಲಿ ಸೇರಿದರು. ಆವಾಗ ಆಳಿದ ಅರಸನು ಗುಣವಂತನಾಗಿದ್ದು ಬೋಧಕರಿಗೆ ದಯ ತೋರಿಸಿ ತನ್ನ ಜನರಲ್ಲಿ ಸುಜ್ಞಾನವನ್ನೂ ವಿದ್ಯವನ್ನೂ ಶಿಕ್ಷಿಸುವದಕ್ಕೆ ಪ್ರಯತ್ನ ಮಾಡಿದನು. ಆದರೆ ಆತನು ಸತ್ತಮೇಲೆ ವೊಬ್ಬ ರಾಣಿ ಸಿಂಹಾಸನಕ್ಕೆ ಬಂದಳು. ಈಕೆ ದುರಾಲೋಚನೆ ಹೇಳುವವರಿಗೆ ಕಿವಿಗೊಟ್ಟು ಕ್ರಿಸ್ತಮಾರ್ಗ ಬೋಧಕರನ್ನು ತನ್ನ ದೇಶದೊಳಗಿಂದ ಹೊರಡಿಸಿಬಿಟ್ಟು ಕ್ರಿಸ್ತಸಭೆಯವರನ್ನು ಬಹಳವಾಗಿ ಕಷ್ಟಪಡಿಸಿ ಅವರಲ್ಲಿ ಅನೇಕ 1. Madagascar.

ರ ಪ್ರಾಣವನ್ನು ತೆಗೆಸಿದಳು. ಇವರು ತಾವು ನಂಬಿದ ರಕ್ಷಕನಾದ ಯೇಸುವಿಗೋಸ್ಕರ ತಮ್ಮ ಪ್ರಾಣವನ್ನು ಒಪ್ಪಿಸುವದಕ್ಕೆ ಭಯಪಡಲಿಲ್ಲ. ಆರಾಣಿ ಈಗಲು ಕ್ರಿಸ್ತನ ಶಿಷ್ಯರನ್ನು ಬಹಳವಾಗಿ ಹಿಂಸೆಪಡಿಸುತ್ತಾ ಇದ್ದಾಳೆ. ಮತ್ತು ತನ್ನ ಪ್ರಜೆಗಳನ್ನೆಲ್ಲಾ ಕ್ರೂರವಾಗಿ ಆಳುತ್ತಾ ಇದ್ದಾಳೆ. ಜನಕ್ಕೆಲ್ಲಾ ಬಹು ಶ್ರಮೆ ಉಂಟು. ಸಂಸ್ಥಾನವು ತನಾನರೀವೊ (Tananarivo.) ಇದರ ಜನಸಂಖ್ಯೆ ೧೨,೦೦೦.

2. Bourbon. ೨. ಬೂರ್ಬೋಂಗ್ (Bourbon.) ಇದು ಫ್ರಾಂಸ್ (France) ರಾಜ್ಯಕ್ಕೆ ಸೇರುತ್ತದೆ. ಇದರಲ್ಲಿ ಒಂದು ಅಗ್ನಿ ಪರ್ವತವುಂಟು. ಇದರಿಂದ ಬೆಂಕಿ ಯಾವಾಗಲು ಹೊರಡುತ್ತಾ ಬರುತ್ತದೆ. ದ್ವೀಪದ ಜನಸಂಖ್ಯೆ. ೧,೦೯,೦೦೦. ಮುಖ್ಯ ಊರು. ಸಂಟ್ ಡಿನ್ನಿಸ್ (St. Denis.) ಇದರಲ್ಲಿ ೧೯,೦೦೦ ಜನವಿದ್ದಾರೆ.

3. Mauritius. ೩. ಮಾರಿಷಿಯಸ್ (Mauritius.) ಇಲ್ಲಿ ಬಹಳ ಕಬ್ಬು, ಕಾಪಿ ಬೀಜ, ಅರಳೆ, ನೀಲಿ ಬೀಜಗಳು ಬೆಳೆಯುತ್ತವೆ. ಮತ್ತು ಒಳ್ಳೆ ಜಾತಿ ಕರೀಮರ ಸಿಕ್ಕುತ್ತದೆ. ಈ ದಿನಸುಗಳಲ್ಲಿ ಬಹು ವ್ಯಾಪಾರ ನಡೆಯುತ್ತದೆ. ಈ ದ್ವೀಪವು ಗ್ರೇಟ್ ಬ್ರಿಟನ್ ರಾಜ್ಯಕ್ಕೆ (Great Britain) ಸೇರುತ್ತದೆ. ಅದರ ಜನಸಂಖ್ಯೆ ೧,೩೫,೦೦೦.

4. St. Helena. ೪. ಸಂಟ್ ಹೆಲೀನ (St. Helena.) ಇದು ಚಿಕ್ಕ ದ್ವೀಪವು. ಅದರ ಜನಸಂಖ್ಯೆ ೫೦೦೦. ಗ್ರೇಟ್ ಬ್ರಿಟನಿಗೂ ಹಿಂದೂಸ್ಥಾನಕ್ಕೂ ಹಡಗಗಳನ್ನು ನಡೆಸುವವರು ಬೇಕಾದ ನೀರು ಮೊದಲಾದವುಗಳಿಗೋಸ್ಕರ ಈ ದ್ವೀಪಕ್ಕೆ

ಹೋಗುವದುಂಟು. ದ್ವೀಪವು ಗ್ರೇಟ್ ಬ್ರಿಟನ್ ರಾಜ್ಯಕ್ಕೆ ಸೇರುತ್ತದೆ. ಪೂರ್ವದಲ್ಲಿ ಯೂರೋಪ್ ಖಂಡದಲ್ಲಿ ಬಹಳ ಯುದ್ಧ ಮಾಡಿ ಪ್ರಜೆಗಳನ್ನು ಶ್ರಮೆ ಪಡಿಸಿದ ನಪೋಲಿಯೋನ್ ಬೋನಪಾರ್ಟ್ (Napoleon Buonaparte) ಎಂಬುವ ಪರಾಕ್ರಮಶಾಲಿಯು ಅಲ್ಲಿ ಆರು ವರುಷ ಸೆರೆಯಾಗಿ ಇಡಲ್ಪಟ್ಟಿದ್ದನು.

೫. ಕೇಪ್ ವೇರ್ಡ್ ದ್ವೀಪಗಳು (Cape Verd Islands.) ಈ ದ್ವೀಪಗಳು ಹದಿನಾಲ್ಕು. ಪೋರ್ಚುಗಲ್ (Portugal) ರಾಜ್ಯಕ್ಕೆ ಸೇರುತ್ತವೆ. ಅವುಗಳ ಘಾಳಿ ಆರೋಗ್ಯವಾದದ್ದಲ್ಲ. ಭೂಮಿ ಒಳ್ಳೇದಲ್ಲ. ಅಲ್ಲಿ ಪ್ಪಿಣಾನಲ್ಲಿಯೂ ಅರಳೆಯಲ್ಲಿಯೂ ಮೇಕೆ ಚರ್ಮಗಳಲ್ಲಿಯೂ ವ್ಯಾಪಾರ ನಡಿಯುತ್ತದೆ. ಜನಸಂಖ್ಯೆ ೫೦,೦೦೦. 5. Cape Verd Islands.

೬. ಕನೇರಿ ದ್ವೀಪಗಳು (Canary Islands.) ಇವು ಹದಿಮೂರು. ಸ್ಪೇನ್ ರಾಜ್ಯಕ್ಕೆ (Spain) ಸೇರುತ್ತವೆ. ಇಲ್ಲಿ ದ್ರಾಕ್ಷೆ ರಸವನ್ನು ವ್ಯಾಪಾರಕ್ಕೋಸ್ಕರ ಬಹಳವಾಗಿ ಮಾಡುತ್ತಾರೆ. ಭೂಮಿ ಒಳ್ಳೇದು. ಘಾಳಿ ಆರೋಗ್ಯವಾದದ್ದು. ಅವುಗಳಲ್ಲಿ ದೊಡ್ಡ ಬೆಟ್ಟಗಳುಂಟು. ಇವುಗಳಲ್ಲಿ ಎತ್ತರವಾದದ್ದಕ್ಕೆ ಟೆನರಿಫ್ (Teneriffe) ಎಂಬುವ ಹೆಸರು ಇದೆ. ಇದು ೧೨,೧೭೬ ಅಡಿಗಳ ಎತ್ತರವಾಗಿದೆ. ಈ ಬೆಟ್ಟಗಳು ಸಮುದ್ರದಲ್ಲಿ ಹಡಗಗಳಲ್ಲಿ ಪ್ರಯಾಣ ಮಾಡುವವರಿಗೆ ಅವರು ೧೪೦ ಮೈಲುಗಳ ದೂರವಾಗಿರುವಾಗ ಕಾಣಿಸುತ್ತವೆ. ದ್ವೀಪಗಳ ಜನಸಂಖ್ಯೆ ೨,೩೯,೩೩೪. 6. Canary Islands.

೭, ಮದೀರ (Madeira) ಈ ದ್ವೀಪವು ಸೌಖ್ಯವಾದ 7. Madeira.

ಸ್ಥಳ. ಭೂಮಿ ಒಳ್ಳೇದು. ಭಾಳ ಆರೋಗ್ಯವಾದದ್ದು ಅಲ್ಲಿ ಬಹಳ ದ್ರಾಕ್ಷಿ ರಸವನ್ನು ವ್ಯಾಪಾರಕ್ಕೋಸ್ಕರ ಮಾಡುತ್ತಾರೆ. ಜನಸಂಖ್ಯೆ ೧,೧೨,೦೦೦. ಪೋರ್ಟುಗಲ್ (Portugal) ರಾಜ್ಯಕ್ಕೆ ಸೇರುತ್ತದೆ.

8. Azores. ೮. ಅಜೋರ್ಸ್ (Azores.) ಈ ದ್ವೀಪಗಳು ಒಂಭತ್ತು. ಪೋರ್ಟುಗಲ್ ರಾಜ್ಯಕ್ಕೆ ಸೇರುತ್ತವೆ. ಭೂಮಿ ಒಳ್ಳೇದು. ಭಾಳ ಆರೋಗ್ಯವಾದದ್ದು. ಅಲ್ಲಿ ವಿಧವಿಧವಾದ ಧಾನ್ಯಗಳೂ ಹಣ್ಣುಗಳೂ ಚೆನ್ನಾಗಿ ಬೆಳಿಯುತ್ತವೆ. ಜನರು ಬಹಳ ದ್ರಾಕ್ಷಿ ರಸವನ್ನು ವ್ಯಾಪಾಕ್ಕೋಸ್ಕರ ಮಾಡುತ್ತಾರೆ. ಜನಸಂಖ್ಯೆ ೨,೫೦,೦೦೦.

—o—

IV. AMERICA.

೪. ಅಮೆರಿಕ.

---

1. Boundaries. ೧. ಮೇರೆಗಳು. ಪೂರ್ವ, ಅಟ್ಲಾಂಟಿಕ್ ಸಮುದ್ರ (Atlantic Ocean) ಪಶ್ಚಿಮ, ಪಸಿಫಿಕ್ ಸಮುದ್ರ (Pacific Ocean) ಉತ್ತರ, ಉತ್ತರ ಸಮುದ್ರ (Northern Ocean) ದಕ್ಷಿಣ, ದಕ್ಷಿಣ ಸಮುದ್ರ (Southern Ocean.)

2. Population. ೨. ಜನಸಂಖ್ಯೆ. ೪,೫೦,೦೦,೦೦೦.

3. Divisions ೩. ವಿಭಾಗಗಳು. ಅಮೆರಿಕ ಖಂಡ, ಎರಡು ಮುಖ್ಯವಾದ ಭಾಗಗಳಾಗಿ ವಿಂಗಡಿಸಲ್ಪಟ್ಟದೆ. ೧. ಉತ್ತರ ಅಮೆರಿಕ. ೨. ದಕ್ಷಿಣ ಅಮೆರಿಕ, ಈ ಎರಡು ಭಾಗಗಳಿಗೆ ನಡಿ

ವೆ ಪನೇಮ ಕಂಠ (Isthmus of Panama) ಬರುತ್ತದೆ. ಈ ಎರಡು ಭಾಗಗಳು ಅಲ್ಲದೆ ಅನೇಕ ದೊಡ್ಡ ದ್ವೀಪಗಳು ಅಮೆರಿಕ ಖಂಡಕ್ಕೆ ಸೇರುತ್ತವೆ. ಇವುಗಳಿಗೆ ವೆಸ್ಟ್ ಇಂದಿಯ ದ್ವೀಪಗಳೆಂಬುವ ಹೆಸರುಂಟು (West India Islands.)

೪. ವಿವರ. ಕ್ರಿಸ್ತನ ತರುವಾಯ ೧೪೯೨ನೇ ವ 4. Remarks
ರುಷದ ವರೆಗೂ ಅಮೆರಿಕ ಖಂಡ ವುಂಟೆಂದು ಬೇರೆ ದೇಶಸ್ಥರಿಗೆ ತಿಳಿಯಲಿಲ್ಲ. ಆ ಕಡೆಯಲ್ಲಿ ದೇಶಗಳು ಇರಬೇಕೆಂದು ಭೂಗೋಳ ವಿದ್ಯ ಚೆನ್ನಾಗಿ ತಿಳಿದವನಾದ ಕೊಲಂಬಸ್ (Columbus) ಎಂಬವನಿಗೆ ತೋಚಿತು. ತನ್ನ ಯೋಚನೆಯ ಪ್ರಕಾರ ವುಂಟೋ ಇಲ್ಲವೋ ನೋಡುವದಕ್ಕೆ ಸ್ಪೇನ್ ದೇಶದ ಅರಸನ ಸಹಾಯದಿಂದ ಹಡಗಗಳನ್ನು ಸಿದ್ಧಮಾಡಿ ಬಹಳ ಧೈರ್ಯಪಟ್ಟು ಎಂದೂ ವೊಬ್ಬರು ಹೋಗದಿದ್ದ ಪ್ರಾಂತ್ಯಕ್ಕೆ ಸಮುದ್ರದಮೇಲೆ ಬಹಳಕಾಲ ಪ್ರಯಾಣ ಮಾಡಿದ ತರುವಾಯ ಮೇಲೆ ಹೇಳಿದ ವರುಷದಲ್ಲಿ ದೇಶ ಸಿಕ್ಕಿತು. ಆ ಕಾಲದಲ್ಲಿ ಅಲ್ಲಿದ್ದ ಜನರಲ್ಲಿ, ಕೆಲವರು ಹೂಣರಾಗಿ, ಎಲ್ಲರು ಅಮರ್ಯಾದಸ್ತರಾಗಿಯೂ ವಿದ್ಯವೂ ಚಮತ್ಕಾರವೂ ಇಲ್ಲದವರಾಗಿಯೂ ಇದ್ದರು. ಅವರ ದೇಶವು ಯೂರೋಪಿನ ಖಂಡದವರಿಗೆ ಸಿಕ್ಕಿದಮೇಲೆ ದೇಶವು ಉತ್ತಮವಾದದ್ದೆಂದೂ ಅಲ್ಲಿ ಬಹಳ ಬೆಳ್ಳಿ ಭಂಗಾರ ಮೊದಲಾದ ವೊಳ್ಳೆ ವಸ್ತುಗಳನ್ನು ಸಂಪಾದಿಸ ಬಹುದೆಂದು ತಿಳಿದು ಸ್ಪೇನ್, ಪೋರ್ಚುಗಲ್, ಇಂಗ್ಲಾಂಡ್, ಸೀಮೆಗಳಿಂದ ಅನೇಕರು ಅಲ್ಲಿಗೆ ಹೋಗಿ ದೇಶವನ್ನು ಬರಬರ ತಮ್ಮ ವಶ ಮಾಡಿಕೊಂಡರು. ಪೂರ್ವದಲ್ಲಿ ಅಲ್ಲಿ ಇದ್ದ ಜನರ ವಂಶಸ್ಥರು ಈಗಲು ಇದ್ದಾರೆ. ಆದರೆ

ಯೂರೋಪಿನವರು ಮಾಡಿರುವ ಜಗಳಗಳಿಂದಲೂ ಅನ್ಯಾಯಗಳಿಂದಲೂ ಬಹಳ ಕಡಿಮೆಯಾಗಿದ್ದಾರೆ.

—o—

1. *North America.*

೧. ಉತ್ತರ ಅಮೆರಿಕ.

ಉತ್ತರ ಅಮೆರಿಕದಲ್ಲಿರುವ ಮುಖ್ಯವಾದ ದೇಶಗಳು ಯಾವವಂದರೆ,

೧. ಅನ್ಯೋನ್ಯವಾದ ದೇಶಗಳು (United States)
೨. ಬ್ರಿಟಿಷ್ ಅಮೆರಿಕ (British America)
೩. ರಸ್ಸಿಯನ್ ಅಮೆರಿಕ (Russian America)
೪. ಮೆಕ್ಸಿಕೊ (Mexico)
೫. ಗ್ವಾಟಿಮಾಲ (Guatemala)
೬. ಗ್ರೀನ್ಲಾಂಡ್ (Greenland.)

—o—

1) *United States.*

೧) ಅನ್ಯೋನ್ಯವಾದ ದೇಶಗಳು.

---

1. States. ೧. ದೇಶಗಳು. ಇವು ಇಪ್ಪತ್ತು ನಾಲ್ಕು. ಒಂದೊಂದು ದೇಶದವರು ತಮ್ಮಿಂದ ನೇಮಿಸಲ್ಪಟ್ಟ ಅಧಿಕಾರಸ್ತರಿಂದ ಆಳಲ್ಪಟ್ಟಿದ್ದಾರೆ. ಎಲ್ಲಾ ದೇಶಗಳ ಅಧಿಕಾರಸ್ತರಲ್ಲಿ ಕೆಲವರು ಆಗಾಗ್ಯೆ ಒಂದೇ ಸ್ಥಳದಲ್ಲಿ ಕೂಡಿಬಂದು ಮುಖ್ಯ

ವಾದ ಕಾರ್ಯಗಳನ್ನು ಕುರಿತು ಆಲೋಚನೆ ಮಾಡುತ್ತಾರೆ. ರಾಜ್ಯವೆಲ್ಲಾದರಮೇಲೆ ಒಬ್ಬ ದೊಡ್ಡ ದೊರೆ ಇದ್ದಾನೆ. ಈತನು ೪ ವರುಷಕ್ಕೆ ಒಂದುಸಾರಿ ಪ್ರಜೆಗಳಿಂದ ನೇಮಿಸಲ್ಪಡುವನು.

೨. ಸಂಸ್ಥಾನ. ವಾಶಿಂಗ್ಟನ್ (Washington.) 2. Capital.

೩. ಮುಖ್ಯ ಊರುಗಳು. ಹೊಸ ಯೋರ್ಕ್ (New York) ಹೊಸ ಒರ್ಲೀನ್ಸ್ (New Orleans) ಫಿಲದೆಲ್ಫಿಯಾ (Philadelphia) ಬೋಸ್ಟನ್ (Boston) ಚಾರ್ಲ್ಸ್ಟನ್ (Charleston) ಪಿಟ್ಸಬರ್ಗ್ (Pittsburg) ಸಿಂಸಿನಾಟಿ (Cincinnati) ಇತ್ಯಾದಿ. 3. Chief Towns.

೪. ಬೆಟ್ಟಗಳು. ಅಲ್ಲಿಗೇನಿ ಬೆಟ್ಟಗಳು (Alleghany Mountains) ಗುಡ್ಡದ ಬೆಟ್ಟಗಳು (Rocky Mountains.) 4. Mountains.

೫. ನದಿಗಳು. ಮಿಸ್ಸಿಸಿಪ್ಪಿ (Mississipi) ಮಿಸ್ಸೂರಿ (Missouri) ಆರ್ಕಾನ್ಸಸ್ (Arkansas) ಓಹಿಯೊ (Ohio) ಟೆನೆಸ್ಸಿ (Tenessee) ಹಡ್ಸನ್ (Hudson) ಇತ್ಯಾದಿ. 5. Rivers.

೬. ಕೆರೆಗಳು. ಇವುಗಳಲ್ಲಿ ಕೆಲವು ಬಹಳ ದೊಡ್ಡವು. ಮಿಚಿಗಾನ್ (Michigan) ಕೆರೆ ಮುಖ್ಯ. 6. Lakes.

೭. ಜನಸಂಖ್ಯೆ. ೧,೭೦,೦೦,೦೦೦. 7. Population.

೮. ವಿವರ. ಅನ್ಯೋನ್ಯವಾದ ದೇಶಗಳಲ್ಲಿ (United States) ಇರುವ ಜನರು ಮೊದಲು ಗ್ರೇಟ್ ಬ್ರಿಟನಿನಿಂದ (Great Britain) ಅಮೆರಿಕಕ್ಕೆ ಹೋಗಿ ಒಕ್ಕಲತನ ಮಾಡಿದವರಿಂದ ಹುಟ್ಟಿದರು. ಆದದರಿಂದ ಇಂಗ್ಲೀಷ್ ಜನ 8. Remarks.

People. ರು ಹ್ಯಾಗೆ ಮರ್ಯಾದೆಯೂ ಚಮತ್ಕಾರವೂ ವಿದ್ಯವೂ ವು ಳ್ಳವರಾಗಿದ್ಧಾರೋ ಅವರು ಹಾಗೇನೆ ಇದ್ಧಾರೆ. ಅವರ ಪಟ್ಣಗಳೂ ವೂರುಗಳೂ ಇಂಗ್ಲಾಂಡ್ ದೇಶದ ಪಟ್ಣ ವೂರುಗಳ ಹಾಗೆ ದೊಡ್ಡವೂ ಸೌಂದರ್ಯವೂ ವುಳ್ಳವುಗಳಾಗಿವೆ. ಇಂಗ್ಲಾಂಡಿನಲ್ಲಿ ಚಮತ್ಕಾರವಾದ ಕೆಲಸಗಳೂ ವ್ಯಾಪಾರವೂ ಬಹಳವಾಗಿ ನಡೆಯುವ ಪ್ರಕಾರ ಅಲ್ಲಿ ನಡೆಯುತ್ತದೆ.

Religion. ಅಲ್ಲಿ ರೋಮಾನ್ ಸಭೆಯವರು ಇದ್ಧಾರೆ. ಆದರೆ ಜನರೆಲ್ಲರು ಮುಖ್ಯವಾಗಿ ಪ್ರೊಟೆಸ್ತಾಂಟ್ ಸಭೆಯವರೇ. ಇಂಗ್ಲಾಂಡ್ ದೇಶದವರು ಮಾಡುವ ಪ್ರಕಾರ ಅವರು ಕ್ರಿಸ್ತಮಾರ್ಗ ಬೋಧಕರನ್ನು ಅನೇಕ ಅಜ್ಞಾನವಾದ ದೇಶಗಳಿಗೆ ಕಳುಹಿಸಿ ಸತ್ಯವೇದ ಕಾರ್ಯಗಳನ್ನು ಪ್ರಸಿದ್ಧಮಾಡಿ ಅನೇಕರನ್ನು ಸನ್ಮಾರ್ಗಕ್ಕೆ ತಿರಿಗಿಸುವದರಲ್ಲಿ ಬಹು ಪ್ರಯಾಸ ಪಡುತ್ತಾರೆ.

Slavery. ಆದರೆ ಅಮೆರಿಕ ದೇಶದವರಮೇಲೆ ವೊಂದು ತಪ್ಪು ವುಂಟು. ಯೇನಂದರೆ ಅನೇಕ ಜನರನ್ನು ಗುಲಾಮರಾಗ ಮಾಡಿಕೊಂಡು ಕ್ರೂರವಾಗಿ ಅವರಿಂದ ಕೆಲಸ ತೆಗಿಯುತ್ತಾರೆ. ಮತ್ತು ಈ ಗುಲಾಮರನ್ನು ಆಗಾಗ್ಯೆ ಸಾಮಾನುಗಳಹಾಗೆ ಮಾರಿಬಿಡುತ್ತಾರೆ. ಈ ಕೆಲಸವು ದಕ್ಷಿಣ ದೇಶಗಳಲ್ಲಿ ಮುಖ್ಯವಾಗಿ ನಡೆಯುವದು. ಆದರೆ ಅನೇಕರು ಈ ವ್ಯಾಪಾರವನ್ನೂ ಗುಲಾಮತನವನ್ನೂ ನಿಲ್ಲಿಸಿಬಿಡುವದಕ್ಕೆ ಈಗ ಪ್ರಯತ್ನ ಮಾಡುತ್ತಿದ್ಧಾರೆ.

—o—

2) *British America.*

೨) ಬ್ರಿತಿಷ ಅಮೆರಿಕ.

೧. ವಿಭಾಗಗಳು.	ಮುಖ್ಯ ಊರುಗಳು.	1. Divisions and Chief Towns.
ಹಡ್ಸೊನ್ಸ ಕೊಲ್ಲಿ ದೇಶ (Hudson's Bay Territories)	ಯೋರ್ಕ್ನ್ (York)	
ಲಬ್ರಡೋರ್ (Labrador)	ಕಿಂಗ್ಸ್ಟೋನ್ (Kingston)	
ಮೇಲಿನ ಕನ್ನಡ (Upper Canada)	ಟೊರೊಂಟೊ (Toronto)	
ಕೆಳಗಿನ ಕನ್ನಡ (Lower Canada)	ಕ್ವಿಬೆಕ್ (Quebee) ಮೊಂಟ್ರಿಯಾಲ್ (Montreal)	
ಹೊಸ ಬ್ರಂಸ್ವಿಕ್ (New Brunswick)	ಫ್ರೆಡೆರಿಕ್ಟೋನ್ (Fredericton) ಸಂಟ್ ಜೊನ್ (St. John)	
ನೋವ ಸ್ಕೋಟಿಯ (Nova Scotia)	ಹಾಲಿಫಾಕ್ಸ್ (Halifax)	
ನ್ಯೂಫೌಂಡ್ಲಾಂಡ್ (Newfoundland)	ಸಂಟ್ ಜೊನ್ (St. John)	

ಇದಲ್ಲದೆ ಕೇಪ್ ಬ್ರೆಟೋನ್ (Cape Breton) ಪ್ರಿಂಸ್ ಎಡ್ವಾರ್ಡ್ (Prince Edward) ಬೆರ್ಮ್ಯೂಡ (Bermuda) ಮೊದಲಾದ ದ್ವೀಪಗಳು ಬ್ರಿಟಿಷ್ ಅಮೆರಿಕಕ್ಕೆ ಸೇರುತ್ತವೆ.

2. Rivers. ೨. ನದಿಗಳು. ಸಂಟ್ ಲಾರೆಂಸ್ (St. Lawrence) ನೈಯಾಗರ (Niagara.)

Falls of Niagara. ನೈಯಾಗರ ನದಿಯ ನೀರು ವೊಂದು ಸ್ಥಳದಲ್ಲಿ ವೊಂದು ಬೆಟ್ಟದ ಅರಗಿನ ಮೇಲಿನಿಂದ ಕೆಳಗೆ ೧೬೦ ಅಡಿಗಳಷ್ಟು ದೂರ ಬೀಳುತ್ತದೆ. ಅಲ್ಲಿ ನದಿಯು ಮುಕ್ಕಾಲು ಮೈಲು ಅಗಲವಾಗಿದೆ. ಅಷ್ಟು ನೀರು ಅಷ್ಟು ಯೆತ್ತರದಿಂದ ಬೀಳುವದು ನೋಡುವವರಿಗೆ ಬಹಳ ವಿನೋದವಾಗಿ ಕಾಣಿಸುತ್ತದೆ.

3. Lakes. ೩. ಕೆರೆಗಳು. ಇವುಗಳಲ್ಲಿ ಕೆಲವು ಬಹಳ ದೊಡ್ಡವು. ಸೂಪೀರಿಯರ್ (Superior) ಹ್ಯೂರೋನ್ (Huron) ಈರಿ (Erie) ಒಂಟೇರಿಯೋ (Ontario) ಮುಖ್ಯ.

4. Remarks. ೪. ವಿವರ. ಬ್ರಿಟಿಷ್ ಅಮೆರಿಕ ವಿಸ್ತಾರವಾದ ದೇಶವು.

English Settlers. ಅದರಲ್ಲಿ ಬಹಳ ಭೂಮಿ ಬೀಡಾಗಿದೆ. ಇನ್ನು ಕೆಲವು ಸ್ಥಳಗಳಲ್ಲಿ ಚನ್ನಾಗಿದೆ. ಚನ್ನಾಗಿರುವ ಕಡೆಗಳಲ್ಲಿ ಇಂಗ್ಲೀಷ್ ಜನರು ವಕ್ಕಲುತನ ಮಾಡಿ ಯೂರೋಪಿನಲ್ಲಿರುವ ಪ್ರಕಾರ ದೊಡ್ಡ ವೂರುಗಳನ್ನು ಕಟ್ಟಿದ್ದಾರೆ. ಬಹಳ ವ್ಯಾಪಾರವನ್ನು ವಿಧವಿಧವಾದ ಕೆಲಸಗಳನ್ನೂ ನಡಿಸುತ್ತಾರೆ. ಅಲ್ಲಿರುವ ಇಂಗ್ಲೀಷ್ ಜನರ ಲೆಖ್ಖವು ಹೆಚ್ಚುಕಡಿಮೆ ೧೫,೦೦,೦೦೦. ಇವರು ಮುಖ್ಯವಾಗಿ ಪ್ರೊಟೆಸ್ಟಾಂಟ್ ಸಭೆಯವರಾಗಿದ್ದಾರೆ.

Aborigines. ಇಂಗ್ಲೀಷ್ ಜನರು ಇರದ ಕಡೆಗಳಲ್ಲಿ ಆದೇಶದಲ್ಲಿ ಹುಟ್ಟಿದ ಜನರು ಸ್ಥಿರವಾದ ವೂರುಗಳು ಇಲ್ಲದೆ, ಅಲ್ಲಲ್ಲಿ ತಿರುಗಾಡಿ ಬೇಟೆ ಆಡುವದರಿಂದ ಜೀವನ ಮಾಡಿಕೊಳ್ಳುತ್ತಾರೆ.

—o—

3) *Russian America.*

3) ರಸ್ಸಿಯನ್ ಅಮೆರಿಕ.

ಇದು ವಿಸ್ತಾರವಾದ ದೇಶವು. ಆದರೆ ಸೌಖ್ಯವಾದದ್ದಲ್ಲ. **Description** ಭೂಮಿ ವೊಳ್ಳೇದಲ್ಲ. ದೊಡ್ಡ ವೃಕ್ಷಗಳು ಇಲ್ಲ. ಬಹಳ ಕಾಡು ವುಂಟು. ಜನರು ಬೇಟೆ ಆಡುವದರಿಂದಲೂ ಮೀನುಗಳನ್ನು ಹಿಡಿಯುವದರಿಂದಲೂ ಬದುಕುತ್ತಾರೆ.

—o—

4) *Mexico.*

೪) ಮೆಕ್ಸಿಕೊ.

---

೧. ವಿವರ. ಇದು ದೊಡ್ಡ ಸೌಖ್ಯವಾದ ದೇಶವು. ಅ **1. Description.** ಲ್ಲಿ ಮಾತ್ರ ಸಮುದ್ರದ ದಡದ ಹತ್ತಿರ ಸೌಖ್ಯವಾದದ್ದಲ್ಲ. ಆ ದೇಶದಲ್ಲಿ ಚಿನ್ನವೂ ಬೆಳ್ಳಿಯೂ ಬಹಳವಾಗಿ ಸಿಕ್ಕುವ ಗಣಿಗಳುಂಟು. ಮತ್ತು ಕಬ್ಬಿಣ, ತಾಂಬ್ರ, ಸೀಸ, ತಗಡುಗಳ ಗಣಿಗಳು ವುಂಟು. ಪೂರ್ವದಲ್ಲಿ ಸ್ಪೇನ್ ದೇಶದವರಲ್ಲಿ ಅನೇಕರು ಮೆಕ್ಸಿಕೊ ದೇಶವನ್ನು ವಶಮಾಡಿಕೊಂಡು ಅಲ್ಲಿ ವೊಕ್ಕಲುತನ ಮಾಡಿದರು. ಇವರೂ ದೇಶದಲ್ಲಿ ಹುಟ್ಟಿದ ಜನರೂ ಈಗ ಬೆರಕೆಯಾಗಿದ್ದಾರೆ. ರೋಮಾನ್ ಸಭೆಗೆ ಸೇರಿದವರಾಗಿದ್ದಾರೆ.

೨. ಸಂಸ್ಥಾನ. ಮೆಕ್ಸಿಕೊ (Mexico.) **2. Capital**

3. Chief Towns. ೩. ಮುಖ್ಯ ಪೂರುಗಳು. ಪ್ಯೂಯಾಬ್ಲ (Puebla) ವೇರ ಕ್ರೂಸ್ (Vera Cruz) ಆಕಪಲ್ಕೊ (Acapulco.)

4. Population. ೪. ಜನಸಂಖ್ಯೆ ೭೮,೦೦,೦೦೦.

5. California. ೫. ಕಾಲಿಫೊರ್ನಿಯ ದೇಶವು. ಇದು ಮೆಕ್ಸಿಕೊ ದೇಶಕ್ಕೆ ಸೇರುತ್ತದೆ. ಭೂಮಿ ಪ್ರೊಳ್ಳೇದು. ಚನ್ನಾಗಿ ಪೈರು ಬೆಳೆಸುವದು. ಆದರೆ ಜನಗಳು ವಿಸ್ತಾರವಾಗಿಲ್ಲ. ಅಲ್ಲಲ್ಲಿ ಕಿರುಗಾಡುವ ಬೇರೆಬೇರೆ ಗೋತ್ರಗಳವರು ಇದ್ದಾರೆ.

—o—

5) *Guatemala.*

೫) ಗ್ವಾತಿಮೇಲ.

Description ಇದು ಪೂರ್ವದಲ್ಲಿ ಮೆಕ್ಸಿಕೊ ದೇಶಕ್ಕೆ ಸೇರಿತು. ಅದಕ್ಕೆ ಹೇಳಿದ ವಿವರವು ಇದಕ್ಕೂ ಸರಿ. ಇದರ ಸಂಸ್ಥಾನ. ಗ್ವಾತಿಮೇಲ (Guatemala.) ಈ ಪಟ್ಟದಲ್ಲಿ ೫೦,೦೦೦ ಜನವಿದ್ದಾರೆ. ದೇಶವೆಲ್ಲಾದರಲ್ಲಿ ೨೦,೦೦,೦೦೦ ಜನಗಳುಂಟು.

—o—

6) *Greenland.*

೬) ಗ್ರೀನ್ಲಾಂಡ್.

Description ಇದು ಮಹಾ ಶೀತಸ್ಥಳ. ಜನಗಳು ಬಹಳ ಇಲ್ಲ. ೧೦,೦೦೦ ಮಾತ್ರ ವುಂಟಂತೆ. ಕಷ್ಟದಿಂದ ಜೀವನ ಮಾ

ದುತ್ತಾರೆ. ಈದೇಶವು ಡೆನ್ಮಾರ್ಕ್ (Denmark.) ರಾಜ್ಯಕ್ಕೆ ಸೇರುತ್ತದೆ. ಅಲ್ಲಿಂದ ಕ್ರಿಸ್ತ ಮಾರ್ಗ ಬೋಧಕರು ಗ್ರೀನ್ಲಾಂಡ್ ದೇಶಕ್ಕೆ ಹೋಗಿ ಅಲ್ಲಿ ದೇವರ ವಾಕ್ಯವನ್ನು ಪ್ರಸಿದ್ಧ ಮಾಡಿದ್ದಾರೆ. ಹೀಗೆ ಮಾಡುವದರಲ್ಲಿ ಮೊದಲು ಬಹು ಶ್ರಮಪಟ್ಟರು. ಆದರೆ ದೇವರ ದಯದಿಂದ ಜನರು ಗುಣಪಟ್ಟಿದ್ದಾರೆ. ಮತ್ತು ಆಬೋಧಕರಿಂದ ವಿದ್ಯವನ್ನು ವಿಧವಿಧವಾದ ಕೆಲಸಗಳನ್ನು ಕಲಿತಿದ್ದಾರೆ. ಇದರಿಂದ ಪೂರ್ವದಲ್ಲಿ ಇದ್ದದಕ್ಕಿಂತ ಈಗಲು ಹೆಚ್ಚಾದ ಸಾಖ್ಯವುಂಟು.

—o—

2. *South America.*

೨. ದಕ್ಷಿಣ ಅಮೆರಿಕ.

1. Description and Chief Towns.

೧. ವಿಭಾಗಗಳು.	ಮುಖ್ಯ ಪಟ್ಟಣಗಳು.
ಕೊಲಂಬಿಯ (Columbia)	ಬೊಗೋತ (Bogota) ಕ್ವಿತೋ (Quito.)
ಬ್ರಿಟಿಷ್ ಗೈಯಾನ (British Guiana)	ಜೋರ್ಜ್ ಪಟ್ಣ (George Town)
ಡಚ್ ಗೈಯಾನ (Dutch Guiana)	ಪರಮರೀಬೊ (Paramaribo)
ಫ್ರೆಂಚ್ ಗೈಯಾನ (French Guiana)	ಕೈಯೆನ್ (Cayenne)

బ్రజీల్ (Brazil)	రియో జనీరో (Rio Janeiro) సంసాల్వడోర్ (San Salvador) పెర్నాంబ్యూకో (Pernambuco)
పెరూ (Peru)	లైమ (Lima) కస్కో (Cuzco)
బొలివియ (Bolivia)	చూక్విసాక (Chuquizaça)
పరగ్వే (Paraguay)	అసంషన్ (Assumption)
లాప్లాట (La Plata)	బ్యూయనోస్ ఏర్స్ (Buenos Ayres)
బండ ఓరియెంటల్ (Banda Oriental)	మొంటె విడియో (Monte Video)
చిలి (Chili)	సంటియేగొ (Santiago) వల్పరైసొ (Valparaiso)
పటగోనియ (Patagonia)	పోర్ట్ డిసైర్ (Port Desire)

2. Mountains. ౨. కొండలు. అండీస్ (Andes) బ్రజీల్ కొండలు (Mountains of Brazil.)

Andes. అండీస్ కొండలు బహళ యెత్తైనవి. అవి కొనలలో చింబొరాసొ (Chimborazo) అనే బహు యెత్తైన దగ్గర ౨౧,౪౪౦ అడుగుల యెత్తు. అదర ఏదో మనుష్యులు

ದರು ಈವರಿಗೂ ಹತ್ತಲಿಲ್ಲ. ಅಂಡೀಸ್ ಬೆಟ್ಟಗಳು ೪೦೦೦ ಮೈಲುಗಳ ದೂರವಾಗಿ ಒಂದೇ ಸಾಲಾಗಿ ಬರುತ್ತವೆ. ಅವುಗಳಲ್ಲಿ ಅಗ್ನಿ ಪರ್ವತಗಳುಂಟು. ಈ ಅಗ್ನಿ ಪರ್ವತಗಳಲ್ಲಿ ಕೋಟೋಪಾಕ್ಸಿ (Cotopaxi) ಯೆಂಬುವದು ದೊಡ್ಡದು ಇದು ೧೮,೮೯೦ ಅಡಿಗಳ ಯೆತ್ತರವಾಗಿದೆ.

೩. ನದಿಗಳು. ಅಮಜೋನ್ (Amazon) ಲಾಪ್ಲಾಟ (La Plata) ಇತ್ಯಾದಿ. 3. Rivers.

೪. ದ್ವೀಪಗಳು. ಟಿಯೆರ ಡೆಲ್ ಫ್ಯೂಗೊ (Tierra del Fuego) ಫಾಲ್ಕ್ಲಾಂಡ್ ದ್ವೀಪಗಳು (Falkland Islands) ಇತ್ಯಾದಿ. 4. Islands.

೫. ಮೂಲೆ. ಕೊಂಬು ಮೂಲೆ (Cape Horn.) 5. Cape.

೬. ಜನಸಂಖ್ಯೆ. ೧,೫೦,೦೦,೦೦೦. 6. Population.

೭. ವಿವರ. ದಕ್ಷಿಣ ಅಮೆರಿಕ ಬಹಳ ಒಳ್ಳೇ ಸೀಮೆಯಾಗಿದೆ. ಭೂಮಿ ಚನ್ನಾಗಿ ಫಲಫಲಿಸುವದು. ದೊಡ್ಡ ನದಿಗಳುಂಟು. ದೇಶವೆಲ್ಲಾ ಬಹು ಅಂದವಾಗಿದೆ. ಅಲ್ಲಲ್ಲಿ ಚಿನ್ನ ಬೆಳ್ಳಿ ಕಬ್ಬಿಣ ತಾಂಬ್ರ ತಗಡುಗಳು ಸಿಕ್ಕುವ ಗಣಿಗಳುಂಟು. ಇವು ಮುಖ್ಯವಾಗಿ ಪೆರೂ (Peru) ಚಿಲಿ (Chili) ಬೊಲಿವಿಯ (Bolivia) ದೇಶಗಳಲ್ಲಿ ಅವೆ. 7. Remarks Country.

ಪೂರ್ವದಲ್ಲಿ ಸ್ಪೇನ್ (Spain) ಪೋರ್ಚುಗಲ್ (Portugal) ದೇಶಸ್ಥರು ದಕ್ಷಿಣ ಅಮೆರಿಕ ಸೀಮೆಯನ್ನು ವಶಮಾಡಿಕೊಂಡರು. ಬಹಳ ಕಾಲದವರಿಗೂ ಆ ದೇಶಗಳ ಅರಸುಗಳ ಕೈಕೆಳಗಿದ್ದ ಹೋರಿಕೆಗಳಿಂದ ಆಳಲ್ಪಟ್ಟವು. ಆದ Government.

ರಿ ಈಗ ದಕ್ಷಿಣ ಅಮೆರಿಕದವರು ತಾವು ನೇಮಿಸುವ ಅಧಿಕಾರಸ್ತರಿಂದ ಆಳಲ್ಪಟ್ಟಿದ್ದಾರೆ. ರೋಮನ್ ಸಭೆಯವರಾಗಿದ್ದಾರೆ.

Patagonia. ಪಟಗೋನಿಯ (Patagonia) ದೇಶದಲ್ಲಿ ಮರ್ಯಾದೆಯೂ ವಿದ್ಯೆಯೂ ಇಲ್ಲದ ವಿಧವಿಧವಾದ ಗೋತ್ರಗಳವರು ಇದ್ದಾರೆ. ಇವರು ಸರ್ವ ಭೂಮಿಯಲ್ಲಿರುವವರಿಗಿಂತ ಹೆಚ್ಚಾದ ಉದ್ದವಾದ ಜನರು ಆರುವರೆ ಅಡಿ ಉದ್ದವಾಗಿದ್ದಾರೆ.

---

3. *West India Islands.*

3. ವೆಸ್ಟ ಇಂದಿಯ ದ್ವೀಪಗಳು.

---

1. Islands. ೧. ಇವು ಅನೇಕವು. ಮುಖ್ಯವಾದವು ಯಾವವಂದರೆ, ಜಮೇಕ (Jamaica) ಕ್ಯೂಬ (Cuba) ಸಂತ ಡೊಮಿಂಗೊ (St. Domingo) ಬಹೇಮುಗಳು (Bahamas) ಪೋರ್ಟೊ ರೀಕೊ (Porto Rico) ಕರಿಬ್ಬೀಗಳು (Caribbees) ವರ್ಜಿನ್‌ಗಳು (Virgin Isles) ಅಂಟೀಗ (Antigua) ಗ್ವಾಡಲೋಪ್ (Guadeloupe) ಬಾರ್ಬಡೋಸ್ (Barbadoes ಟ್ರಿನಿಡಾಡ್ (Trinidad.)

2. Population. ೨. ಜನಸಂಖ್ಯೆ, 30,00,000.

3. Remarks 3. ವೆಸ್ಟ ಇಂದಿಯ ದ್ವೀಪಗಳಲ್ಲಿ ಆಗುವ ಫಲಗಳು ಸ್ವಲ್ಪ ಹೆಚ್ಚು ಕಡಿಮೆಯಾಗಿ ಹಿಂದೂಸ್ಥಾನದಲ್ಲಿ ಆಗುವವುಗಳಾಗಿವೆ. ಬಹಳ ಕಾಲದಿಂದ ಯೂರೋಪಿನವರು ಆ ದ್ವೀಪ

ಗಳನ್ನು ವಶ ಮಾಡಿಕೊಂಡು ಅಫ್ರಿಕ ಖಂಡದಿಂದ ತಂದ ಕೂಲಿಯವರಿಂದ ಅವುಗಳ ಭೂಮಿಯನ್ನು ಆರಂಭ ಮಾಡಿಸಿ ಬಹಳ ಲಾಭ ಸಂಪಾದಿಸಿಕೊಂಡಿದ್ದಾರೆ. ಆ ಕೂಲಿಯವರು ಪೂರ್ವದಲ್ಲಿ ಗುಲಾಮರಾಗಿದ್ದರು. ಈಗ ಇಂಗ್ಲಾಂಡ್ ದೇಶದ ದೊರೆತನಕ್ಕೆ ಒಳಗಾಗಿರುವ ದ್ವೀಪಗಳಲ್ಲಿ ಬಿಡುಗಡೆ ಹೊಂದಿದ್ದಾರೆ. ಪೂರ್ವದಲ್ಲಿ ವಿದ್ಯೆಯೂ ಭಕ್ತಿಯೂ ಇಲ್ಲದವರಾಗಿದ್ದರು. ಈಗಲು ಇಂಗ್ಲಾಂಡಿನಿಂದ ಅನೇಕ ಕ್ರಿಸ್ತಮಾರ್ಗ ಬೋಧಕರು ಅವರಲ್ಲಿ ಹೋಗಿ ಪ್ರಸಂಗ ಮಾಡಿರುವದರಿಂದ ವಿದ್ಯೆಯೂ ದೇವ ಭಕ್ತಿಯೂ ಅವರಲ್ಲಿ ಪ್ರಬಲವಾಯಿತು.

—o—

V. *Australia.*
೫. ಆಸ್ಟ್ರೇಲಿಯ.

೧. ಏಷ್ಯದ ಖಂಡದ ಪೂರ್ವ ದಕ್ಷಿಣಗಳ ದಿಕ್ಕುಗಳಲ್ಲಿರುವ ಕೆಲವು ದ್ವೀಪಗಳು ಈ ವಿಭಾಗದಲ್ಲಿ ಸೇರುತ್ತವೆ. 1. Situation

೨. ಈ ದ್ವೀಪಗಳಲ್ಲಿ ಮುಖ್ಯವಾದವು ಯಾವವೆಂದರೆ, 2. Islands and Chief Towns.

ದ್ವೀಪಗಳು.	ಮುಖ್ಯ ಪೂರುಗಳು.
೧) ಆಸ್ಟ್ರೇಲಿಯ (Australia)	ಸಿಡ್ನಿ (Sydney) ಪೆರ್ಥ್ (Perth) ಅಡಿಲೇಡ್ (Adelaide) ವಿಕ್ಟೋರಿಯ (Victoria.)

೨) ವಂದೀಮೆನ್ಸ್ಲಾಂಡ್ } ಹೋಬಾರ್ಟ್ - ಪೂರು
VanDiemen's Land) } (Hobart Town,)

೩) ನ್ಯೂಜೀಲಾಂಡ್ }
(New Zealand) }

೪) ನ್ಯೂಗಿನ್ನಿ }
(New Guinea) }

3. Remarks

Australia.

೩. ವಿವರ. ಆಸ್ಟ್ರೇಲಿಯ, ಸರ್ವ ಭೂಮಿಯಲ್ಲಿರುವ ದ್ವೀಪಗಳಿಗಿಂತ ದೊಡ್ಡದು. ಸಮುದ್ರದ ದಡದ ಹತ್ತಿರ ಇಂಗ್ಲೀಷ್ ಜನರು ಅಲ್ಲಲ್ಲಿ ವಕ್ಕಲುತನ ಮಾಡಿ ದೊಡ್ಡ ಪೂರುಗಳನ್ನು ಕಟ್ಟಿಸಿ ಬಹಳ ವ್ಯಾಪಾರ ನಡಿಸುತ್ತಾರೆ ಆ ದ್ವೀಪದ ಒಳಗಿನ ಭಾಗವನ್ನು ಕುರಿತು ಬಹಳ ವರ್ತಮಾನವಿಲ್ಲ. ವಿದ್ವಾಂಸರು ಇನ್ನು ಅದನ್ನು ಚನ್ನಾಗಿ ಶೋಧಿಸಲಿಲ್ಲ.

Van Diemen's Land and New Zealand.

ವಂದೀಮನ್ಸ್ ಲಾಂಡಿನಲ್ಲಿಯೂ ನ್ಯೂಜೀಲಾಂಡಿನಲ್ಲಿಯೂ ಇಂಗ್ಲೀಷ್ ಜನರು ಹಾಗೆಯೇ ವಕ್ಕಲುತನ ಮಾಡಿ ವ್ಯಾಪಾರ ನಡಿಸುತ್ತಾರೆ. ಇಂಗ್ಲೀಷ್ ಜನರು ನ್ಯೂಜೀಲಾಂಡಿಗೆ ಹೊದದಕ್ಕಿಂತ ಮುಂಚೆ ಅಲ್ಲಿ ಹುಟ್ಟಿದ ಜನರಲ್ಲಿ ಇನ್ನು ಅನೇಕರು ಇದ್ದಾರೆ. ಇವರು ಪೂರ್ವದಲ್ಲಿ ಬಹಳ ಅಜ್ಞಾನಿಗಳಾಗಿದ್ದರು. ಆದರೆ ಇಂಗ್ಲಾಂಡ್ ದೇಶದಿಂದ ಕ್ರಿಸ್ತಮಾರ್ಗ ಬೋಧಕರು ಅವರಲ್ಲಿ ಹೋಗಿ ಪ್ರಸಂಗ ಮಾಡಿರುವದರಿಂದ ಅನೇಕರು ಗುಣಪಟ್ಟಿದ್ದಾರೆ. ಈಗಲು ವಿದ್ಯವೂ ಚಮತ್ಕಾರವೂ ಅವರಲ್ಲಿ ಹೆಚ್ಚುತ್ತಾ ಬರುತ್ತದೆ.

ನ್ಯೂಗಿನ್ನಿ ದ್ವೀಪದ ಜನರು ಮನುಷ್ಯರನ್ನೂ ತಿನ್ನುವವರಾಗಿದ್ದಾರೆ. ಅವರನ್ನು ಕುರಿತು ಬಹಳ ವರ್ತಮಾನವಿಲ್ಲ. New Guinea.

VI. *Polynesia.*

೬. ಪೊಲಿನೀಸಿಯ.

---

೧. ದಕ್ಷಿಣ ಪಸಿಫಿಕ್ ಸಮುದ್ರದಲ್ಲಿರುವ (South Pacific Ocean) ದ್ವೀಪಗಳಿಗೆ ಪೊಲಿನೀಸಿಯ ವೆಂಬುವ ಹೆಸರುಂಟು. 1. Situation

೨. ಈ ದ್ವೀಪಗಳು ಅನೇಕವು. ಮುಖ್ಯವಾದವು ಯಾವವೆಂದರೆ, ಸಂಡ್ವಿಚ್ ದ್ವೀಪಗಳು (Sandwich Islands) ಇವುಗಳಲ್ಲಿ ಮುಖ್ಯವಾದದ್ದು ಓವೈಹೀ (Owhyhee) ಸೊಸೈಟಿ ದ್ವೀಪಗಳು (Society Islands) ಇವುಗಳಲ್ಲಿ ಮುಖ್ಯವಾದದ್ದು ತಹೈತಿ (Tahiti) ನವಿಗೇಟರ್ ದ್ವೀಪಗಳು (Navigator Islands) ಮಾರ್ಕ್ವೀಸ ದ್ವೀಪಗಳು (Marquesas Islands) ಫ್ರೆಂಡ್ಲಿ ದ್ವೀಪಗಳು (Friendly Islands) ನ್ಯೂ ಹೆಬ್ರಿಡೀಸ್ (New Hebrides) ಫೀಜೀ ದ್ವೀಪಗಳು (Feejees.) 2. Islands.

೩. ವಿವರ. ಈ ದ್ವೀಪಗಳಲ್ಲಿ ಬೇರೆ ಬೇರೆ ಗೋತ್ರಗಳವರು ಇದ್ದಾರೆ. ಪೂರ್ವದಲ್ಲಿ ಇವರೆಲ್ಲರು ಬಹು ಅಜ್ಞಾನಿ 3. Remarks

Former state of the people.

ಗಳಾಗಿದ್ದರು. ಆಗಲು ಅವರಲ್ಲಿ ಮರ್ಯಾದೆಯೂ ವಿದ್ಯೆಯೂ ಸ್ವಲ್ಪವಾದರೂ ಇಲ್ಲ. ಒಬ್ಬರಸಂಗಡಲೊಬ್ಬರು ಬಹಳ ಜಗಳ ಮಾಡುತ್ತಿದ್ದರು. ಯುದ್ಧದಲ್ಲಿ ಹಿಡುಕೊಂಡ ಮನುಷ್ಯರನ್ನು ಅಡಿಗೆ ಮಾಡಿ ತಿಂದುಬಿಡುವರು. ಆದರೆ ಇಂಗ್ಲಾಂಡ್ ದೇಶದಿಂದಲೂ ಅಮೆರಿಕ ದೇಶದಿಂದಲೂ ಕ್ರಿಸ್ತಮಾರ್ಗ ಬೋಧಕರು ಅಲ್ಲಿಗೆ ಹೋಗಿ ದೇವರ ವಾಕ್ಯವನ್ನು ಅವರಲ್ಲಿ

Present State.

ಪ್ರಸಿದ್ಧ ಮಾಡಿದದರಿಂದ ಅನೇಕರು ಗುಣಪಟ್ಟಿದ್ದಾರೆ. ಅನೇಕ ದ್ವೀಪಗಳವರು ತಮ್ಮ ಅಜ್ಞಾನವನ್ನೂ ಕೆಟ್ಟ ನಡತೆಗಳನ್ನೂ ಬಿಟ್ಟು ವಿದ್ಯೆದಲ್ಲಿಯೂ ಬೇರೆಬೇರೆ ಕೆಲಸಗಳನ್ನು ಮಾಡುವದರಲ್ಲಿಯೂ ಚಮತ್ಕಾರಿಗಳಾಗಿದ್ದಾರೆ. ಅವರಲ್ಲಿ ಸೌಖ್ಯವೂ ಸಮಾಧಾನವೂ ಪ್ರೀತಿಯೂ ಭಕ್ತಿಯೂ ಪ್ರಬಲವಾ

Cause of Prevalence of Christianity.

ಗುತ್ತಾ ಇವೆ. ಯೇಸು ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ಆತನ ಶಿಷ್ಯರಾಗಿ ನಡಿಯುವದರಿಂದಲೇ ಅವರಲ್ಲಿ ಈ ಸುಫಲ ಬಂತು.

Tahiti.

ಮೊದಲು ಕ್ರಿಸ್ತಮಾರ್ಗ ಬೋಧಕರ ಪ್ರಯಾಸದಿಂದಲೂ ದೇವರ ಆಶೀರ್ವಾದದಿಂದಲೂ ಗುಣಪಟ್ಟವರು ಯಾರಂದರೆ, ತಹೀತಿ (Tahiti) ದ್ವೀಪದವರು. ಅವರು ಗುಣಪಟ್ಟ ಕಾಲವು ಮೊದಲುಗೊಂಡು ಈವರೆಗೂ ಸತ್ಯವೂ ನೀತಿಯೂ ಸಮಾಧಾನವೂ ಸಂದ್ವಿಚ್ (Sandwich.) ದ್ವೀಪಗಳಲ್ಲಿಯೂ ಬೇರೆ ದ್ವೀಪಗಳವರಲ್ಲಿಯೂ ಹೆಚ್ಚುತ್ತಾ ಬಂತು. ಪ್ರೊಟೆಸ್ಟಾಂಟ ಸಭೆಯವರ ಪ್ರಯಾಸದಿಂದ ಇದು

Roman Catholic Missionaries.

ಆಯಿತು. ಆದರೆ ಈಚೆಗೆ ರೋಮಾನ್ ಸಭೆಯವರ ಗುರು

ಗಳು ತಹ್ಯಿತಿ ದ್ವೀಪದಲ್ಲಿಯೂ ಬೇರೆ ದ್ವೀಪಗಳಲ್ಲಿಯೂ ಸೇರಿ
ಕೊಂಡು ಕ್ರಿಸ್ತನ ವಾಕ್ಯಕ್ಕೆ ವಿರೋಧವಾದ ನಡತೆಗಳ
ನ್ನು ಹುಟ್ಟಿಸುತ್ತಾರೆ. ಇದರಿಂದ ಆ ದ್ವೀಪಗಳಲ್ಲಿ ನಡಿದ
ಭರ್ತನು ಕೆಲಸಕ್ಕೆ ಆತಂಕವಾಗುವದಾಗಿ ತೋರುತ್ತದೆ.

APPENDIX.

SCRIPTURE GEOGRAPHY.

ಹಿಂಭಾಗ.

ಸತ್ಯವೇದದಲ್ಲಿ ಹೇಳಿರುವ ದೇಶಗಳು.

1. *Garden of Eden.*

೧. ಏದೇನ್ ತೋಟವು.

Abode of our first parents.

ಇಲ್ಲಿ ದೇವರು ಮೊದಲು ಉಂಟುಮಾಡಿದ ಸ್ತ್ರೀಪುರುಷರಾದ ಆದಾಮನು (Adam) ಹವ್ವಳು (Eve) ಇರಿಸಲ್ಪಟ್ಟರು.

Situation.

ಅದೆಲ್ಲಿ ಇತ್ತೆಂದು ಗೊತ್ತಿಲ್ಲ. ಏಷ್ಯದ ತುರುಕಿಯ ಉತ್ತರ ದಿಕ್ಕಿನಲ್ಲಿರುವ ಆರ್ಮೇನಿಯ (Armenia) ಸೀಮೆಯಲ್ಲಿ ಇತ್ತೆಂದು ಅನೇಕರು ನೆನಸುತ್ತಾರೆ. ಇನ್ನು ಕೆಲವರು ಅದು ಏಷ್ಯದ ತುರುಕಿಯ ದಕ್ಷಿಣ ಭಾಗದಲ್ಲಿ ಇತ್ತೆಂದು ಹೇಳುತ್ತಾರೆ.

Rivers.

ಆ ತೋಟದಲ್ಲಿ ನಾಲ್ಕು ನದಿಗಳಿದ್ದವು. ಇವುಗಳಲ್ಲಿ ಎರಡು ಇದ್ದ ಸ್ಥಳವನ್ನು ಈಗಲು ಗೊತ್ತಾಗಿ ತಿಳಿಯಬಹುದು. ಯಾವವೆಂದರೆ ಯೂಫ್ರೇಟೀಸ್ (Euphrates) ಹಿದ್ದೆ

ಕೆಲ್ (Hiddekel) ಎಂಬವುಗಳು. ಹಿಡ್ಡೆಕೆಲ್ ನದಿಗೆ ಈಗಲು ಟೈಗ್ರಿಸ್ (Tigris) ಎಂಬುವ ಹೆಸರುಂಟು. ಕಡಿಮೆ ಎರಡು ನದಿಗಳು ಯಾವವೆಂದರೆ, ಪೈಸೋನ್ (Pison) ಗೈಹೋನ್ (Gihon) ಇವುಗಳ ಹೆಸರುಗಳು ಈ ಕಾಲದಲ್ಲಿ ಬದಲಾಗಿರುವದರಿಂದ ಎಲ್ಲಿ ಇದ್ದವೋ ಗೊತ್ತಾಗಿ ತಿಳಿಯಕೂಡದು.

—o—

2. *Place where Noah's Ark rested.*

೨. ನೋಹನ ನಾವೆ ನಿಂತ ಸ್ಥಳವು.

ಜಲಪ್ರಳಯವಾದಮೇಲೆ ನೋಹನ ನಾವೆಯು ಅರರಾಟ್ ಬೆಟ್ಟಗಳಮೇಲೆ (Ararat) ನಿಂತಿತು. ಈ ಬೆಟ್ಟಗಳು ಏಷ್ಯದ ತುರುಕಿಯಲ್ಲಿರುವ ಆರ್ಮೀನಿಯ (Armenia) ದೇಶದಲ್ಲಿ ಅವೆ. Mountains of Ararat.

---

3. *Tower of Babel.*

೩. ಬಾಬೆಲಿನ ಗೋಪುರ.

—o—

ಪೂರ್ವದಲ್ಲಿ ಬಾಬಿಲೋನ್ (Babylon) ಪಟ್ಟಣವಿದ್ದ ಸ್ಥಳದ ಹತ್ತಿರ ಈ ಗೋಪುರ ಕಟ್ಟಲ್ಪಟ್ಟಿತು. ಆಸ್ಥಳ ಈಗಲು ಏಷ್ಯದ ತುರುಕಿಯಲ್ಲಿರುವ ಬಾಗ್ದಾಡ್ (Bagdad) ಪೂರಿಗೆ ಸ್ವಲ್ಪ ದೂರವಾಗಿತ್ತು. Its Locality

4. *Locality of Noah's Sons.*

೪. ನೋಹನ ಮಕ್ಕಳು ವಾಸ ಮಾಡಿದ ದೇಶಗಳು.

---

1. Shem.

೧. ಶೇಮ್.

ಇವನ ಸಂತತಿಯವರು ಏಷ್ಯ ಖಂಡದಲ್ಲಿ (Asia) ವಕ್ಕಲುತನ ಮಾಡಿದರು.

2. Ham.

೨. ಹಾಮ್.

ಇವನ ಸಂತತಿಯವರು ಅಫ್ರಿಕ ಖಂಡದಲ್ಲಿ (Africa) ವಕ್ಕಲುತನ ಮಾಡಿದರು.

3. Japhet.

೩. ಯಾಫೆತ್.

ಇವನ ಸಂತತಿಯವರು ಯೂರೋಪಿನಲ್ಲಿಯೂ ಏಷ್ಯ ಖಂಡದಲ್ಲಿಯೂ ವಕ್ಕಲುತನ ಮಾಡಿದರು.

—o—

5. *The Country of Job.*

೫. ಯೋಬನ ದೇಶ.

Land of Uz. ಯೋಬನು, ಊಜ್ (Uz) ದೇಶದಲ್ಲಿ ವಾಸ ಮಾಡಿದನು ಇದು ಎಲ್ಲಿಯೋ ಗೊತ್ತಿಲ್ಲ. ಪಲೆಸ್ತೀನ್ ದೇಶಕ್ಕೂ (Palestine) ಯೂಫ್ರೇಟೀಸ್ ನದಿಗೂ (Euphrates) ಮಧ್ಯದಲ್ಲಿರುವ ಸೀಮೆಯಲ್ಲಿ ಎಲ್ಲಾದರು ಇತ್ತೆಂದು ಅನೇಕರು ನೆನಸುತ್ತಾರೆ.

—o—

6. *Country of Abraham.*

೬. ಅಬ್ರಹಾಮನ ದೇಶ.

ಅಬ್ರಹಾಮನೂ, ಅವನ ಸಮ್ಬಂಧಿಕನಾದ ಲೋಟನೂ (Lot) ಲಾಬಾನನೂ (Laban) ಇವರು ಇದ್ದ ದೇಶಕ್ಕೆ ಮೆಸೊಪ್ಪೊಟೇಮಿಯ, (Mesopotamia) ಕಲ್ದೀಯ (Chaldea) ಪದನರಾಮ್ (Padanaram) ಎಂಬುವ ಹೆಸರುಗಳು ವೇದದಲ್ಲಿ ಉಂಟು. Mesopotamia. Chaldea.

ಈ ಹೆಸರುಗಳು ಒಂದೇ ದೇಶಕ್ಕಾದರೂ ಒಂದಕ್ಕೊಂದು ಸಮೀಪವಾಗಿರುವ ದೇಶಗಳಿಗಾದರೂ ಸೇರುತ್ತವೆ. ಈ ದೇಶಗಳು ಈಗಲು ಏಷ್ಯದ ತುರುಕಿ (Asiatic Turkey) ಎಂದು ಹೇಳಲ್ಪಡುವ ಸೀಮೆಯಲ್ಲಿರುವ ಯೂಫ್ರೇಟೇಸ್ (Euphrates) ನದಿಗೆ ಪೂರ್ವ ದಿಕ್ಕಿನಲ್ಲಿದ್ದವು. Locality.

—o—

7. *Canaan in the time of the Patriarchs.*

೭. ಅಬ್ರಹಾಮ್ ಇಸ್ಸಾಕ್ ಯಾಕೋಬರ ಕಾಲದಲ್ಲಿ ಕಾನಾನ್ ದೇಶವು ಇದ್ದ ರೀತಿ.

---

೧. ಅಲ್ಲಿದ್ದ ಜನರು. 1. Its Inhabitants.

ಅಬ್ರಹಾಮ ಇಸಾಕ್ ಯಾಕೋಬರ ಕಾಲದಲ್ಲಿ ಆಮೊರೀಯರು (Amorites) ಕಾನಾನೀಯರು (Canaanites)

ಪೆರಿಜ್ಜೀಯರು (Perizzites) ಹಿತ್ತೀಯರು (Hittites) ಜೆಬುಸೀಯರು (Jebusites) ಫಿಲಿಷ್ಟಿಯರು (Philistines) ಮೊದಲಾದ ಗೋತ್ರಗಳವರು ಕಾನಾನ್ ದೇಶದಲ್ಲಿ ವಾಸವಾಗಿದ್ದರು.

2. Patriarch's places of abode.

೨. ಅಬ್ರಹಾಮ್ ಇಸಾಕ್ ಯಾಕೋಬರು ಮುಖ್ಯವಾಗಿ ವಾಸ ಮಾಡಿದ ಸ್ಥಳಗಳು.

ದಕ್ಷಿಣ ದಿಕ್ಕಿನಲ್ಲಿದ್ದ ಹೆಬ್ರೋನ್ (Hebron) ಬೇತೆಲ್ (Bethel) ಬೇರ್ಷೆಬ (Beersheba) ಎಂಬುವ ಸ್ಥಳಗಳು.

3. Sodom and Gomorrah.

3. ಸೊದೊಮ್ ಗೊಮೊರ್ರ ಪಟ್ಟಣಗಳು.

ಇವುಗಳಲ್ಲಿದ್ದವರು ಪಾಪಿಷ್ಠರಾದ್ದರಿಂದ ದೇವರು ಆ ಪಟ್ಟಣಗಳನ್ನು ಬೆಂಕಿಯಿಂದ ಸುಟ್ಟುಬಿಟ್ಟನು.

—o—

8 *Israel in Egypt.*

೮. ಇಸ್ರಾಯೇಲ್ಯರು ಮಿಸ್ರಾಯೀಮಿನಲ್ಲಿ ಇರುವದು.

Egypt.

ಇಸ್ರಾಯೇಲ್ಯರು ಬಹಳ ಕಾಲ ಮಿಸ್ರಾಯಿಮ್ (Mitzraim) ದೇಶದಲ್ಲಿ ವಾಸ ಮಾಡಿದರು. ಈ ದೇಶಕ್ಕೆ ಈಗಲು ಈಜಿಪ್ತ್ (Egypt) ಎಂಬುವ ಹೆಸರು ಇದೆ. ಈ ದೇಶದ ವಿವರವನ್ನು ಮೇಲೆ ನೋಡಬಹುದು.

Goshen.

ಇಸ್ರಾಯೇಲ್ಯರು ಮಿಸ್ರಾಯೀಮಿನಲ್ಲಿರುವಾಗ ಗೋಶೆನ್ (Goshen) ಎಂಬುವ ವಿಭಾಗದಲ್ಲಿ ವಾಸ ಮಾಡಿದರು.

ಗೋಶೆನ್ ಭಾಗವು ಮಿಸ್ರ್ಯಾಮ್ ದೇಶದ ಪೂರ್ವ ದಿಕ್ಕಿನಲ್ಲಿ ಇತ್ತು.

—o—

9. *Israel's route to Canaan.*

೯. ಇಸ್ರಾಯೇಲ್ಯರು ಕಾನಾನ್ ದೇಶಕ್ಕೆ ಪಯಣ ಮಾಡಿದ ದಾರಿ.

---

೧. ಹೊರಟ ಸ್ಥಳ.

1. Whence they started.

ರಾಮಸೇಸ್ (Rameses.) ಇದು ಮಿಸ್ರ್ಯಾಮಿನಲ್ಲಿದ್ದ ಒಂದು ಊರು.

೨. ಮುಖ್ಯವಾದ ಮಜಿಲುಗಳು.

2. Principal stages.

೧) ಪೀಹಹೀರೋತ್.

1) Pihariroth.

ಇದರ ಹತ್ತಿರ ದೇವರು ಕೆಂಪು ಸಮುದ್ರದಲ್ಲಿ ತನ್ನ ಜನಂಗೋಸ್ಕರ ದಾರಿ ಮಾಡಿದನು.

೨) ಮಾರಾ.

2) Marah.

ಇದರ ನೀರು ವಿಷವಾದದ್ದು. ಆದದರಿಂದ ಇಸ್ರಾಯೇಲ್ಯರು ಗುಣಗುಟ್ಟಿದರು. ಆಗಲು ಮೋಶೆ ದೇವರಪ್ಪಣೆಯ ಪ್ರಕಾರ ಅದರಲ್ಲಿ ಒಂದು ವಿಧ ಗಿಡ ಹಾಕಿದ ಮೇಲೆ ಶೀಯಾಯಿತು.

೩) ಏಲಿಮ್.

3) Elim.

ಇದು ಸೌಖ್ಯವಾದ ಸ್ಥಳವು. ೧೨ ನೀರಿನ ಬುಗ್ಗೆಗಳೂ, ೭೦ ಖರ್ಜೂರದ ಗಿಡಗಳೂ ಅಲ್ಲಿ ಇದ್ದವು.

4) Wilderness of Sin.

೪) ಸೀನ್ ಅರಣ್ಯ.

ಇಲ್ಲಿ ದೇವರು ತನ್ನ ಜನರ ಭೋಜನಕ್ಕೋಸ್ಕರ ಮನ್ನವೆಂಬುವ (Manna) ಪದಾರ್ಥವನ್ನು ಆಶ್ಚರ್ಯವಿಧವಾಗಿ ಕೊಟ್ಟನು. ಮತ್ತು ಅವರು ಮಾಂಸವನ್ನು ಆಶಿಸಿದ ಕಾರಣ ಲಾವಕ್ಕಿಗಳನ್ನು ಬಹಳವಾಗಿ ಅವರ ದಂಡಿನಲ್ಲಿ ಇಳಿಯುವಹಾಗೆ ಮಾಡಿದನು.

5) Rephidim.

೫) ರೆಪಿಡಿಮ್.

ಇಲ್ಲಿ ದೇವರು ತನ್ನ ಜನರಿಗೋಸ್ಕರ ಬಂಡೆಯೊಳಗಿಂದ ನೀರು ಹರಿಯಮಾಡಿದನು. ಮೋಶೆ ಆ ಬಂಡೆಯನ್ನು ತನ್ನ ಕೋಲಿನಿಂದ ಹೊಡೆಯಲು ನೀರು ಈಚೆಗೆ ಬಂತು.

ಮತ್ತು ಇಲ್ಲಿ ಅಮ್ಲೇಕಿಯರು (Amalekites) ಬಂದು ಇಸ್ರಯೇಲ್ಯರ ಸಂಗಡ ಜಗಳ ಮಾಡಿದರು. ದೇವರ ಸಹಾಯದಿಂದ ಇಸ್ರಯೇಲ್ಯರು ಜಯಿಸಿದರು.

6) Sinai.

೬) ಸಿನಾಯಿ, ಇಲ್ಲವೇ ಹೋರೆಬಿನ ಅರಣ್ಯ.

ಇಲ್ಲಿ ದೇವರು ಭಯಂಕರವಿಧವಾಗಿ ಬೆಟ್ಟದಮೇಲೆ ಪ್ರತ್ಯಕ್ಷವಾಗಿ ನ್ಯಾಯಪ್ರಮಾಣವನ್ನು ಕೊಟ್ಟನು.

7) Kibroth Hattaavah.

೭) ಕಿಬ್ರೋತ್ ಹತ್ತಾವ.

ಇಲ್ಲಿ ತಿರಿಗಿ ಜನರು ಮಾಂಸವನ್ನು ಅಪೇಕ್ಷಿಸಿದಕಾರಣ ದೇವರು ಲಾವಕ್ಕಿಗಳನ್ನು ತಿರಿಗಿ ಅವರ ದಂಡಿನಲ್ಲಿ ಬಹಳವಾಗಿ ಇಳಿಯಮಾಡಿದನು. ಆದರೆ ಜನರ ಗುಣಗುಟ್ಟುವಿಕೆಗಳ ನಿಮಿತ್ತ ದೇವರು ಕೋಪಮಾಡಿ ಅವರಲ್ಲಿ ಅನೇಕರನ್ನು ಅಲ್ಲಿ ಸಂಹಾರ ಮಾಡಿಬಿಟ್ಟನು.

೮) ಹಾಜೆರೋತ್. 8) Hazeroth

ಇಲ್ಲಿ ಮಿರ್ಯಾಮಳು (Miriam) ಮೋಶೆಗೆ ವಿರೋಧವಾಗಿ ಮಾತಾಡಿದ ಕಾರಣ ದೇವರು ಅವಳನ್ನು ಕುಷ್ಟರೋಗದಿಂದ ಬಡಿದನು.

೯) ಕಾದೆಷ್ ಬಾರ್ನೆಯ. 9) Kadesh Barnea.

ಇಲ್ಲಿಂದ ಮೋಶೆ ೧೨ ಮನುಷ್ಯರನ್ನು ಕಾನಾನ್ ದೇಶವನ್ನು ಶೋಧಿಸಿ ನೋಡುವದಕ್ಕೆ ಕಳುಹಿಸಿದನು.

ಇವರು ತಿರಿಗಿ ಬಂದಮೇಲೆ ಜನರು ಅವರು ಹೇಳಿದ ಸಮಾಚಾರಕ್ಕೆ ಭಯಪಟ್ಟು ದೇವರಮೇಲೆ ಅಪನಂಬಿಕೆಯಾಗಿದ್ದು ದೇಶವನ್ನು ಹಿಡಿಯುವದಕ್ಕೆ ಹೋಗದೆ ಇದ್ದ ಕಾರಣ ದೇವರ ಕೋಪವನ್ನು ಎಬ್ಬಿಸಿ ೪೦ ವರುಷ ಆ ಅರಣ್ಯದಲ್ಲಿ ತಿರಿಗಾಡುವದಕ್ಕೆ ಶಾಪ ಹೊಂದಿದರು.

೧೦) ಸಲ್ಮೋನ. 10) Salmonah.

ಇಲ್ಲಿ ಇಸ್ರಾಯೇಲ್ಯರು ದೇವರಿಗೆ ವಿರೋಧವಾಗಿ ಗುಣುಗುಟ್ಟಿದ ಕಾರಣ ದೇವರು ಅವರಲ್ಲಿ ಅಗ್ನಿಸರ್ಪಗಳನ್ನು ಕಳುಹಿಸಿದನು. ಆ ಸರ್ಪಗಳು ಅವರನ್ನು ಕಚ್ಚಿದ್ದರಿಂದ ಅನೇಕರು ಸತ್ತರು. ಆಗಲು ಜನರು ಪಶ್ಚಾತ್ತಾಪ ಪಟ್ಟ ಕಾರಣ ಮೋಶೆ ದೇವರ ಅಪ್ಪಣೆಯಿಂದ ಹಿತ್ತಾಳಿಯ ಸರ್ಪವನ್ನು ಮಾಡಿ ಕಂಭದಮೇಲೆ ಇರಿಸಿದನು. ಅದನ್ನು ನೋಡಿದವರೆಲ್ಲರು ಗುಣವಾದರು.

೧೧) ದೀಬೋನ್ ಗಾಡ್. 11) Dibon-gad.

ಇಲ್ಲಿ ಇಸ್ರಾಯೇಲ್ಯರು ಜಗಳಕ್ಕೆ ಬಂದ ಆಮೋರಿಯರ (Amorites) ಅರಸನಾದ ಸೀಹೋನನನ್ನು (Sihon)

ಬಾಷಾನಿನ (Bashan) ಅರಸನಾದ ಓಗನನ್ನು (Og) ಜಯಿಸಿದರು.

12) Plain of Moab. ೧೨) ಮೋವಾಬಿನ ಮೈದಾನ.

ಇಲ್ಲಿ ಯೆಹೋಷುವನು (Joshua) ಮೋಶೆಯ ತರುವಾಯ ಇಸ್ರಾಯೇಲ್ಯರಿಗೆ ಅಧಿಕಾರಿಯಾಗಿರುವದಕ್ಕೆ ನೇಮಿಸಲ್ಪಟ್ಟಿದ್ದನು.

13) Mount Nebo. ೧೩) ನೇಬೊ ಬೆಟ್ಟ.

ಇದರ ತುದಿಯ ಮೇಲಿನಿಂದ ಮೋಶೆ ಕಾನಾನ್ ದೇಶವನ್ನು ನೋಡಿದ ಮೇಲೆ ಸತ್ತನು.

14) Gilgal. ೧೪) ಗಿಲ್ಗಾಲ್.

ಈ ವೂರಿನ ಹತ್ತಿರ ದೇವರು ತನ್ನ ಜನಗೋಸ್ಕರ ಯೋರ್ದಾನ್ (Jordan) ನದಿಯಲ್ಲಿ ಆಶ್ಚರ್ಯವಿಧವಾಗಿ ದಾರಿ ಮಾಡಿದನು.

15) Jericho. ೧೫) ಯೆರಿಕೋ ವೂರು.

ಇದು ಇಸ್ರಾಯೇಲ್ಯರು ಕಾನಾನ್ ದೇಶದಲ್ಲಿ ಮೊದಲು ಹಿಡಿದ ವೂರು.

16) Ai. ೧೬) ಆಯಿ ವೂರು.

ಇಸ್ರಾಯೇಲ್ಯರು ಕಾನಾನ್ ದೇಶದಲ್ಲಿ ಹಿಡಿದ ಯೆರಡನೇ ವೂರು.

17) Gibeon. ೧೭) ಗಿಬಿಯೋನ್.

ಈ ವೂರಿನವರು ತಮ್ಮನ್ನು ದೂರ ದೇಶಸ್ಥರೆಂದು ತೋರಮಾಡಿ ಇಸ್ರಾಯೇಲ್ಯರ ಸಂಗಡ ವೊಡಂಬಡಿಕೆ ಮಾಡಿದರು.

10. *Canaan in the time of the Judges.*

೧೦ ನ್ಯಾಯಾಧಿಪತಿಗಳ ಕಾಲದಲ್ಲಿ ಕಾನಾನ್ ದೇಶವು ಇದ್ದ ರೀತಿ.

ನ್ಯಾಯಾಧಿಪತಿಗಳ ಕಾಲದಲ್ಲಿ ಕಾನಾನ್ ದೇಶವು ೧೨ ಕುಲದವರಲ್ಲಿ ವಿಭಾಗಿಸಲ್ಪಟ್ಟಿತು. ಈ ಕುಲಗಳ ಹೆಸರುಗಳು ಯಾವವೆಂದರೆ, ೧. ರೂಬೇನ್ (Reuben) ೨. ಗಾಡ್ (Gad) 3. ಮನಸ್ಸೆ (Manasseh) ೪. ಯೆಹೂದ (Judah) ೫. ಬೆನ್ಯಾಮೀನ್ (Benjamin) ೬. ಸಿಮಿಯೋನ್ (Simeon) ೭. ದಾನ್ (Dan) ೮. ಎಫ್ರಾಯಾಮ್ (Ephraim) ೯. ಇಸ್ಸಕಾರ್ (Issachar) ೧೦. ಜೆಬುಲೋನ್ (Zebulon) ೧೧. ಅಷೆರ್ (Asher) ೧೨. ನಾಫ್ತಲಿ (Naphtali.) Division among Twelve Tribes.

—o—

11. *Canaan after the death of Solomon.*

೧೧. ಶಿಲೋಮೋನನ ಮರಣದ ತರುವಾಯ ಕಾನಾನ್ ದೇಶವು ಇದ್ದ ರೀತಿ.

ಶಿಲೋಮೋನನ ಮರಣದ ತರುವಾಯ ಕಾನಾನ್ ದೇಶವು ಎರಡು ರಾಜ್ಯಗಳಾಗಿ ವಿಭಾಗವಾಯಿತು ೧. ಯೆಹೂದದ ರಾಜ್ಯವು. ಯೆಹೂದ, ಬೆನ್ಯಾಮೀನ್ ಕುಲದವರು ಈ ರಾ Kingdoms of Judah and Israel.

ಜ್ಯಕ್ಕೆ ಸೇರಿದರು. ಅದರ ಸಂಸ್ಥಾನವು ಯೆರೂಸಲೆಮ್ (Jerusalem) ೨. ಇಸ್ರಯೇಲ್ ರಾಜ್ಯವು. ಈ ರಾಜ್ಯಕ್ಕೆ ಕಡಿಮೆ ೧೦ ಕುಲದವರು ಸೇರಿದರು. ಅದರ ಸಂಸ್ಥಾನವು ಸಮೇರಿಯ (Samaria.)

—o—

12. *Kingdoms contemporary with Isruel.*

೧೨. ಇಸ್ರಯೇಲ್ಯರ ಕಾಲದಲ್ಲಿದ್ದ ದೊಡ್ಡ ರಾಜ್ಯಗಳು.

---

1. Assyria. ೧. ಅಸ್ಸಿರಿಯ. ಇದು ಈಗಲು ಏಷ್ಯದ ತುರುಕಿ (Asiatic Turkey) ಎಂದು ಹೇಳಲ್ಪಡುವ ಸೀಮೆಯಲ್ಲಿ ಇತ್ತು. ಅದರ ಸಂಸ್ಥಾನ ನಿನಿವೆ (Nineveh.)

2. Babylon. ೨. ಬಾಬಿಲೋನ್. ಇದು ಅದೇ ಪ್ರಾಂತ್ಯದಲ್ಲಿ ಇತ್ತು. ಅದರ ಸಂಸ್ಥಾನವು ಬಾಬಿಲೋನ್ (Babylon.)

3. Tyre. ೩. ಟೈರ್ ಇಲವೆ ಟ್ಸೋರ್. ಇದು ಕಾನಾನ್ ದೇಶದ ಉತ್ತರ ಪಶ್ಚಿಮ (N. W.) ಭಾಗದಲ್ಲಿ ಸಮುದ್ರದ ಧಡದ ಮೇಲಿತ್ತು.

4. Philistines. ೪. ಪಿಲಿಷ್ಟಿಯರು. ಇವರು ಕಾನಾನ್ ದೇಶದ ದಕ್ಷಿಣ ಪಶ್ಚಿಮ (S. W.) ಭಾಗದಲ್ಲಿ ಇದ್ದರು.

5. Edom. ೫. ಈದೋಮ್. ಇದು ಕಾನಾನ್ ದೇಶಕ್ಕೆ ದಕ್ಷಿಣ ಪೂರ್ವ (S. W.) ದಿಕ್ಕಿನಲ್ಲಿ ಇತ್ತು.

6. Moab. Ammon. ೬. ಮೋವಾಬ್. ಅಮ್ಮೋನ್. ಇವು ಕಾನಾನ್ ದೇಶಕ್ಕೆ ಪೂರ್ವಕಡೆಯಾಗಿದ್ದವು.

13. *Palestine in the time of Christ.*

೧೩. ಕಾನಾನ್ ಇಲ್ಲವೇ ಪಲೆಸ್ತೀನ್ ದೇಶವು ಕ್ರಿಸ್ತನ ಕಾಲದಲ್ಲಿ ಇದ್ದ ರೀತಿ.

---

೧. ವಿಭಾಗಗಳು. ಕಾನಾನ್ ಇಲ್ಲವೇ ಪಲೆಸ್ತೀನ್ ದೇಶವು ಕ್ರಿಸ್ತನ ಕಾಲದಲ್ಲಿ ೩ ಭಾಗಗಳಾಗಿ ವಿಂಗಡಿಸಲ್ಪಟ್ಟಿತು. 1. Divisions

೧. ಯೆಹೂದಿಯ (Judea) ೨. ಸಮಾರಿಯ ೩. ಗಲಿಲಾಯ (Galilee.)

೨. ಸಂಸ್ಥಾನವು. ಯೆರೂಸಲೇಮ್ (Jerusalem.) 2. Capital.

೩. ಬೆಟ್ಟಗಳು. ಲೆಬನೋನ್ (Lebanon) ಕಾರ್ಮೆಲ್ (Carmel) ತಾಬೋರ್ (Tabor) ಬಾಷಾನ್ (Bashan) ಗಿಲ್ಯಾದ್ (Gilead) ಗಿಲ್ಬೋವ (Gilboa.) ಇತ್ಯಾದಿ. 3. Mountains.

೪. ಮುಖ್ಯ ಸ್ಥಳಗಳು. 4. Important places.

೧) ಬೆತ್ಲೆಹೇಮ್. ಇದು ಯೇಸು ಹುಟ್ಟಿದ ಊರು. 1) Bethlehem.

೨) ನಜರೇತ್. ಇದು ಯೇಸು ಬೆಳೆದ ಊರು. 2) Nazareth

೩) ಕಪೆರ್ನಾಮ್. ಇದು ಯೇಸು ಬಹಳವಾಗಿ ವಾಸ ಮಾಡಿದ ಊರು. 3) Capernaum.

೪) ಯೊರ್ದನ್ ನದಿ. ಇದರಲ್ಲಿ ಸ್ನಾನಿಕನಾದ ಯೊಹಾನನು ಜನಕ್ಕೆ ಸ್ನಾನ ಕೊಟ್ಟನು. 4) River Jordan.

೫) ಯೆಹೂದಿಯದ ಕಾಡು. ಇಲ್ಲಿ ಯೇಸು ೪೦ ದಿವಸ ಉಪವಾಸವಾಗಿದ್ದು ಸೈತಾನನಿಂದ ಶೋಧಿಸಲ್ಪಟ್ಟನು. 5) Wilderness of Judea.

೬) ಕಾನ. ಇಲ್ಲಿ ಯೇಸು ನೀರನ್ನು ದ್ರಾಕ್ಷಾರಸವಾಗಮಾಡಿದನು. 6) Cana.

7) Nain. ೭) ನಾಯಿನ್. ಈ ಊರಿನ ಹತ್ತಿರ ಯೇಸು ವಿಧವೆಯ ಮಗನ ಹೆಣಕ್ಕೆ ಜೀವ ಕೊಟ್ಟು ಎಬ್ಬಿಸಿದನು.

8) Lake of Gennessaret. Sea of Galilee. ೮. ಗೆನ್ನೆಸರೆತ್ ಕೆರೆ ಇಲ್ಲವೇ ಗಲಿಲೀಯ ಕಡಲು. ಯೇಸು ತನ್ನ ಶಿಷ್ಯರ ಸಂಗಡ ಈ ಕೆರೆಯನ್ನು ಹಡಗದಲ್ಲಿ ದಾಟುತ್ತಿರುವಾಗ ಅವರನ್ನು ಮುಣುಗಿಸತಕ್ಕ ದೊಡ್ಡ ಘಾಳಿ ಹುಟ್ಟುವಾಗ ಆ ಘಾಳಿಯನ್ನು ತನ್ನ ಅಪ್ಪಣೆಯಿಂದ ನಿಲ್ಲಿಸಿಬಿಟ್ಟನು. ಮತ್ತು ಒಂದು ಸಾರಿ ಯೇಸು ಈ ಕೆರೆಯ ನೀರಿನ ಮೇಲೆ ನಡಕೊಂಡು ಹಡಗದಲ್ಲಿದ್ದ ಶಿಷ್ಯರ ಬಳಿಗೆ ಬಂದನು.

9) Bethany. ೯. ಬೇತನಿ. ಈ ಊರಿನಲ್ಲಿ ಯೇಸುವಿನ ಸ್ನೇಹಿತರಾದ ಲಾಜರನೂ ಇವನ ಸಹೋದರಿಗಳಾದ ಮಾರ್ಥಳೂ ಮರೀಯಳೂ ವಾಸ ಮಾಡಿದರು. ಇಲ್ಲಿ ಸತ್ತಿದ್ದ ಲಾಜರನನ್ನು ಯೇಸು ಸಮಾಧಿಯಿಂದ ಎಬ್ಬಿಸಿದನು.

10) Mount of Olives. ೧೦) ಇಪ್ಪಿ ಗುಟ್ಟ. ಇಲ್ಲಿಗೆ ಯೇಸು ಪ್ರಾರ್ಥನೆಗೋಸ್ಕರ ಬಹಳ ಸಾರಿ ಹೋಗುವನು.

11) Gethsemane. ೧೧) ಗೆತ್ಸೆಮನೆ. ಈ ತೋಟದಲ್ಲಿ ಯೇಸು ತಾನು ಶಿಲುಬೆಗೆ ಹಾಕಲ್ಪಡುವದಕ್ಕಿಂತ ಮುಂಚೆ ಆತ್ಮದಲ್ಲಿ ಬಹು ಶ್ರಮೆಪಟ್ಟನು.

12) Arimathea. ೧೨) ಅರಿಮಥೀಯ. ಯೇಸುವಿನ ಶರೀರವನ್ನು ಹೂಳಿಟ್ಟ ಐಶ್ವರ್ಯವಂತನಾದ ಯೋಸೇಫನು ಈ ಊರಿನವನಾಗಿದ್ದನು.

13) Emmaus. ೧೩) ಎಮ್ಮೇಯಸ್. ಯೇಸು ಸಮಾಧಿಯಿಂದ ಎದ್ದ ಮೇಲೆ ಈ ಊರಿಗೆ ಹೋಗುತ್ತಿದ್ದ ಇಬ್ಬರು ಶಿಷ್ಯರಿಗೆ ತನ್ನನ್ನು ತೋರ ಮಾಡಿದನು.

14. *Locality of the First Christian Churches.*

೧೪. ಮೊದಲನೇ ಕ್ರಿಸ್ತ ಸಭೆಗಳು ಇದ್ದ ಸ್ಥಳಗಳು.

---

೧. ಯೆರೂಸಲೇಮ್. ಇದು ಮೊದಲನೇ ಸಭೆ. — **1. Jerusalem.**

೨. ಸಮಾರಿಯ. — **2. Samaria.**

೩. ಕೈಸಾರಿಯ. — **3. Cesarea.**

೪. ಅಂತಿಯೋಕ್. — **4. Antioch.**

೫. ದಮಾಸ್ಕಸ್. ಈ ಊರಿನಲ್ಲಿದ್ದ ಕ್ರಿಸ್ತಿಯರನ್ನು ಶ್ರಮೆಪಡಿಸುವದಕ್ಕೆ ಹೋಗುತ್ತಿದ್ದ ಪೌಲನು ದಾರಿಯಲ್ಲಿ ಯೇಸುವನ್ನು ದರ್ಶನದಲ್ಲಿ ನೋಡಿ ಗುಣಪಟ್ಟನು. — **5. Damascus.**

೬. ಗಲಾತಿಯ — **6. Galatia.**
೭. ಫಿಲಿಪ್ಪಿ — **7. Philippi.**
೮. ಥೆಸ್ಸಲೋನಿಕ — **8. Thessalonica.**
೯. ಕೊರಿಂಥ್ — **9. Corinth.**
೧೦. ಕೊಲೊಸ್ಸೆ — **10. Colosse.**
೧೧. ರೋಮ್ — **11. Rome.**

} ಈ ಸಭೆಯವರಿಗೆ ಅಪೊಸ್ತಲನಾದ ಪೌಲನು ಪತ್ರಿಕೆಗಳನ್ನು ಬರೆದನು. ರೋಮ್ ಸಭೆಯಲ್ಲದೆ ಕಡೆಯವುಗಳೆಲ್ಲಾ ಪೌಲನ ಪ್ರಯಾಸದಿಂದ ಸ್ಥಾಪಿಸಲ್ಪಟ್ಟವು.

೧೨. ಎಫೆಸ (Ephesus) ೧೩. ಸ್ಮುರ್ನ (Smyrna) ೧೪. ಪೆರ್ಗಮೊಸ್ (Pergamos) ೧೫. ತುಯತೀರ (Thyatira) ೧೬. ಸಾರ್ದಿಸ್ (Sardis) ೧೭. ಫಿಲದೆಲ್ಫಿಯ (Philadelphia) ೧೮. ಲವೊದಿಕೈಯ (Laodicea) ಈ ಏಳು ಸಭೆಗಳಿಗೆ ಯೇಸು ಅಪೊಸ್ತಲನಾದ ಯೋಹಾನನಿಂದ ಬುದ್ಧಿ ವಾಕ್ಯಗಳನ್ನು ಪ್ರಕಟಣೆಯ ಪುಸ್ತಕದಲ್ಲಿ ಬರಸಿದ — **Seven Churches of Asia.**

ನು. ಎಫೆಸ (Ephesus) ಸಭೆಗೆ ಅಪೊಸ್ತಲನಾದ ಪೌಲನು ಪತ್ರಿಕೆ ಬರೆದನು.

Countries traversed by Paul.

ಈ ಸಭೆಗಳು ಅಲ್ಲದೆ ಇನ್ನು ಅನೇಕವಿದ್ದವು. ಅಪೊಸ್ತಲರ ಚರ್ಯೆಗಳ ಪುಸ್ತಕದಲ್ಲಿ ಹೇಳಿರುವ ಪ್ರಕಾರ ಅಪೊಸ್ತಲನಾದ ಪೌಲನು ಕಿಲಿಕಿಯ (Cilicia) ಕಪ್ಪದೋಕಿಯ (Cappadocia) ಪೊಂತಸ್ (Pontus) ಫ್ರುಗಿಯ (Phrygia) ಪಿಸಿಡಿಯ (Pisidia) ಪಾಂಫುಲಿಯ (Pamphylia) ಲೈಕಯೋನಿಯ (Lycaonia) ಬಿಥೂನಿಯ (Bithynia) ಮಕೆದೋನಿಯ (Macedonia) ಗ್ರೀಸ್ (Greece) ಮೊದಲಾದ ದೇಶಗಳನ್ನು ಸಂಚರಿಸಿ ಅಲ್ಲಲ್ಲಿ ಕ್ರಿಸ್ತ ಸಭೆಗಳನ್ನು ಸ್ಥಾಪಿಸಿದನು.

ಸಂಪೂರ್ಣವು.

ELEMENTS OF GEOGRAPHY

IN CANARESE.

BY THE REV. B. RICE.

ಭೂಗೋಳಶಾಸ್ತ್ರಸಾರ.

ಬೆಂಗಳೂರಲ್ಲಿರುವ

ರೈಸ್ ಪಾದರಿಯಿಂದ ಬರೆಯಲ್ಪಟ್ಟದ್ದು.

BANGALORE:

PRINTED FOR THE SCHOOL BOOK SOCIETY;

AT THE WESLEYAN MISSION PRESS.

1848.